# ಅಪರಂಜಿ

ತಿಳಿನಗೆಯ ಕಾರಂಜಿ

ಮಾರ್ಚ್ 2020




ಬಿಡಿ ಪ್ರತಿ: ರೂ.10.00



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 37**
**ಸಂಚಿಕೆ – 6**
**ಮಾರ್ಚ್– 2020**

**ಸಂಪಾದಕ ಮಂಡಳಿ**

**ಸಂಪಾದಕರು**
**ಶ್ರೀ ಎಂ. ಶಿವಕುಮಾರ್**

**ಉಪ ಸಂಪಾದಕರು**
**ಶ್ರೀ ಬೇಲೂರು ರಾಮಮೂರ್ತಿ**

**ಸದಸ್ಯರು**
**ಶ್ರೀ ಎಚ್.ಎಸ್. ಆನಂದ**
**ಶ್ರೀ ಎಚ್. ಗೋಪಾಲಕೃಷ್ಣ**

**ಆಡಳಿತ ಮಂಡಳಿ**

**ಮ್ಯಾನೇಜಿಂಗ್ ಟ್ರಸ್ಟಿ**
ಶ್ರೀ ಉಲ್ಲಾಸ ರಾಯಸಂ

**ಟ್ರಸ್ಟಿಗಳು**
ಶ್ರೀ ಎಂ ಶಿವಕುಮಾರ್
ಶ್ರೀ ಬೇಲೂರು ರಾಮಮೂರ್ತಿ
ಶ್ರೀ ವಿ.ಆರ್. ನಾಥ್
ಶ್ರೀ ಎಚ್.ಎಸ್. ಆನಂದ
ಶ್ರೀ ಸಿ.ಆರ್. ಸತ್ಯ
ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**
**ಬಿಡಿ ಪ್ರತಿ: ರೂ. 10/-**
**ವಾರ್ಷಿಕ ಚಂದಾ: ರೂ. 100/-**
**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:
ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:
ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ

## *ಈ ಸಂಚಿಕೆಯಲ್ಲಿ.....*


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ನಮ್ಮ ನಿಮ್ಮಲ್ಲಿ | ಶಿವಕುಮಾರ್ | 3 |
| ಪಮ್ಮಿಯ ಮಾರ್ಜಾಲ ಪ್ರೇಮ | ಆರತಿ ಘಟಿಕಾರ್ | 6 |
| ದಿನಪತ್ರಿಕೆ ಬಾರದ ದಿನ... | ಕೆ.ವಿ. ರಾಜಲಕ್ಷ್ಮಿ | 10 |
| ಜನ್ಮರಹಸ್ಯ! | ನುಗ್ಗೆಹಳ್ಳಿ ಪಂಕಜ | 13 |
| ವೆಂಕಟಪತಿ ಮತ್ತು ಭವಿಷ್ಯ | | 16 |
| ತುಂತುರು | ದಂನಿಅ | 18 |
| ಸಮಯ ಪರಿಪಾಲನೆ | ಎಚ್.ಶಾಂತರಾಜ ಐತಾಳ್ | 19 |
| ಬಾವಿ ಕಟ್ಟೆ ಮಾತು | ಸುಕೇಶವ | 11 |
| ಅಡುಗೆ ಮನೆ ಕಲಾವಿದರು | (ಇಂಟರ್ನೆಟ್) | 25 |
| ಟ್ರಬಲ್ ಸಾರ್ ಟ್ರಬಲ್ಲು | ಬೆಂಗಸ್ಸೂರ್ ನಾಗ್ರಾಜ್ | 26 |
| ಹಾಯ್..! ಎಮೋಜಿ | ಜಿ. ಎನ್. ಮೋಹನ್ | 27 |
| 'ಆಕಾಶವಾಣಿ' ಎಂಬ.... | ಎಂ. ಆರ್. ಕಮಲ | 31 |
| ನಗುವಿಗೊಂದು ... ಬೇಕೆ? | ಎಚ್.ಆರ್.ಹನುಮಂತ ರಾವ್ | 35 |


**ಮುಖಪುಟ ವ್ಯಂಗ್ಯಚಿತ್ರ :**
**ಸುನಿಲ್ ಅಗರ್‌ವಾಲ್ ಮತ್ತು ಅಜಿತ್ ನಿನಾನ್**

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ,
ಬೆಂಗಳೂರು – 560 003. ಸಂಪರ್ಕ : email: koravanjiaparanji@gmail.com ದೂ: 9845264304

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ,
ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್,
ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ : ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ : ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಸೇನಾ ಕಮಾಂಡ್‌ಗೆ ಮಹಿಳೆಯರು – ಸುದ್ದಿ

**ಅಪರಂಜಿ ನಲಿದಾಡಿದಳಂತೆ!!**

★★★

ಅಮೆರಿಕಾದಲ್ಲಿ ಯೋಗ ವಿದ್ಯಾಲಯವನ್ನು ಸ್ಥಾಪಿಸಲಿರುವ

**ವಿವೇಕಾನಂದ ಕೇಂದ್ರಕ್ಕೆ ಅಪರಂಜಿಯ ಶುಭಾಶಯಗಳು!!**

★★★

ಹಗಲು ರಾತ್ರಿ ಕ್ರಿಕೆಟ್ ಟೆಸ್ಟ್ ಪಂದ್ಯ – ಸುದ್ದಿ

**ಅಂಪೈರುಗಳು ಎಚ್ಚರದಿಂದ ಇರಬೇಕಾಗುತ್ತೆ!!**

★★★

**ಅತಿ ಸೂಕ್ಷ್ಮವಾದ ಆರ್.ಎನ್.ಎ. ತುಣುಕೊಂದು, ಜಗತ್ತನ್ನೆಲ್ಲ ತಲ್ಲಣಗೊಳಿಸುತ್ತಿದೆಯಲ್ಲ ಎಂದು ಅಪರಂಜಿ ಚಕಿತಳಾದಳಂತೆ!!**

★★★

ನಗರಕ್ಕೆ 50 ಮಹಿಳಾ ಪೊಲೀಸ್ ಬೊಂಬೆಗಳು – ಪತ್ರಿಕೆ

**ಅವನ್ನೇ ನೋಡುತ್ತಾ ಅಪಘಾತ !?**

★★★

ಹಬ್ಬದ ಹಿನ್ನೆಲೆ; ಹೂವು, ಹಣ್ಣು ದರ ಏರಿಕೆ – ಪತ್ರಿಕೆ

**ಶಿವ, ಶಿವಾ!!**

★★★

ಟ್ರಂಪ್ ಕಾರ್ಯಕ್ರಮಕ್ಕೆ 85 ಕೋಟಿ – ಸುದ್ದಿ

**ಆತ ಭಾರತಕ್ಕೆ ಯಾವ ಕಾರ್ಡ್ ತೋರಿಸುತ್ತಾರೋ?!**

★★★

ಪಾಲಿಟೆಕ್ನಿಕ್ ಉಪನ್ಯಾಸಕರಿಗೆ ಶೀಘ್ರವೇತನ ಭರವಸೆ – ಪತ್ರಿಕೆ

**ಭರವಸೆಯಿಂದಲೇ ಭಯ?!**

★★★

# ನಮ್ಮ ನಿಮ್ಮಲ್ಲಿ

● ಶಿವಕುಮಾರ್

ಸಂದೇಶ ಪ್ರಶಸ್ತಿಯನ್ನು ಸ್ವೀಕರಿಸಲು ನಾನು ಮಂಗಳೂರಿಗೆ ತೆರಳುವ ಸುದ್ದಿ ಕೇಳಿ, ನನ್ನ ಆಪ್ತಮಿತ್ರರಾದ ಕು.ಗೋ ನನ್ನನ್ನು ಎಂಟನೆಯ ತಾರೀಖು ಸಂಜೆ ಉಡುಪಿಯಲ್ಲಿನ ಸುಹಾಸಂ ಸಮಾರಂಭದಲ್ಲಿಯೂ ಪಾಲ್ಗೊಳ್ಳುವಂತೆ ಆಹ್ವಾನಿಸಿದರು. ಉಡುಪಿ ಮತ್ತು ಮಂಗಳೂರು, ಎರಡೂ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದಕ್ಕೆ ಅನುಕೂಲವಾಗಲೆಂದು ನಾನು ನನ್ನ ಬಂಧು ನಾಗೇಶ್ ಮತ್ತು ಗೀತಾ ಅವರೊಟ್ಟಿಗೆ ಸುರತ್ಕಲ್ಲಿನಲ್ಲಿ ತಂಗಿದ್ದೆ. ಬಹು ಆತ್ಮೀಯತೆಯಿಂದ ಉಪಚರಿಸಿದ ನಾಗೇಶ್ ದಂಪತಿಗಳು ನನ್ನ ಎಲ್ಲ ಓಡಾಟದ ವ್ಯವಸ್ಥೆಯನ್ನು ನೋಡಿಕೊಂಡಿದ್ದರು. ಉಡುಪಿಯಲ್ಲಿ ಶನಿವಾರ ಸಂಜೆ ನಡೆಯುವ ಕಾರ್ಯಕ್ರಮಕ್ಕೆ ಅಂದು ಬೆಳಗ್ಗೆಯೇ ನಾವು ಉಡುಪಿಗೆ ಹೊರಟೆವು. ಮೊದಲು ಉಡುಪಿಯ ಕೃಷ್ಣನ ದರ್ಶನವಾಗಲೇ ಬೇಕಲ್ಲ. ಕಾರಿನಲ್ಲಿ ಉಡುಪಿಗೆ ಹೋಗುತ್ತಿದ್ದಾಗ ಗೀತಾ ಸುಶ್ರಾವ್ಯವಾದ ದೇವರನಾಮಗಳನ್ನು ಕಾರಿನ ಮ್ಯೂಸಿಕ್ ಸಿಸ್ಟಮ್ಮಿನಲ್ಲಿ ಹಾಕಿದ್ದಳು. ಅಂತಹ ಸುಮಧುರವಾದ ಕಂಠಸಿರಿ ಬಹು ಅಪರೂಪ ಅನ್ನಿಸಿತು. ''ಯಾರದ್ದು ಹಾಡುಗಾರಿಕೆ?'' ಅಂತ ಗೀತಾಳನ್ನು ಕೇಳಿದೆ. ''ನನ್ನ ಅಕ್ಕನ ಮಗಳು ರಂಜನಿಯದು. ಅವಳು ಉಡುಪಿಯಲ್ಲಿ ಇಂಜಿನಿಯರಿಂಗ್ ಓದುತ್ತಿದ್ದಾಳೆ'' ಎಂದಳು ಗೀತಾ. ಮುಂದುವರಿದು, ''ನಮ್ಮ ತಾಯಿ ಗಂಗಮ್ಮ ಸಂಗೀತ ಶಿಕ್ಷಕಿಯಾಗಿದ್ದರು. ಅವರು ಹಾಡುವಾಗಲೆಲ್ಲಾ ಅಜ್ಜಿಯ ತೊಡೆಯ ಮೇಲೆ ಮಲಗಿರುತ್ತಿದ್ದ ರಂಜನಿಗೆ ತಾನಾಗಿಯೇ ಸಂಗೀತ ಒಲಿದು ಬಂತು'' ಎಂದಳು. ಉಡುಪಿ ಸೇರಿ ದೇವರ ದರ್ಶನವಾದ ನಂತರ ನಾವು ಇಂದ್ರಾಳಿಯಲ್ಲಿದ್ದ ಗೀತಾಳ ತಂದೆಯ ಮನೆಗೆ ಹೋದೆವು.

ನಡುಮನೆಯ ಸೋಫಾದ ಮೇಲೆ ಒಬ್ಬ ಕಿರಿಯ ತರುಣಿ ಎಲ್ಲ ಕಿರಿಯ ತರುಣಿಯರಂತೆ ಮೊಬೈಲ್‌ನಲ್ಲಿ ವಾಟ್ಸಾಪ್ ನೋಡುತ್ತಾ ವಿರಮಿಸಿದ್ದಳು. ಗೀತಾ ಅವಳಿಗೆ ನನ್ನನ್ನು ಪರಿಚಯಿಸಿದ ನಂತರ, ನಾನು ''ನಿನ್ನ ಹಾಡುಗಾರಿಕೆ ಅದ್ಭುತ ರಂಜನಿ. ಅದರಲ್ಲೂ ''ಕೃಷ್ಣನ ನಾ ಕಂಡೆ ಹಾಡನ್ನ ಬಹು ಭಕ್ತಿಯಿಂದ ಹಾಡಿದ್ದೀಯ'' ಅಂತ ಮೆಚ್ಚುಗೆಯ ಮಾತನ್ನು ಹೇಳಿದೆ. ಒಡನೆಯೇ ಯಾವ ಸಂಕೋಚವೂ ಇಲ್ಲದೇ, ರಂಜನಿ, ತನ್ನ ಮೊಬೈಲ್‌ನಲ್ಲಿ ತಂಬೂರಿ ಶೃತಿ ಹಾಕಿ ನನಗಾಗಿ ಆ ಹಾಡನ್ನು ಹಾಡಲು ಪ್ರಾರಂಭಿಸಿದಳು. ಅವರೆಲ್ಲರೊಂದಿಗೆ ಸ್ವಲ್ಪ ಕಾಲ ಕಳೆದು ಸಂಜೆಯ ಕಾರ್ಯಕ್ರಮಕ್ಕೆ ಹೊರಡಲು ಅವರನ್ನು ಬೀಳ್ಕೊಡುವಾಗ, ರಂಜನಿ ನನ್ನ ಪಾದ ಮುಟ್ಟಿ ನಮಸ್ಕರಿಸಿದ್ದನ್ನು ನೋಡಿದಾಗ ''ಪರವಾಗಿಲ್ಲ, ನಮ್ಮ ಸಂಸ್ಕೃತಿ, ನಮ್ಮ ಮೌಲ್ಯಗಳು ಇಲ್ಲಾದರೂ ಜೀವಂತವಾಗಿ ಕಂಗೊಳಿಸುತ್ತಿವೆಯಲ್ಲಾ'' ಅನ್ನಿಸಿದ್ದು ನಿಜ.




ಕಿದಿಯೂರು ಹೋಟೆಲ್ಲಿನ ಪವನ್ ರೂಫ್‌ಟಾಪಿನಲ್ಲಿ ಸುಹಾಸಂ ಸಮಾರಂಭ ಏರ್ಪಟ್ಟಿತ್ತು. ಬಹು ಸಮಯದ ನಂತರ ಗೋಪಾಲಭಟ್ಟರು, ಶಾಂತರಾಜ ಐತಾಳ್, ಕೆ.ಪಿ. ರಾವ್, ವಿಶ್ವನಾಥ ಶೆಣೈ, ಮತ್ತಿತರ ಗೆಳೆಯರ ಭೇಟಿ ಸಂತಸದಾಯಕವಾಗಿತ್ತು. ಹಿಂದೊಮ್ಮೆ ಅಪರಂಜಿಯ ಸಮಾರಂಭವೊಂದರಲ್ಲಿ ಭಾಗವಹಿಸಿದ್ದ ಸಂಧ್ಯಾ ಶೆಣೈ ಅವರೂ ಸಹಾ ಅಲ್ಲಿದ್ದರು. ಕಾರ್ಯಕ್ರಮವನ್ನು ಶ್ರೀನಿವಾಸ ಉಪಾಧ್ಯ ಬಹು ಅಚ್ಚುಕಟ್ಟಾಗಿ ನಿರ್ವಹಿಸಿದರು. ಐತಾಳರು ಅಪರಂಜಿಗಾಗಿ ಇಪ್ಪತ್ತು ಹೊಸ ಸದಸ್ಯರನ್ನು ನೋಂದಾಯಿಸಿ ಹಾಸ್ಯ ಸಂಸ್ಕೃತಿಯ ಹರಡುವಿಕೆಗೆ ಇಂಬುಕೊಟ್ಟರು. ಹಾಸ್ಯ ಸಾಹಿತ್ಯ ಪತ್ರಿಕೆಗಳು ನಡೆದು ಬಂದ ದಾರಿ, ಕೊರವಂಜಿ ಅಪರಂಜಿ ಪತ್ರಿಕೆಗಳ ಅವಲೋಕನ ಎಂಬ ವಿಷಯವನ್ನು ಕುರಿತು ಒಂದು ಸ್ವಾರಸ್ಯವಾದ ಸಂವಾದ ನಡೆಯಿತು. ಭಾಷಣಗಳ ನಂತರ ನಡೆದ ಪ್ರಶ್ನೋತ್ತರಗಳ ಸಮಯ ಯಶಸ್ವಿಯಾಗಿದ್ದಕ್ಕೆ ನೆರೆದಿದ್ದ ಸಭಿಕರೇ ಕಾರಣ. ಒಟ್ಟಿನಲ್ಲಿ ಹಳೆಯ ಗೆಳೆಯರನ್ನು ಭೇಟಿಮಾಡಿ, ಯುವ ಪೀಳಿಗೆಯ ಉತ್ಸಾಹವನ್ನು ನೋಡಿ ಆನಂದಿಸಿ, ಉಡುಪಿಯಿಂದ ಹೊರಟೆವು.

ಮಾರನೆಯ ದಿನ ಸಂಜೆ ಮಂಗಳೂರಿನ ಬಜ್ಜೋಡಿಯಲ್ಲಿರುವ ಸಂದೇಶ ಭವನದಲ್ಲಿ ಪ್ರಶಸ್ತಿ ಸಮಾರಂಭ ಏರ್ಪಟ್ಟಿತ್ತು. ಸಂಜೆ ಐದು ಘಂಟೆಗೆ ನಾನು ನನ್ನ ಎಸ್ಕಾರ್ಟ್ ದಂಪತಿಗಳೊಡನೆ ಸಂದೇಶ ಪ್ರತಿಷ್ಠಾನ ಭವನವನ್ನು ಸೇರಿದೆ. ಅವರ ಮಗಳು ಅನುಷಾ ಕೂಡಾ ನಮ್ಮೊಡನಿದ್ದಳು. ನಾನು ಒಳಕ್ಕೆ ಹೋದೊಡನೆಯೇ, ಶ್ರೀಯುತ ನಾ.ದಾ. ಶೆಟ್ಟಿ, ಶ್ರೀಮತಿ ಚಂದ್ರಕಲಾ ನಂದಾವರ್ ಇವರು ನನ್ನನ್ನು ಬಹು ಆತ್ಮೀಯವಾಗಿ ಬರಮಾಡಿಕೊಂಡರು. ನಾ. ಡಿಸೋಜಾ ಅವರದ್ದು ನನಗೆ ಬಹು ಹಳೆಯ ಪರಿಚಯ ಹಾಗಾಗಿ ಅವರೊಂದಿಗಿನ ಭೇಟಿ ಬಹು ಅಪ್ಯಾಮಾನವಾಗಿತ್ತು. ಸ್ವಲ್ಪ ಹೊತ್ತಿನಲ್ಲೇ ಬೊಳುವಾರರು ನಮ್ಮನ್ನು ಸೇರಿದರು. ಎಲ್ಲ ಗಣ್ಯರು ಬಂದನಂತರ ಸಮಾರಂಭ ಪ್ರಾರಂಭವಾಯಿತು. ಸಂದೇಶ




ಕಥೋಲಿಕ ಸಂಸ್ಥೆಯಾಗಿದ್ದರೂ ಪ್ರಾರಂಭದ ಪ್ರಾರ್ಥನೆ ವಿದ್ಯಾ ದೇವಿ ಶಾರದೆಯನ್ನು ಕುರಿತದ್ದಾಗಿತ್ತು. ಇಡೀ ಕಾರ್ಯಕ್ರಮ ಬಹು ಶಿಸ್ತಿನಿಂದ ನಡೆಯಿತು. ಬಳ್ಳಾರಿ ಧರ್ಮಪ್ರಾಂತ್ಯದ ಸರ್ವಮಾನ್ಯ ಶ್ರೀಯುತ ಹೆನ್ರಿ ಡಿಸೋಜ ಅವರ ಅಧ್ಯಕ್ಷ ಭಾಷಣ ಮೌಲ್ಯಯುತವಾಗಿದ್ದು ಸರ್ವಧರ್ಮ ಸಮನ್ವಯ ಎಂಬ ಮಾತಿಗೆ ನಿದರ್ಶನವಾಗಿತ್ತು. ಅಂದ ಹಾಗೆ ಸಂದೇಶ ಕಲಾ ಪ್ರಶಸ್ತಿಯನ್ನು ಪಡೆದ, ನಾಟ್ಯಕಲೆಯಲ್ಲಿ ಪರಿಣಿತರಾದ ಡಾ॥ ಕೆ.ಎಸ್. ಪವಿತ್ರ ಅವರು ಮತ್ತು ಅವರ ತಂದೆ ಡಾ॥ ಶ್ರೀಧರ್ ಅವರು ನನ್ನೊಂದಿಗೆ ಮಾತನಾಡುವಾಗ ರಾ.ಶಿ.ಯವರನ್ನು, ಮತ್ತು ಮನಶಾಸ್ತ್ರಕ್ಕೆ ಅವರು ನೀಡಿರುವ ಕೊಡುಗೆಯನ್ನು ಬಹುವಾಗಿ ನೆನಪಿಸಿಕೊಂಡರು.

ಪ್ರಶಸ್ತಿ ಸ್ವೀಕರಿಸಿದನಂತರ ನಾನು ಒಂದೆರಡು ಮಾತುಗಳನ್ನಾಡಬೇಕಾಯಿತು. ಆಗ ನಾನು ಹೇಳಿದ್ದಿಷ್ಟು. ''ಸಂದೇಶ ಪ್ರತಿಷ್ಠಾನವು ನನಗೆ ನೀಡಿರುವ ಈ ಪ್ರಶಸ್ತಿ ಎಲ್ಲ ಹಾಸ್ಯಪ್ರಿಯರಿಗೆ ಸಂದ ಗೌರವ ಎಂದು ನಾನು ಭಾವಿಸುವೆ. ಈ ಪ್ರಶಸ್ತಿಗಾಗಿ ಮತ್ತು ಆ ಮೂಲಕ ಹಾಸ್ಯ ಸಾಹಿತ್ಯಕ್ಕೆ ನೀಡಿರುವ ಒಂದು ಗೌರವಕ್ಕಾಗಿ ನನ್ನ ಕೃತಜ್ಞತೆಗಳನ್ನು ಅರ್ಪಿಸಿ ಈ ಎರಡು ಮಾತುಗಳನ್ನು ಮುಗಿಸುವೆ.''

ಏಪ್ರಿಲ್ ಐದರಂದು ಭಾನುವಾರ ಬೆಳಗ್ಗೆ ಹತ್ತೂವರೆಗೆ **ಅಪರಂಜಿ ಹಬ್ಬ**ವನ್ನು ಆಚರಿಸುತ್ತಿದ್ದೇವೆ. ಜಯನಗರದ ನ್ಯಾಶನಲ್ ಕಾಲೇಜಿನ ಎಚ್ಚೆನ್ ಹಾಲ್‌ನಲ್ಲಿ ನಡೆಯುವ ಈ ಅರ್ಧ ದಿನದ ಸಮಾರಂಭದ ವಿವರಗಳನ್ನು ಈ ಸಂಚಿಕೆಯಲ್ಲಿ ಬೇರೊಂದೆಡೆ ನೀಡಲಾಗಿದೆ. ಖಂಡಿತ ಸಮಾರಂಭಕ್ಕೆ ಬನ್ನಿರೆಂದು ಆದರದ ಆಹ್ವಾನ.

■

# ಪಮ್ಮಿಯ ಮಾರ್ಜಾಲ ಪ್ರೇಮ

● ಆರತಿ ಘಟಿಕಾರ್

ರೀ! ಎನ್ನುವ ಮಡದಿಯ ಪ್ರೀತಿಯ ಕರೆಗೆ ಗಂಡ ಪರ್ಮಿ ಅಲಿಯಾಸ್ ಪರಮೇಶ್ವರನ ಕಿವಿ ಕೊಂಚ ಜಾಗೃತವಾಯಿತು .

ಪರ್ಮಿ ಎನ್ನುವ ಅಡ್ಡ ಹೆಸರಿನಿಂದಲೆ ಅಧಿಕಾರವಾಣಿಯಿಂದ ಆಗಾಗ ತನ್ನನ್ನು ಕರೆಯುತ್ತಿದ್ದ ಮಡದಿ ಪಮ್ಮಿ ಅಲಿಯಾಸ್ ಪ್ರಮೀಳಾಳ ರೀ ಎನ್ನುವ ಸಂಭೋದನೆಯಲ್ಲಿ ಏನಾದರೂ ಹೊಸ ಬೇಡಿಕೆ, ಅಹವಾಲು, ಅಣತಿಗಳು ಇರಲೇಬೇಕು ಎಂಬ ದೂರಾಲೋಚನೆ ಅವನ ಬಳಿ ಸುಳಿದಾಡಿತು.

ಮತ್ತೊಮ್ಮೆ ರೀ! ನನ್ನ ಗೆಳತಿ ಕೀರ್ತಿ ಗೊತ್ತಲ್ಲ! ಅವರ ಮನೆ ಬೆಕ್ಕು ಅದೇ ನಮ್ಮ ಅಪಾರ್ಟ್ಮೆಂಟಿನ ಕ್ಯಾಟ್ ಶೋನಲ್ಲಿ ಮೊದಲ ಬಹುಮಾನ ಗೆದ್ದುಕೊಂಡಿತ್ತಲ್ಲ, ಅದು ಮೂರು ಮರಿ ಹಾಕಿದೆಯಂತೆ, ನಾವೂ ಒಂದು ಮರಿ ಸಾಕೋಣವಾ ಅವನ ಹತ್ತಿರ ಸರಿದು ಪ್ರೀತಿಯಿಂದ ಉಲಿದಾಗ ಬೆಕ್ಕಿನಂತೆಯೇ ಟಣ್ಣನೆ ಎಗರಿ ಬೀಳುವಂತಾಯಿತು ಪರ್ಮಿಗೆ!

ಅಯ್ಯೋ ಬೇಡಮ್ಮ ಮಾರಾಯತಿ, ನನಗೆ ಬೆಕ್ಕುಗಳನ್ನ ಮನೇಲಿ ಸಾಕೋದು ಅಂದ್ರೆ ಸ್ವಲ್ಪನೂ ಇಷ್ಟ ಆಗೋಲ್ಲ ಎಂದು ಖಡಾಖಂಡಿತವಾಗಿ ಅವಳ ಆಸೆಯನ್ನು ನಕಾರಿಸಿದಾಗ ಪಮ್ಮಿಯ ಮುಖಾರವಿಂದ ಸಪ್ಪಗಾಯಿತು.

ಲಿಂಗ ಮೆಚ್ಚಿ ಅಹುದಹುದು ಎನ್ನಬೇಕು ಎನ್ನುವ ಬಸವಣ್ಣನವರ ವಚನದ ಕೊನೆಯ ಸಾಲನ್ನು ಮಾತ್ರ ಶ್ರದ್ಧಾ ಭಕ್ತಿಯಿಂದ ನೆನಪಿಟ್ಟುಕೊಂಡು ತನ್ನ ಪತಿ ಪರಮೇಶ್ವರ ತನ್ನ ಮಾತಿಗೆಲ್ಲ ಮೆಚ್ಚುಗೆ ತೋರಿ ಗ್ರೀನ್ ಸಿಗ್ನಲ್ ಕೊಡಬೇಕು ಎಂದು ಆಶಿಸುವ ಮುಗ್ಧ ಮಡದಿ ಪಮ್ಮಿ!

ಆದರೆ ಎರಡು ವರ್ಷಗಳ ಹಿಂದೆ ಅವರಿಬ್ಬರ ಮದುವೆಗೆ ಮುನ್ನ ಸಾಕು ಪ್ರಾಣಿಗಳು ಅದರಲ್ಲೂ ಬೆಕ್ಕು ಅಂದ್ರೆ ನನಗೆ ತುಂಬಾ ಇಷ್ಟ, ಎಷ್ಟು ಮುದ್ದಾಗಿರುತ್ತೆ! ಎಂದೆಲ್ಲ ಮಾರ್ಜಾಲ ಪ್ರಿಯೆ ಪಮ್ಮಿಯನ್ನು ಮೆಚ್ಚಿಸಲು ಗಂಡ ಹೇಳಿದ್ದನ್ನು ಮತ್ತೊಮ್ಮೆ ನೆನಪು ಮಾಡಿಕೊಟ್ಟು ತಿವಿದಳು. ಹೌದು ಕಣೆ ನನಗೆ ಬೆಕ್ಕು ಅಂದ್ರೆ ಇಷ್ಟಾನೆ, ಆದರೆ ಅವೆಲ್ಲ ನಾನು ಸಣ್ಣವನಿದ್ದಾಗ, ಯು ಟ್ಯೂಬ್ ನಲ್ಲಿ ಟಾಮ್ ಅಂಡ್ ಜೆರ್ರಿ ಕಾರ್ಟೂನ್ ನೋಡೋವಾಗ ಮಾತ್ರ ಅದರ ತುಂಟಾಟಗಳು ಇಷ್ಟವಾಗ್ತಾ ಇತ್ತು!, ಆದರೆ ಮನೆಯಲ್ಲಿ ಸಾಕೋಕೆ ಅಲ್ಲಮ್ಮ ಮಾರಾಯತಿ ಎಂದು ನಗುತ್ತಾ ಕೈ ಮುಗಿದಾಗ ತನ್ನನ್ನು ಮೆಚ್ಚಿಸಲು ಗಂಡ ಆಡಿದ ಹಸಿ ಸುಳ್ಳನ್ನು ನಿಜವೆಂದು ನಂಬಿದ ಆಕೆಗೆ ಭ್ರಮನಿರಸನವಾದರೂ ಕಿಲಾಡಿ ಸೇಲ್ಸ್ಮನ್ನು ಹೇಗಾದರೂ ಮಾಡಿ ಬೋಳು ಮಂಡೆಯವರಿಗೂ ಶ್ಯಾಂಪೂ ಮಾರಿದಂತೆ ಪಮ್ಮಿ ತನ್ನ ಪಟ್ಟು ಬಿಡದೆ ಅಯ್ಯೋ! ಪುಟಾಣಿ ಬೆಕ್ಕಿನ ಮರಿ ಎಷ್ಟು ಕ್ಯೂಟಾಗಿರುತ್ತೆ! ಅದರ ಮುದ್ದು ಆಟಗಳನ್ನು ನೋಡ್ತಾ ಇದ್ದರೆ ಹೊತ್ತು ಕಳೆಯೋದೆ ಗೊತ್ತಾಗೋಲ್ಲ, ನಿಮಗೇ ಗೊತ್ತಲ್ಲ ನಾನು ಅಮ್ಮನ ಮನೆಯಲ್ಲಿ ನಮ್ಮ ಮುದ್ದು ಮೀನು ಮರಿಯನ್ನ ಎಷ್ಟು ಹಚ್ಕೊಂಡಿದ್ದೆ ಅಂತ, ಒಂದಿಷ್ಟು ಹಾಲು ಹಾಕಿದ್ರೆ ಸಾಕು, (ಈಗ ಸಧ್ಯಕ್ಕೆ) ನಮ್ಮನೆ ಮಗು ತರ ಇರುತ್ತೆ! ಅವಳ ಮನವೊಲಿಸುವಾಟಕ್ಕೆ ಬೆಕ್ಕು ಸಾಕಲು ಹೋಗಿ ಮುಂದೇನು ಗ್ರಹಚಾರ ಕಾದಿದೆಯೋ ಎಂದು ಪರ್ಮಿ ಚಿಂತಾ(ಕಾ)ಕ್ರಾಂತನಾದ! .

ಪಮ್ಮಿ ನನಗೇನೋ ಬೆಕ್ಕಿಗಿಂತ ನಾಯಿ ಸಾಕುವುದು ಒಳ್ಳೇದು ಅನಿಸುತ್ತೆ, ವಿಶ್ವಾಸಿಕ ಪ್ರಾಣಿ, ಬೆಕ್ಕುಗಳ ಹಾಗೆ ಸ್ವಾರ್ತಿಯಲ್ಲ, ಸಾಕಿದವರಿಗೆ ಮೇಲೆ ರಾಶಿ ಪ್ರೀತಿ ತೋರಿಸುತ್ತೆ ಕಣೆ ಎಂದು ನಾಯಿ ಕಡೆಗೆ ಬ್ಯಾಟ್ಟಿಂಗ್ ಮಾಡುತ್ತಾ ಅವಳ ಮನಸ್ಸನ್ನು ತಿರುಗಿಸಲು ಪ್ರಯತ್ನಿಸಿದ.

ಆದರೆ ಪಮ್ಮಿಯ ಮನಸ್ಸಿನ ತುಂಬೆಲ್ಲ ಆ ಹೊಂಬಣ್ಣದ ನೀಲಿ ಕಂಗಳ ಬೆಕ್ಕಿನ ಮರಿಗಳು ಮೋಡಿ ಮಾಡಿಬಿಟ್ಟಿದ್ದವು. ಸೀತಾ ಮಾತೆ ಚಿನ್ನದ ಜಿಂಕೆಯ ಮಾಯೆಗೆ ಒಳಗಾದವಳಂತೆ ಪಮ್ಮಿಗೆ ಆ ಮುದ್ದು ಬೆಕ್ಕುಗಳನೆತ್ತಿ ಮುದ್ದಾಡುವ ತವಕ ಹೆಚ್ಚಾಯಿತು ಇನ್ನು ಪ್ರೈಮರಿ ಶಾಲೆಯಲ್ಲಿದ್ದಾಗೊಮ್ಮೆ ಕೈಯಲ್ಲಿ ಬನ್ನು ಹಿಡಿದು ಧೀರೋದಾತ್ತಳಾಗಿ ಬರುತ್ತಿರುವಾಗ ಅಚಾನಕ್ಕಾಗಿ ಬೀದಿ ನಾಯಿಯೊಂದು ದಾಳಿ ನಡೆಸಿ ಬನ್ನಿನ ಕವರಿಗೆ ಮೂತಿ ಇಟ್ಟು, ಅವಳ ಕೈ ಕಚ್ಚಿ ಓಡಿ ಹೋದಾಗಿನಿಂದ ಅವಳು ಶ್ವಾನ ದ್ವೇಷಿಯಾಗಿದ್ದಳು.

ರೀ! ನಾಯಿ ಸಾಕೋದು ಬಹಳ ಜವಾಬ್ದಾರಿ ಕೆಲಸ!. ಮೂರು ಹೊತ್ತು ಊಟ ಹಾಕಿ ವೇಳೆಗನುಸಾರವಾಗಿ ನಾವು ಎಷ್ಟೆ ಬ್ಯುಸಿ ಇದ್ರೂ ವಾಕಿಂಗಿಗೆ ಕರೆದೊಯ್ಯಬೇಕು. ನನಗಂತೂ ಈ ಫೇಸ್ಬುಕ್ ವಾಟ್ಸಾಪ್ಗಳನ್ನ ನೋಡ್ತಾ ನಾಯಿ ಬಿಡಿ ನಿಮ್ಮ ಜೊತೆಗೇ ವಾಕಿಂಗ್ ಮಾಡಲು ಟೈಮ್ ಇಲ್ಲ! ಅದನ್ನೊಂದನ್ನೆ ಬಿಟ್ಟು ಊರಿಗೆ ಹೋಗುವ ಹಾಗಿಲ್ಲ. ಇನ್ನು ಅದರ ಕೆಟ್ಟ ದನಿಯ ಬೊಗಳಾಟಕ್ಕೆ ನಮ್ಮ ಅಪಾರ್ಟ್ಮೇಂಟಿನ ನೆರೆ ಹೊರೆಯವರಿಗೂ ತೊಂದರೆಯೇ ಸರಿ. ಆದರೆ ಮುದ್ದು ಬೆಕ್ಕು ಮೀಯಾವ್ ಅಂತ ಇಂಪಾಗಿ ಕೂಗ್ತಾ ಯಾರಿಗೂ ತೊಂದರೆಯಾಗದಂತೆ ಮನೆಯಲ್ಲೆ ಓಡಾಡಿಕೊಂಡು ಇರುತ್ತೆ ಎಂದು ನಾಯಿ ಸಾಕುವ ಕಿರಿಕಿರಿಯನ್ನು ಪರಿಪರಿಯಾಗಿ ಬಿಡಿಸಿ ಮೈಕ್ರೋಸ್ಕೋಪಿನಡಿಯಲ್ಲಿ ಬೃಹದಾಕಾರವಾಗಿ ತೆರೆದಿಟ್ಟಾಗ ಪರ್ಮಿಗೆ ಇಂಪಾದ, ಮಿಯಾವ್ ದನಿ ಸಪ್ತ ಸ್ವರದಲ್ಲಿ ರಿಂಗಣಿಸಿದಂತೆ ಭಾಸವಾಯಿತು!

ಆದರೆ ಬೆಕ್ಕಿನ ಕೂದಲು ತನ್ನ ಅಸ್ಥಮಾ ಅಲರ್ಜಿಗೆ ಮಾರಕ ಎಂದು ನೆನಪಾಗಿ ಕ್ಷಣಾರ್ಧದಲ್ಲೇ ಬಣ್ಣ ಬದಲಾಯಿಸುವ ರಾಜಕಾರಣಿಗಳಂತೆ ತನ್ನ ಆರೋಗ್ಯ ಸಮಸ್ಯೆಯನ್ನು ಮುಂದಿಟ್ಟು ಅವಳನ್ನು ಎಮೋಶನಲ್ ಬ್ಲಾಕ್ಮೆಲ್ ಮಾಡಿದ ಬಡಪಾಯಿ ಗಂಡ! ಆದರೆ ಪಟ್ಟು ಹಿಡಿದ ಮಡದಿಗೆ ಗಂಡನಿಗಿಂತ ಕ್ಯೂಟ್ ಕಿಟ್ಟನ್ ಮೇಲೇ ಎಮೋಷನ್ ಹೆಚ್ಚಾಯಿತು!

ಮೂಲೆಯಲ್ಲಿ ಧೂಳು ತಿನ್ನುತ್ತಿದ್ದ ವಾಕ್ಕುಮ್ ಕ್ಲೀನರ್ ಕಡೆ ದಿಟ್ಟಿಸಿ ನಿಮಗೆ ಬೆಕ್ಕಿನ ಕೂದಲಿನಿಂದ ಯಾವ ತೊಂದರೆಯೂ ಬಾರದಂತೆ ಮನೆಯ ಮೂಲೆ ಮೂಲೇನೂ ಕ್ಲೀನ್ ಮಾಡಿದರಾಯಿತು ಬಿಡಿ ಕೂಲಾಗಿ ನುಡಿದಾಗ, ಆ ಕತ್ತೆ ಚಾಕರಿಯೂ ತನಗೆ ಬೀಳುವುದು ಎನ್ನುವುದವನಿಗೆ ಖಾತ್ರಿಯಾಯಿತು .

ಗಂಡನ ವಕ್ರ ಮುಖಭಾವದಿಂದಲೇ ಅವನ ಮನದಿಂಗಿತ ಗ್ರಹಿಸುವ ವಿಶೇಷ ಪ್ರತಿಭೆಯಿದ್ದ ಪಮ್ಮಿ ನಮ್ಮನೆ ಕೆಲಸದ ಗಂಗಾಳಿಗೆ ವಾಕ್ಯೂಮ್ ಮಾಡೋದು ಚೆನ್ನಾಗಿ ಬರುತ್ತೆ ರೀ, ತಿಂಗಳ ಸಂಬಳದ ಜೊತೆ ಒಂದು ಐನೂರು ಹೆಚ್ಚು ಕೊಟ್ರೆ ಅದನೂ ಮಾಡಿ ಬಿಡ್ತಾಳೆ ಹುರುಪಿನಲ್ಲಿ ಉಲಿದಾಗ ಪರ್ಮಿಗೆ ಊದುವುದನ್ನು ಕೊಟ್ಟು ಬಾರಿಸುವುದು ಕೊಂಡಂತಾಗಿ ಅವಳ ಲೆಕ್ಕಾಚಾರಕ್ಕೆ ಅಳಬೇಕೋ ನಗಬೇಕೋ ತಿಳಿಯದಾಯಿತು!

ಕೆಲಸಕ್ಕೆ ಸೇರಿದ ಹೊಸತರಲ್ಲಿ ಸಾಫ್ಟ್‌ವೇರ್ ಉದ್ಯೋಗಿಗಳಂತೆ ಗಂಗಾ ಒಮ್ಮೊಮ್ಮೆ ಶನಿವಾರ ಭಾನುವಾರ ಒಟ್ಟಿಗೆ ಚಕ್ಕರ್ ಹೊಡೆದು ಮನೆಗೆಲಸದ ರೂಢಿಯೆ ಇಲ್ಲದ ಏಕೆಮೇವ ಸುಪುತ್ರಿಯಾಗಿ ಬೆಳೆದ ಪಮ್ಮಿಯನ್ನು ಕಂಗಾಲಾಗಿಸಿದಾಗ ಗಂಗಾಳನ್ನು ಸಂತುಷ್ಟಗೊಳಿಸಲು ಅವಳ ಇಷ್ಟಾರ್ಥಗಳ ಕಡೆ ವಿಶೇಷ ಗಮನ ಹರಿಸಲು ಶುರು ಮಾಡಿದ್ದಳು . ಬೆಳಿಗ್ಗೆ ತಿಂಡಿಯ ಜೊತೆ ಟೀ ಕಾಫಿ ಕುಡಿದರೆ ಅಸಿಡಿಟಿ ಆಗುತ್ತಿದ್ದರಿಂದ ಅವಳಿಗೆ ಹಾಲನ್ನೆ ನೀಡಿ ತಾನುಡದೆ ಇಟ್ಟ ಚಂದದ ಸೀರೆಯಿಂದ ಹಿಡಿದು ಅವಳ ಮಗಳ ಮದುವೆ ಸಂದರ್ಭದಲ್ಲಿ ಚಿನ್ನದ ಓಲೆಯನ್ನೂ ಉಡುಗೊರೆಯಾಗಿ ಕೊಟ್ಟು ತನ್ನ ಮನೆಗೆಲಸವನ್ನು ಅಚ್ಚುಗಟ್ಟಾಗಿ ಹೆಚ್ಚು ಚಕ್ಕರ್ ಹಾಕದೆ ಮಾಡುವಂತೆ ಗಂಗಾಳನ್ನು ಓಲೈಸಿದ್ದಳು . ಈ ವಿಷಯದಲ್ಲಿ ಮಡದಿಯ ಸಾಹಸ, ಜಾಣ್ಮೆ ಗಂಗೆಯನ್ನು ಭೂಮಿಗೆ ತರಲು ಭಗೀರಥ ಕೈಗೊಂಡ ಸಾಹಸವನ್ನೂ ಮೀರಿದ್ದು ಎಂದು ಎಷ್ಟೋ ಬಾರಿ ಪರ್ಮಿಗೆ ಅನ್ನಿಸಿದ್ದುಂಟು!

ಅಂತೂ ಗಂಡನ ಅಲರ್ಜಿ ಸಮಸ್ಯೆ ಪಮ್ಮಿಯ ಮೇಲೆ ಯಾವ ಪರಿಣಾಮವೂ ಬೀರದೆ ಅವನ ಮೌನ ಮುದ್ರೆ ಅವಳ ಸಿಟ್ಟೇರಿಸುವ ಅಡ್ಡ ಪರಿಣಾಮವೇ ಬೀರಿತು! ನೋಡಿ ನನಗೆ ಆ ಬೆಕ್ಕು ಮರಿ ಬೇಕೆ ಬೇಕು. ಪಾಪ ಅದು ಇನ್ನೆನ್ನು ತಾನೇ ಕೇಳುತ್ತೆ, ದಿನಕ್ಕೆ ಮೂರು ಸಲ ಹಾಲು ತಾನೇ? ಹಾಗೇನೇ ಅದರ ಅಮ್ಮ ತನ್ನ ಮರೀನಾ ಆಗಾಗ ನೋಡೋಕೆ ಬರುತ್ತಂತೆ. ಬಾಣಂತಿ ಬೇರೆ! ಅದಕ್ಕೂ ಒಂದಿಷ್ಟು ಹಾಲು ಹಾಕಿದರಾಯಿತು ಎಂದು ಮನೆಯಲ್ಲಿ ಹಸು ಕಟ್ಟಿವದರಂತೆ ಪಮ್ಮಿ ಧಾರಾಳತನವನ್ನು ಪ್ರದರ್ಶಿಸಿದಾಗ ಗಂಗಾಳ ಜೊತೆ ಈ ( ಕಳ್ಳ ) ಬೆಕ್ಕಿಗೂ ಹಾಲು ಪೂರೈಸಬೇಕಲ್ಲಾ ಎನ್ನುವ ಹೆಚ್ಚಿನ ಖರ್ಚಿಗೆ ತಲೆ ಪರಚಿ ಕೊಳ್ಳುವಂತಾದರೂ ಮುದ್ದಿನ ಮಡದಿಯ ಆಸೆಗೆ ತನ್ನ ಹಟವನ್ನು ಸಡಲಿಸಿ ಒಂದು ಹೆಣ್ಣಿಗೊಂದು ಗಂಡು ಹೇಗೋ ಸೇರಿ ಹೊಂದಿಕೊಂಡು ಎನ್ನುವ ಕವಿವಾಣಿಯಂತೆ ಒಲ್ಲದ ಮನಸ್ಸಿನಿಂದಲೇ ಅವಳನ್ನು ಸಂಪ್ರೀತಗೊಳಿಸುವ ನಿರ್ಧಾರಕ್ಕೆ ಬಂದ. ಆಯ್ತು ಮಹಾರಾಯತಿ!ನಾಳೆ ಹೇಗೂ ಭಾನುವಾರ, ಕೀರ್ತಿ ಮನೆಗೆ ಹೋಗಿ ಬೆಕ್ಕಿನ ಮರಿ ತಂದರಾಯಿತು ಎಂದು ಅನೌನ್ಸಿಸಿದ . ಸಾವಿರ ವ್ಯಾಟ್ ಬಲ್ಬಿನಂತೆ ಪಮ್ಮಿಯ ಮುಖ ಖುಷಿಯಿಂದ ಬೆಳಗಿತು .

ಅಷ್ಟರಲ್ಲಿ ಗಂಗಾಳ ಆಗಮನವಾಯಿತು . ತನ್ನ ಬಟ್ಟೆ ಕಪಾಟಿನ ಸ್ವಚ್ಛತೆಯ ಅಭಿಯಾನಕ್ಕೆ ರಾಜ್ಯದಲ್ಲಿ ನೆರೆ ಹಾವಳಿ ಬಂದಾಗ ರಕ್ಷಣಾ ಪಡೆಗಳ ನೆರವು ಪಡೆದಂತೆ ತನ್ನ ರಾಶಿ ಬಟ್ಟೆಗಳನ್ನು ಜೋಡಿಸಿಕೊಡಲು ಪಮ್ಮಿ ಅಂದು ಗಂಗಾಳ ಸಹಾಯವನ್ನು ಕೋರಿದ್ದಳು

ಬಂದಾಕ್ಷಣವೇ ಲಗುಬಗೆಯಿಂದ ಕೆಮ್ಮುತ್ತಲೆ ಕೆಲ್ಸಕ್ಕೆ ಕೈಹಚ್ಚಿದ ಗಂಗಾ ಪಮ್ಮಿ ಕೊಟ್ಟ ನೀರು ಕುಡಿದು ಸುಧಾರಿಸಿಕೊಂಡು ಮೇಡಮ್ಮೋರೆ ಇವತ್ತು ಜ್ಯೋತಿ ಅಮ್ಮೋರ ಮನೆ ಕೆಲಸ ಬುಟ್ಟ್ ಬುಟ್ಟೆ ಕಟುವಾಗಿ ಹೇಳಿದಾಗ ಅಯ್ಯೋ! ಯಾಕೆ ಗಂಗಾ? ಪಾಪ! ಜ್ಯೋತಿ ಎಷ್ಟು ಒಳ್ಳೆಯವರು, ಅವರೆ ತಾನೇ ನಿನ್ನನ್ನು ನಮ್ಮ ಮನೆಕೆಲಸಕ್ಕೆ ಸೇರಿಸಿದ್ದು ಪಮ್ಮಿ ಗಾಬರಿಯಾದಳು .

ಇನ್ನೇನ್ ಮಾಡ್ಲಿ ಮತ್ತೆ! ಹೊದ್ವಾರ ಅವರ ಮಗಳಿಗೆ ಇಷ್ಟ ಅಂತ ಎರಡು ಬೆಕ್ಕಿನ ಮರಿಗೋಳ್ನ ತಂದು ಸಾಕೊಂಡವರೆ! ನನಗೆ ಅದರ ಕೂದಲು ಅಂದ್ರೆ ಕೆಮ್ಮು ಬತ್ತದೆ ಆಗಾಕಿಲ್ಲ ಅಂತ ಯೇಳುದ್ರು ಕೇಳ್ಳಿಲ್ಲ . ಇವತ್ತು ಅದರಮ್ಮ ಬೇರೆ ಎರಡು

ಇಲಿಗೋಳ್ಣ ಹಿಡಿದು ಮರಿಗೆ ತಂದು ಕೊಟ್ಟೈಯ್ತ್ತಿ!. ಅವು ತಿಂದು ಅರ್ಧ ಬಿಟ್ಟಿದ್ದು ಕ್ಲೀನ್ ಮಾಡು ಅಂದ್ರೆ ಥೂ! ನಾನು ಮಾಡೋಕಾಯತ್ತಾ? ನೀವೇ ಯೇಳಿ. ಅದಕ್ಕೆ ಪೊರಕೆ ಎಸೆದು ಬೇರೆ ಯಾವ್ಳನಾದ್ರೂ ಕೆಲ್ಸಕ್ಕೆ ಇಟ್ಕೊಳ್ಳಿ, ನಾ ನಾಳೆಯಿಂದ ಬರಕಿಲ್ಲಾ ಅಂತ ಯೇಳ್ಬುಟ್ಟೆ ಅಮ್ಮೋರೆ ಎಂದಾಗ ಪಮ್ಮಿ ಗರಬಡಿದವಳಂತೆ ನಿಂತಳು . .

ಆಗ ಪರ್ಮಿಗಂತೂ ಮನೆ ಸಹಾಯಕಿ ಗಂಗಾ ಥೇಟ್ ತನ್ನನ್ನು ಕಾಪಾಡಲು ಅವತರಿಸಿದ ದೇವತಾ ಸ್ವರೂಪಿಯಾದ ಗಂಗಾ ಮಾತೆಯಾಗಿ ಕಂಡಳು!

ಕೀರ್ತಿ! ಆ ಕ್ಯೂಟ್ ಬೆಕ್ಕು ಮರಿ ಅಂದ್ರೆ ತುಂಬಾ ಇಷ್ಟ ಕಣೆ, ಆದ್ರೆ ಏನ್ಮಾಡ್ಲಿ? ನನ್ನ ಗಂಡನಿಗೆ ಬೆಕ್ಕಿನ ಕೂದಲು ಅಂದ್ರೆ ಅಲರ್ಜಿ. ಕೋಣೆಯ ಮುಚ್ಚಿದ ಬಾಗಿಲಿನಿಂದ ಪಮ್ಮಿಯ ವಿವರಣೆಗಳನ್ನು ಕೇಳಿಸಿಕೊಂಡ ಪರ್ಮಿ ಮೀಸೆಯಡಿಯಲ್ಲಿ ತುಂಟ ನಗೆ ನಕ್ಕ . ■


ಕೊರವಂಜಿ ಅಪರಂಜಿ ಟ್ರಸ್ಟ್ ಅರ್ಪಿಸುವ

# ಅಪರಂಜಿ ಹಬ್ಬ ೨೦೨೦

**ಭಾನುವಾರ ೫.೦೪.೨೦೨೦**
**ಬೆಳಗ್ಗೆ ೧೦.೩೦ ರಿಂದ ೧.೩೦**

**ಎಚ್. ಎನ್. ಕಲಾಕ್ಷೇತ್ರ, ಜಯನಗರ,**

**ಬೆಂಗಳೂರು ೫೬೦ ೦೭೦**

**ಮುಖ್ಯ ಅತಿಥಿಗಳು :**
**ಡಾ। ಎ. ಎಚ್. ರಾಮರಾವ್,**
**ಶ್ರೀ ಶ್ರೀನಿವಾಸ ವೈದ್ಯ** ಮತ್ತು **ಶ್ರೀ ಎನ್. ರಾಮಾನುಜ**

ಅಪರಂಜಿ ಯುಗಾದಿ ೨೦೨೦ ವಿಶೇಷಾಂಕ ಬಿಡುಗಡೆ

ಅಪರಂಜಿ ಸಂಪಾದಕರಾದ **ಎಂ. ಶಿವಕುಮಾರ್** ಅವರಿಂದ
**ವ್ಯಂಗ್ಯಚಿತ್ರ ಪ್ರಪಂಚ** – ಪವರ್ ಪಾಯಿಂಟ್ ಪ್ರೆಸೆಂಟೇಷನ್

ವಿಶೇಷ ಕಾರ್ಯಕ್ರಮ
**ಮಾತು ಸ್ವಾಮಿ ಮಾತು**
● ವೈ.ವಿ.ಗುಂಡೂರಾವ್ ● ಎಚ್. ಡುಂಡಿರಾಜ್ ● ಎನ್. ರಾಮನಾಥ್
●ಭುವನೇಶ್ವರಿ ಹೆಗಡೆ ● ಬೇಲೂರು ರಾಮಮೂರ್ತಿ

ಎಲ್ಲರಿಗೂ ಪ್ರೀತಿಯ ಸ್ವಾಗತ

# ದಿನಪತ್ರಿಕೆ ಬಾರದ ದಿನ...

● ಕೆ.ವಿ. ರಾಜಲಕ್ಷ್ಮಿ

ದಿನಪತ್ರಿಕೆ ಬಾರದ ದಿನ... ಏನು ಮಹಾ ವ್ಯತ್ಯಾಸ ಅಂದಿರಾ?

ಅಯ್ಯೋ, ಆ ವ್ಯಥೆ ಯಾಕೆ ಕೇಳ್ತೀರಿ?

ಬೆಳಿಗ್ಗೆ ಬಿಸಿಬಿಸಿ ಕಾಫಿ ಕೈಗೆ ಬರುವ ಹೊತ್ತಿಗೆ ಪೇಪರ್ ಬಂದರೆ, ಆ ಸುಖವೇ ಬೇರೆ!.... ಪೇಪರ್ ಹರಡಿಕೊಂಡು ದೊಡ್ಡಕ್ಷರಗಳಲ್ಲಿ ಲೋಗೋ ಸೇರಿ ಅಚ್ಚಾಗಿರುವ ಪತ್ರಿಕೆಯ ಹೆಸರನ್ನೊಮ್ಮೆ ಕಣ್ಣಾಡಿಸಿ, ಮುಂದೆ, ಹಿಂದಿನ ದಿನ ಟಿವಿ ನ್ಯೂಸ್ ನಲ್ಲಿ ಈಗಾಗಲೇ ನೋಡಿದ ಕೇಳಿದ ಸುದ್ದಿಯಾದರೂ, ಪೇಪರ್‌ನಲ್ಲಿ, ಕಾಫಿಯನ್ನು ಸುರ್ ಎಂದು ಹೀರುತ್ತಾ, ಓದಿ ಆಸ್ವಾದಿಸುವ ಮಜವೇ ಬೇರೆ. ಕಾಫಿ ಮುಗಿದರೂ ಖಾಲಿ ಲೋಟ ಕೈಯಲ್ಲಿಟ್ಟುಕೊಂಡೇ ಕಡೆಯ ಪುಟದವರೆಗೂ ಬಂದು ನಂತರ ಪುರವಣಿಯಿದ್ದರೆ ಅದರ ಮೇಲೊಂದು ಫ್ರೆಶ್ ಲುಕ್ ಕೊಟ್ಟು ಮುಗಿಸುವಾಗ ಸಿಗುವ ತೃಪ್ತಿಯೇ ಬೇರೆ! ಕನ್ನಡ ದೈನಿಕದ ನಂತರವೇ ಆಂಗ್ಲ ದೈನಿಕದ ಮಾತು...

ಈ ಖುಷಿ ಅಲ್ಲಿ ಸಿಗದು ಬಿಡಿ, ಏಕೆಂದರೆ ಇದು ಮನದ ಮಾತು, ಅದು ಏನಿದ್ದರೂ ವ್ಯವಹಾರಕ್ಕೆ ಸಾಕು.

ಮಗಳು ಆಂಗ್ಲಕ್ಕೆ ಮರುಳಾದರೆ ನಾವೇನಿದ್ದರೂ ಕನ್ನಡ ಮಾಧ್ಯಮ! ಹೀಗಾಗಿ ಎರಡೂ ಭಾಷೆಯ ಪತ್ರಿಕೆಗಳು ಬೆಳಿಗ್ಗೆ ಏಳರ ಒಳಗೆ ಮನೆಯ ಗೇಟಿನ ಎರಡು ಕಂಬಿಗಳ ನಡುವೆ ಇಣುಕಿದಾಗ ಅದೇನು ಸಂತಸ! ಏಳರ ನಂತರವೂ ಸುರುಳಿ ಕಾಣದಿದ್ದರೆ ಕೂಡಲೇ ನಮ್ಮ ಪೇಪರ್ ಏಜೆಂಟ್‌ಗೆ ಫೋನು.

'ಹುಡುಗರಿಲ್ಲ ಮೇಡಮ್, ನಾನೇ ಬರ್ತಿದ್ದೀನಿ' ಎಂದರೂ ಪೇಪರ್ ಕಾಣುವವರೆಗೂ ಚಡಪಡಿಕೆ ಹೇಳ ತೀರದು. ಇನ್ನೊಂದು ಡೋಸ್ ಕಾಫಿ ಹೊಟ್ಟೆ ಸೇರಿರುತ್ತದೆ. ಪೇಪರ್ ಓದದೇ ತಿಂಡಿ ಮಾಡುವ ಯೋಚನೆಯೂ ಸುಳಿಯದು!

ಹೀಗೆ, ಒಮ್ಮೆ ಬೆಳಗಿನ ಪೇಪರ್ ಕಾಣದೆ ಪರದಾಡಿ ಪೇಪರ್ ಏಜೆಂಟ್ ಗೆ ಫೋನ್ ಹಚ್ಚಿದ್ದೆ.

'ಇವತ್ತು ಪೇಪರ್ ಇಲ್ಲ, ನಿನ್ನೆ ಪೇಪರ್ ಆಫೀಸಿಗೆ ರಜೆಯಲ್ಲ?' ದನಿಯಲ್ಲಿ ಕೊಂಚ ಕೋಪ ಕಂಡಾಗ 'ಓಹ್ ಸಾರಿ' ಎಂದು ಪೆಚ್ಚಾದದ್ದಿದೆ.

ನನ್ನ ಹಾಗೆ ಎಷ್ಟು ಮಂದಿಗೆ ಜವಾಬು ಕೊಟ್ಟು ಸಾಕಾಗಿರಬೇಡ? ಮುಖ್ಯವಾದ ಹಬ್ಬದ ರಜೆಯ ನಂತರ ಪೇಪರ್ ಬಾರದ ದಿನ ದೈನಂದಿನ ಚಟುವಟಿಕೆಗಳು ಚುರುಕು ಕಳೆದುಕೊಳ್ಳುತ್ತವೆ ಅನ್ನುವುದಂತೂ ನನ್ನ ಪಾಲಿಗೆ ನಿಜ. ಅಂಥ ದಿನಗಳಲ್ಲಿ ಹಿಂದಿನ ಪೇಪರನ್ನು ಮತ್ತೆ ಓದುವುದುಂಟು, ಸ್ಕಿಪ್ ಮಾಡಿದ ಸುದ್ದಿಯನ್ನು ಸಮಗ್ರವಾಗಿ ಅಧ್ಯಯಿಸುವ(!) ಸಲುವಾಗಿ.

ಸುದ್ದಿಗೆ ಸಂಪರ್ಕವೆಂದರೆ ಪೇಪರ್ ಅಥವಾ ರೇಡಿಯೋ ಮಾತ್ರ ಇದ್ದ ಕಾಲ. ಹಬ್ಬದ ಸಲುವಾಗಿ ಪತ್ರಿಕಾ ಕಾರ್ಯಾಲಯದ ರಜೆಯ ಕಾರಣ ಮರುದಿನ ಪೇಪರ್ ಬಾರದಾಗ ಇಡೀ ದಿನ ಶೂನ್ಯ, ನಿಜವಾದ ದೃಷ್ಟಿಯಲ್ಲಿ ಬೆಳಗ್ಗೆ ಸರಿಯಾಗಿ ಆಗಿರದ ಮಹಿಮೆ. ಅದರಲ್ಲೂ ಪೇಪರ್ ಇಲ್ಲದ ದಿನ ರವಿವಾರವಾದರಂತೂ ಪುರವಣಿಗಳೂ ಮಿಸ್. ಆಗ ನನ್ನ ಅಸಹನೆ ತಾರಕಕ್ಕೆ, ನಾವು ಓದುವೆವೋ ಬಿಡುವೆವೋ ಪೇಪರ್ ನೋಡಬೇಕು, ಅಷ್ಟೇ ಎಂಬ ತರ್ಕ.

ಪರಿಸ್ಥಿತಿ ಈಗ ಸಾಕಷ್ಟು ಸುಧಾರಣೆ ಕಂಡಿದೆ–ಸಾಮಾಜಿಕ ಜಾಲತಾಣಗಳಲ್ಲಿ ಕ್ಷಣಕ್ಷಣದ ಸುದ್ದಿ ಅಪ್ಡೇಟ್ ಆಗುತ್ತಿರುತ್ತದೆ. ಟಿವಿ ಯಲ್ಲೂ ಸುದ್ದಿಗೆ ಕೊರತೆಯಿಲ್ಲ, ಬೇಕಾದ ವಾಹಿನಿ ನೋಡಬಹುದು. ಎಷ್ಟು ಬ್ರೇಕಿಂಗ್ ನ್ಯೂಸ್, ಎಕ್ಸ್‌ಕ್ಲ್ಯೂಸಿವ್, ನಮ್ಮಲ್ಲೇ ಮೊದಲು, ಎಂದು ಬಿತ್ತರವಾದರೂ ಪೇಪರಿನಲ್ಲಿ ಓದುವ ಸುಖಕ್ಕೆ ಸಾಟಿಯಾದೀತೇ? ನನ್ನ ಮಟ್ಟಿಗಂತೂ ಖಂಡಿತ ಇಲ್ಲ.

ಸುದ್ದಿಯನ್ನು ಅಚ್ಚಿನ ರೂಪದಲ್ಲಿ ಓದುವ ಸಡಗರಕ್ಕೆ ಬೆಲೆಕಟ್ಟಲಾಗದು.

2019 ಯುಗಾದಿ –ವಿಕಾರಿ ನಾಮ ಸಂವತ್ಸರ, ಶನಿವಾರ ಬಂದಿದ್ದರಿಂದ, ಒಂದು ಹಬ್ಬದ ರಜೆ ಶನಿವಾರದಲ್ಲಿ ವಿಲೀನವಾದ ಬೇಸರ, ಹಿಂದೆಯೇ ಪೇಪರ್ ಇಲ್ಲದ ಭಾನುವಾರ... ಪ್ರಯುಕ್ತ. ಈ ವರ್ಷ ಯುಗಾದಿ ಬುಧವಾರ ಹೀಗಾಗಿ ಗುರುವಾರದ ಪೇಪರ್ ಕಾಣದು. ನಮಗೆ ಇಷ್ಟವಾದ ಪುರವಣಿಗಳು ಪ್ರಕಟವಾಗುವ ದಿನದ ದೈನಿಕಗಳು ಬಾರದಾಗಲಂತೂ ಇನ್ನೂ ಹೆಚ್ಚಿನ ಸಂಕಟ.

ಒಟ್ಟಾರೆ, ಪತ್ರಿಕೆಯ ಅನುಪಸ್ಥಿತಿಯಲ್ಲಿ ದಿನ, ತೋರುವುದು ಬಲು ಭಾರ!

■

## ಹುಡುಕುತ್ತಲೇ ಇದೆ

ಮೂವರು ಹಡಗಿನಲ್ಲಿ ಪಯಣಿಸುತ್ತಿದ್ದರು. ಆಗ ದೆವ್ವವೊಂದು ಅವರನ್ನು ಅಡ್ಡಗಟ್ಟಿ ಸವಾಲೊಂದು ಅವರ ಮುಂದೆ ಇಟ್ಟಿತು. 'ಸಮುದ್ರಕ್ಕೆ ಮೂವರೂ ಏನಾದರೂ ಬೇರೆ ಬೇರೆ ಎಸೆಯಿರಿ. ಯಾರು ಎಸೆದಿದ್ದನ್ನು ತಂದು ಕೊಡಲಾಗದೆ ಇದ್ದರೆ ಅವನ ಗುಲಾಮನಾಗಿರುವೆ. ತಂದು ಕೊಟ್ಟರೆ ಅದನ್ನು ಎಸೆದವನನ್ನು ತಿನ್ನುತ್ತೇನೆ' ಎಂದಿತು. ಒಬ್ಬ ವಜ್ರ ತುಂಡನ್ನು ಎಸೆದ. ದೆವ್ವ ಅದನ್ನು ಹುಡುಕಿ ಅವನನ್ನು ತಿಂದಿತು. ಇನ್ನೊಬ್ಬ ತಾನು ಕಟ್ಟಿದ್ದ ಬೆಲೆ ಬಾಳುವ ಗಡಿಯಾರ ಎಸೆದ. ಅವನನ್ನೂ ದೆವ್ವ ತಿಂದಿತು. ಮೂರನೆಯವನು 'ನಾನೇನು ಮೂರ್ಖನಲ್ಲ..' ಎನ್ನುತ್ತಾ ಒಂದು ಬಾಟಲಿಗೆ ನೀರು ತುಂಬಿ ಅದನ್ನು ಸಮುದ್ರಕ್ಕೆ ಸುರಿದು 'ಹೋಗು ಅದನ್ನು ಹುಡಿಕಿ ತಾ..' ಎಂದ. ದೆವ್ವ ಅದನ್ನು ಇನ್ನೂ ಹುಡುಕುತ್ತಲೇ ಇದೆ.

TEMPLE OF KNOWLEDGE

# BEECHI VIDYA KENDRA

Email: admin@beechi.in
Web: www.beechi.in
Mob: 9740968677, 9035302302, 9035007003

PLACEMENT SERVICES FOR:

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

## Beechi Prakashana

### Get your Book Published !

We provide Publishing, Marketing & Distribution support to Authors

- Sell your books both online & Retail( Book Shops)
- Get 100/ Royalty
- Retain Full copy Rights
- Publish your book faster
- Get paid for every book sold

## ಬೀಚಿ ಪ್ರಕಾಶನ

### ಲೇಖಕರೇ, ತಮ್ಮ ಪುಸ್ತಕಗಳು ಪ್ರಕಟವಾಗಬೇಕೆ?

ನಾವು ಲೇಖಕರಿಗೆ ಪುಸ್ತಕಗಳನ್ನು ಮುದ್ರಿಸಲು, ಮಾರಾಟ ಮಾಡಲು ಹಾಗೂ ವಿತರಿಸಲು ಸಹಕರಿಸುತ್ತೇವೆ.



- ನಿಮ್ಮ ಪುಸ್ತಕಗಳನ್ನು ಆನ್‌ಲೈನ್ ಮತ್ತು ಸಗಟು ವ್ಯಾಪಾರ ಮಳಿಗೆಗಳಿಂದ ಮಾರಾಟ ಮಾರಬಹುದು.(ಪುಸ್ತಕ ಅಂಗಡಿ).
- ರಾಯಧನ ೧೦೦% ಪಡೆಯುತ್ತೀರಿ.
- ನಕಲು ಹಕ್ಕುಗಳನ್ನು ಉಳಿಸಿಕೊಳ್ಳಿ.
- ನಿಮ್ಮ ಪುಸ್ತಕಗಳನ್ನು ತ್ವರಿತವಾಗಿ ಮುದ್ರಿಸಬಹುದು.
- ಪ್ರತಿ ಪುಸ್ತಕ ಮಾರಾಟದ ಬಳಿಕ ಹಣ ಪಡೆಯುತ್ತೀರಿ.

**CONTACT: 9845264304**

# ಜನ್ಮರಹಸ್ಯ!

● ನುಗ್ಗೆಹಳ್ಳಿ ಪಂಕಜ

ತನ್ನ ನರಕದಲ್ಲಿರೋವವರ ಮೇಲೆಲ್ಲಾ ರೇಗಾಡ್ತಾ-ಕಿರಿಚಾಡ್ತಾ ಶಥಪಥ ಸುತ್ತಿದ್ದೂ ಸುತ್ತಿದ್ದೇ, ಯಮಧರ್ಮರಾಯ, ಅದೂ ಏನು, ಯಮಭಾರವಾದ ಗದೆಯನ್ನೂ ಹೊತ್ತು!

ನರಕದಲ್ಲಿರೋವವರ ಮೇಲೆಲ್ಲಾ ಎಂದೆನೇ? ಅಯ್ಯೋ, ಅಲ್ಲಿದ್ದವರು ಯಾರು? ಮೂರೇ ಜನ- ಫೇಮಸ್ ಚಿತ್ರಗುಪ್ತ, ಮತ್ತು ಅವನ ಗುಮಾಸ್ತ, ಹಾಗೂ ಈರ್ವರು ದ್ವಾರಪಾಲಕರು.

ಮಿಕ್ಕಿದವರೆಲ್ಲಾ. . . . . . . . . .

"ಎಲ್ಲಿ? ಎಲ್ಲಿ? ಎಲ್ಲೀ?"- ಹುಚ್ಚು ಹಿಡಿದವನಂತೆ ಕೂಗಾಡಿದನು, ನರಕಾಧಿಪತಿ; ಕೆಂಗಣ್ಣು ಬಿಟ್ಟು ನೋಡಿದನು.

ಯಾರಾದ್ರೂ ಬಾಯಿಬಿಟ್ರೆ ತಾನೆ? ಬಾಯಿಬಿಟ್ಟು ಹೇಳೋಕ್ಕೆ ಧೈರ್ಯ ಇದ್ರೆ ತಾನೆ?

ಎಲ್ಲೂ ಏನೂ ಸುದ್ದಿ ಸಿಗದೆ, ಅಡ್ಡಾಡ್ತಿದ್ದ ನಾರದರ ಕಿವಿಗೆ ಬಿತ್ತು, ಯಮನ ಈ ಆರ್ಭಟ- ಅವರು ಭೂಲೊಕದಲ್ಲಿದ್ರೂ! ಸೆನ್ಸೇಶನಲ್ ಸಂಗತಿ-ಸನ್ನಿವೇಶಗಳೆಂದರೆ, ಆ ಬಹ್ಮಚಾರಿಗೆ ಅದೇನು ಇಷ್ಟವೋಪಾ, ಸಿಕ್ಸ್‌ಥ್ ಸೆನ್ಸ್ ಇರೊವ್ರ ಹಾಗೆ ತಕ್ಷಣ ಅಲ್ಲಿ ಹಾಜರ್! ಕಲಹ-ಸಮಸ್ಯೆಯನ್ನ ಪರಿಹರಿಸ್ತಾರೋ, ಇಲ್ಲ ಇನ್ನೂ ಹೆಚ್ಚಿಸ್ತಾರೋ, ಅವರ ಪ್ರಾಣಸ್ನೇಹಿತನಾದ ಆ ಮಾಯಾವಿ ಶ್ರೀಮನ್ ನಾರಾಯಣನಿಗೇ ಗೊತ್ತು.

ಹಾಳುಬಿದ್ದ ಆ ನರಕವನ್ನ ಕಂಡು ಧಿಗ್ಭ್ರಮೆಯಾಯ್ತು ನಾರದರಿಗೆ. ಎಲ್ಲಿಹೋದ್ರು ಎಲ್ರೂ?

ಯಮಧರ್ಮರಾಯ ರಿಟೈರ್ಡ್ ಆಗಿಬಿಟ್ರೂ ಹೇಗೆ? ಮುಂದೆ ಸತ್ತವರ ಗತಿ? ಬೇರೆ ಯಾರೂ ಆ ಭಯಂಕರ ಜವಾಬ್ದಾರಿಯನ್ನ ತಗೊಳ್ಳೊದೂ ಇಲ್ಲ, ಅದನ್ನ ನಿಭಾಯಿಸೋ ಶಕ್ತಿಯಂತೂ ಯಾರಿಗೂ ಇಲ್ಲ. . . .

"ಯಾಕಿಷ್ಟು ಸಿಟ್ಟು ನರಕಾಧಿಪತಿ? ಪ್ರೇಮಭಂಗವಾದ್ರೆ ಹೀಗಾಗತ್ತೆ ಅಂತ ಕೇಳಿದ್ದೆ-

ನಿಂಗೇನಾದ್ರೂ ಹಾಗಾಗಿದ್ಯೆ?"- ನಗುವನ್ನ ಬರಿಸಿಕೊಂಡು ತಂಬೂರಿಯನ್ನ ಮೀಟ್ತಾ, ನೇರವಾಗಿ ಪ್ರಶ್ನಿಸಿಯೇಬಿಟ್ಟರು, ತುಂಟ ನಾರದರು.

"ಪ್ರೇಮ!"- ಯಮ ಹೌಹಾರಿದನು- "ನಂಗೆಲ್ಲಿದೆ ಪುರಸೊತ್ತು, ಅಂಥಾ ಹಾಳು ಭಾವನೆಗಳಿಗೆ! ಬ್ರಹ್ಮ ತನ್ನ ಸೃಷ್ಟಿ ಕಾರ್ಯವನ್ನ ನಿಲ್ಲಿಸ್ಬೇಕು- ನಂಗೆ ರಜಾ ಸಿಗ್ಬೇಕು; ಆಗ ಬೇಕಾದಷ್ಟು ಪ್ರೇಮಲೀಲೇನ ಆಡ್ಬಹುದು, ನಾನೂ ನೀನೂ. . . . ."

ಹೌಹಾರುವುದು ಈಗ ನಾರದರ ಸರದಿ. ಏನು ಬದಲೀಯುವುದಕ್ಕೂ ತೋರದೆ,

"ನಾರಾಯಣ ನಾರಾಯಣ" ಎಂದು ಕಂಬಿ ಮೀಟಿದರು.

ಹೊಳೆಯಿತು – "ಯಾರಾದ್ರೂ ಮಾನವ ಕೈಕೊಟ್ಟನೇನು ಯಮದೇವ? ಅದ್ರಲ್ಲೆಲ್ಲಾ ಅವರು ಬಹಳ ಚಾಣಾಕ್ಷರು!"– ಆರಂಭಿಸಿದರು, ಬೇರೆ ರೀತಿಯಲ್ಲಿ. ಯಮನ ಮೇಲೆ ಪರಿಣಾಮವಾಯಿತು.

" ಆಹಾ! ಏನು ಹೇಳಲಿ ನಾರದರೇ? ಅದ್ರಲ್ಲೂ, ಆ ಚಾಣಾಕ್ಷ ಲೋಕದ ಹೆಣ್ಣುಮಕ್ಕಳು ಬಲೇ ಮಾಯಾವಿಗಳು! ನಮ್ಮ ರಂಭೆ, ಊರ್ವಶಿ, ಮೇನಕೆಯರು ಯಾತಕ್ಕೂ ಬೇಡ, ಅವರುಗಳ ಮುಂದೆ . . "–ಯಮ ಉದ್ಗರಿಸಿದ್ದೇ ತಡ,

" ಯಾಕೆ ಯಮದೇವ, ನಿನ್ನ ತಂಟೆಗೇನಾದ್ರೂ ಬಂದರೇ?"– ನಿಜಕ್ಕೂ ಗಾಭರಿಯಾದರು ನಾರದರು– " ನಿನ್ನ ಮುಂದೆ ಡ್ಯಾನ್ಸ್ ಮಾಡಿ, . . . ."

" ಅಷ್ಟೆಲ್ಲಾ ಧೈರ್ಯ ಎಲ್ಲಿದೆ ಅವಕ್ಕೆ! ಆ ವಿಶ್ವಾಮಿತ್ರನಷ್ಟು ಪೆದ್ದಲ್ಲ ನಾನು! ನಾನು ನರಕಾಧಿಪತಿ!"– ಹಜಾಮನನ್ನೇ ಕಾಣದಿದ್ದ ಮೀಸೆಯನ್ನ ಎಳೆಯುತ್ತಾ ಹೂಂಕರಿಸಿದನು, ಆ ಪತಿ.

"ಹೌದಲ್ಲಾ?"– ನಾರದರು ಒಪ್ಪಿಕೊಂಡರು–" ಮತ್ತೆ?"

"ಶಿಸ್ತಿನ ಸಿಪಾಯಿಗಳಂತಿದ್ದ ನನ್ನ ಭಂಟರನ್ನೆಲ್ಲಾ ವಶೀಕರಣ ಮಾಡ್ಕೊಂಡು ಬಿಟ್ಟಿದಾರಲ್ಲಾ, ಆ ಭೂಲೋಕದ ಅಪ್ಸರೆಯರು ನಾರದಪ್ಪಾ, ಏನ್ಮಾಡೋದು?" ಒಮ್ಮೆಲೆ ಆ ದರ್ಪವೆಲ್ಲಾ ಇಳಿದು, ಕಂಗಾಲಾಗಿ ಬಿಟ್ಟನು ಯಮ–"ಏನ್ಮಾಡೋದು?"

'ಓಹೋ, ವಿಶಯ ಸ್ವಾರಸ್ಯವಾಗಿದೆ!'– ನಾರದರು ಜಿಗಿದರು, ಯಮನ ಬಾಯಿಯ ಬಳಿ–"ಏನು, ಏನು? ಬಿಡಿಸಿ ಹೇಳು?"

ವಿಷಯ ಇಷ್ಟೆ– ಇಲ್ಲಿಂದ ಹೋಗಿಳಿದ ದೈತ್ಯಾಕಾರದ ಯಮದೂತರನ್ನು ಮಾಷೋ (Macho) ಎಂದು ಗುರುತಿಸಿದ ಆ ಭೂಲೊಕದ ಅಪ್ಸರೆಯರು ಅದೆಂಥಾದ್ದೋ ಷಾಂಪೇಜ್, ಬಾಲ್ರೂಮ್ ಡ್ಯಾನ್ಸು–ವಾಲ್ಟ್ಸು ಫಾಕ್ಸ್‌ಟ್ರಾಟು–ಸ್ಕಾಚು, ಇವುಗಳಿಂದ ಮಂಕುಬೂದಿ ಎರಚಿ, ಅಲ್ಲೇ ಖಾಯಂ ಆಗಿ ಇರಿಸಿಕೊಂಡ್ಬಿಟ್ಟಿದ್ದಾರೆ! ಹೀಗಾಗಿ ಇಲ್ಲಿ ನಂಗೆ ಯಾರೂ ಆಳುಗಳೇ ಇಲ್ಲ! " ಯಮ ಗೋಳಾಡಿದನು.

"ಇದ್ದುಕೊಳ್ಳಲಿ ಬಿಡು, ಪಾಪ, ಎಷ್ಟೊಂದು ಯುಗಗಳಿಂದ ನಿಮಿಷ ಬಿಡುವಿಲ್ದೆ ನಿನ್ನ ಸೇವೆ ಮಾಡ್ತಾ ಬಂದಿದಾರೆ ಅವ್ರು! ಹಾಗಿರೋವಾಗ ಅವ್ರಿಗೂ ಸ್ವಲ್ಪ ರಜಾ–ಮಜಾ ಬೇಡ್ವೆ?"–ನಾರದರು ಸಮಾಧಾನ ಮಾಡೊಕ್ಕೆ ಹೋದಾಗ,

"ಹಾಗೋ? ಹಾಗಾದ್ರೆ, ಇಲ್ಲಿಗೆ ಬರ್ಬೇಕಾಗಿರೋ ಆ ಜೀವಗಳು? ಅವನ್ನೆಲ್ಲಾ ಇಲ್ಲಿಗೆ ತರೋವ್ರು ಯಾರು? ನೀವು ತರ್ತೀರಾ?"– ಅಂತ ಕೇಳೋದೇ?

"ಇದೊಳ್ಳೆ ಫಜೀತಿಯಾಯ್ತಲ್ಲಾ! ಚೆನ್ನಾಗಿ ಬಂದು ಸಿಕ್ಕಿಹಾಕಿಕೊಂಡ್ನೆಲ್ಲಾ!' – ನಾರದರು ತಪ್ಪಿಸಿಕೊಂಡು ಹೋಗಲು ನೋಡಿದ್ರು, ಆದ್ರೆ, ಯಮನೇ ಬಿಡುವವನು!

ನಿಲ್ಲಿಸಿ ಕೇಳಿಕೊಂಡನು–"ಏನಾದ್ರೂ ಉಪಾಯ ತಿಳಿಸಿ ನಾರದರೆ–ನಂಗೆ ದಾರಿ ತೋರಿಸಿ; ನೀವೇ ಹೇಳಿ, ಅವೆಲ್ಲಾ ಭೂಲೊಕದಲ್ಲೇ ಇದ್ರೆ ಮಾನವ ಲೋಕ ಹೋಗಿ, ಸತ್ತವರ ಲೋಕ ಆಗೋದಿಲ್ವೇ?"

ಯಮನ ಆತಂಕ ಅರ್ಥವಾದದ್ದೇ, ನಾರದ ನಾರಾಯಣನ ಮೊರೆಹೋದರು..

"ಹೌದು, ಇದು ಬಹಳ ದೊಡ್ಡ ಸಮಸ್ಯೆ!"- ನಾರಾಯಣನೂ ಗಾಭರಿಯಾದನು- "ಆಯಸ್ಸು ಮುಗಿದ್ರೂ ಭೂಲೋಕದಲ್ಲೇ ಇರೋದು ಎಂದ್ರೇನು! ನಾನೇ ಬಂದೆನಂತೆ- ಶ್ರೀರಾಮ, ಶ್ರೀ ಕೃಷ್ಣ ಆಗಿದ್ದಾಗ! ಅಂಥಾದ್ರಲ್ಲಿ. . . . . . . ." ಕೂತಲ್ಲೇ ನಾರಾಯಣ ಸೃಷ್ಟಿಸಿದನು-ಒಂದು ಭೂತಾಕಾರವನ್ನು.

"ಇದಕ್ಕೆ ಯಾವ ಅಪ್ಪಣೆಯನ್ನ ಬೇಕಾದ್ರೂ ಮಾಡು ಯಮ-ನಿಮಿಷಾರ್ಧದಲ್ಲಿ ಮಾಡಿ ಮುಗಿಸತ್ತೆ"-ತಿಳಿಸಿದನು.

"ಹೌದೇ? ಹಾಗಾದ್ರೆ"-ಅನುಮಾನದಿಂದಲೇ ಆಜ್ಞಾಪಿಸಿದನು ಯಮ, ಆ ಭೂತಾಕಾರಕ್ಕೆ- "ಎಲ್ಲಿ, ಈಗಲೇ ಭೂಲೋಕಕ್ಕೆ ಹೋಗಿ, ನಮ್ಮಲ್ಲಿಗೆ ಬರಬೇಕಾಗಿರೊವ್ರನ್ನೆಲ್ಲ ಎಳೆದುಕೊಂಡು ಬಾ, ನೋಡೋಣ? ಹಾ, ನನ್ನ ಆ ಧೂರ್ತ ದೂತರನ್ನ ಮರೀಬೇಡ!"

ನಿಮಿಷಾರ್ಧದಲ್ಲಿ ನರಕದ ಭರ್ತಿ ಸತ್ತವರ ದಂಡು! ಯಮ-ಚಿತ್ರಗುಪ್ತ, ಇವರುಗಳಿಗೇ ನಿಂತುಕೊಳ್ಳೊಕ್ಕೆ ಸಹಾ ಜಾಗ ಇಲ್ಲದ ಹಾಗೆ! ಸಂತೊಷಪಡ್ಬೇಕೋ, ನಗಬೇಕೋ, ತಿಳಿಯಲಿಲ್ಲ.

ಮಾರ್ಗದರ್ಶನಕ್ಕಾಗಿ ನಾರದರತ್ತ ನೋಡಿದ್ರೆ, ಅವರೇ ಸರ್ಕಸ್ ಮಾಡ್ತಿದ್ರು - ತಂಬೂರಿ ಎಲ್ಲೆಲ್ಲೋ ಸಿಕ್ಕಿಹಾಕಿಕೊಂಡು!

"ತಪ್ಪಾಯ್ತು ಪ್ರಭೂ, ಇನ್ಮೇಲಿಂದ ಯಾವತ್ತೂ, ಖಂಡಿತ ಇಂಥಾ ತಪ್ಪನ್ನ ಮಾಡಲ್ಲ- ಮೊದಲು, ಈ ಭೂತವನ್ನ ಇಲ್ಲಿಂದ ಕಳಿಸ್ಬಿಡಿ" -ಎಂದು ಯಮದೂತರು ಅಡ್ಡಬೀಳುತ್ತಲೂ, ಮೇಲಿನಿಂದಲೇ ಎಲ್ಲವನ್ನೂ ವೀಕ್ಷಿಸಿ, ನಗುತ್ತಿದ್ದ ನಾರಾಯಣ ಮಲಗಿದ್ದಲ್ಲೇ ಆಶೀರ್ವದಿಸಿದನು- "ಎಲೈ ಕಲಿಯುಗದ ಭೀಮಸೇನನೇ, ಈಗಿಂದೀಗಲೇ ನೀನು ಭೂಲೋಕಕ್ಕೆ ತೆರಳುವಂತವನಾಗು- ಅಲ್ಲಿ ಮಾನವರು ಹೇಳಿದ ಪ್ರತಿಯೊಂದು ಕೆಲಸಕಾರ್ಯಗಳನ್ನೂ ಅಚ್ಚುಕಟ್ಟಾಗಿ ನಿರ್ವಹಿಸಿ, 'ರೊಬಟ್' ಎಂಬ ಅದ್ಭುತ ನಾಮಧೇಯದಿಂದ ಅಮರನಾಗು"-ಎಂದು!

■

---

**'ನೋಡಿ ನಾನು ಇದನ್ನು ನಿಮಗೆ ತೋರಿಸಲು ಬಯಸುವೆ'**
**ಎಂದು ಯಾರಾದರೂ ಅಂದಾಗ ಅದು**
**ಹಣ ಆಗಿರುವುದೇ ಇಲ್ಲ.**

# ವೆಂಕಟಪತಿ ಮತ್ತು ಭವಿಷ್ಯ

ವೆಂಕಟಪತಿಯ ರಾಶಿ 'ತುಲಾ'. ಅವನಿಗೆ ತನ್ನ ರಾಶಿಯ ಬಗ್ಗೆ ಬಲು ಹೆಮ್ಮೆ. ತನ್ನದು ಯಾವಾಗಲೂ 'ಬಾಲೆನ್ಸೆಡ್ ಮೈಂಡ್'. ಗಾಂಧೀಜಿಯದು 'ತುಲಾ'ರಾಶಿ ಗೊತ್ತೇನೆ?ಅಂತ ತನ್ನ ಹೆಂಡತಿಯ ಬಳಿ ಜಂಬ ಕೊಚ್ಚಿಕೊಳ್ಳುತ್ತಿದ್ದ. ಅವನಿಗೆ ಜ್ಯೋತಿಷ್ಯ, ಭವಿಷ್ಯ ಇವುಗಳಲ್ಲೆಲ್ಲಾ ಭಾರೀ ನಂಬಿಕೆ. ಪತ್ರಿಕೆಗಳಲ್ಲಿ ಬರುವ ದೈನಿಕ, ಪಾಕ್ಷಿಕ, ಸಾಪ್ತಾಹಿಕ, ಮಾಸಿಕ, ವಾರ್ಷಿಕ ಎಲ್ಲದರಲ್ಲೂ ಭವಿಷ್ಯದ ಪುಟಗಳನ್ನು ಮರೆಯದೆ ತಿರುವಿ ಹಾಕುತ್ತಿದ್ದ. ಹಸ್ತಸಾಮುದ್ರಿಕಾ ಶಾಸ್ತ್ರ, ಗಿಳಿಶಾಸ್ತ್ರ ಯಾವುದನ್ನೂ ಬಿಡುತ್ತಿರಲಿಲ್ಲ. ಹೆಂಡತಿ ಸುಬ್ಬಲಕ್ಷ್ಮಿ ಬೈಯುತ್ತಿದ್ದಳು." ಏನಾಗಬೇಕೊ ಅದಾಗೇ ತೀರುತ್ತದೆ, ನಮ್ ಕೈಯಲ್ಲೇನಿದೆ? ಇಂಥದಕ್ಕೇ ದುಡ್ ದಂಡ ಅಷ್ಟೇ! ಅದೇನೋ ಒಳ್ಳೇದಿದ್ರೆ ಸರಿ, ಕೆಟ್ಟದಿದ್ದರೆ ಮನಸ್ಸಿಗೆ ಸುಮ್ನೆ ಬೇಜಾರು! ಇದೊಂದು ಹುಚ್ಚು ನಿಮಗೆ! ಬೆಂಗ್ಳೂರಲ್ಲಿ ಯಾವ ಯಾವ ಬೀದೀಲಿ ಹಸ್ತ ಸಾಮುದ್ರಿಕಾ ಶಾಸ್ತ್ರ ಕೇಂದ್ರಗಳಿವೆ, ಗಿಳಿ ಶಾಸ್ತ್ರದೋರು ಯಾವ ಯಾವ ಫುಟ್‌ಪಾತ್ನಲ್ಲಿ ಕುಳಿತುಕೊಳ್ಳುತ್ತಾರೆ, ಎಲ್ಲಾ ಗೊತ್ತು!" ಎಂದು ಗೊಣಗಾಡುತ್ತಿದ್ದಳು.

ವೆಂಕಟಪತಿಯ ಬಲಗೈಯನ್ನು ಶಾಸ್ತ್ರದೋರು ಎಳೆದೆಳೆದು ಈಗ ಉದ್ದವಾಗಿದೆ, ಪೀಚಾದಂತೆ ಕಾಣಿಸುತ್ತದೆ. ಬಲಗೈ ಪೀಚಾಗಿದ್ದರೂ ಶಾಸ್ತ್ರಕ್ಕೆ ಪೀಚೇ ಮೂಡ್ ಹೇಳಿ ಪೇಚಾಡುವವನಲ್ಲ ಈ ವೆಂಕೂ... ಯಾರೊ ಒಬ್ಬ ಶಾಸ್ತ್ರದೋನು "ನಿಮಗೆ ಎರಡನೆಯ ಮದುವೇ ಯೋಗವಿದೆ, ಸುರಸುಂದರಿಯಾದ ಹೆಂಡತಿ ಸಿಕ್ಕುತ್ತಾಳೆ" ಎಂದು ಹೇಳಿದನಂತೆ.ಆ ಹೊತ್ತಿನಿಂದ ಅವನ ಹೃದಯ, ಈ ಮೊದಲು ಬಾಯಿ ಮುಚ್ಚಿಕೊಂಡು ನಿಮಿಷಕ್ಕೆ 72 ಸಲ ನಿಷ್ಠೆಯಿಂದ ಬಡಿದುಕೊಂಡು ಸುಬ್ಬಿಯ ಹೃದಯದೊಂದಿಗೆ ತೆಪ್ಪಗೆ ಸಂಸಾರ ಮಾಡಿಕೊಂಡಿದ್ದದ್ದು, ಈಗ ಹೊಸ ಪ್ರೀತಿಯ ರಾಗ ಹಾಡುವುದಕ್ಕೆ ಪ್ರಾರಂಭಿಸಿತು. ಕನಸುಗಳು ಹೆಚ್ಚಾದಾಗ ಹುಚ್ಚಾಪಟ್ಟೆ ಹೊಡೆದುಕೊಂಡು ಬಿ.ಪಿ. ಏರುಪೇರಾಗುತ್ತಿತ್ತು...

ಮೊನ್ನೆ ಮೊನ್ನೆ ಯಾವುದೋ ಪತ್ರಿಕೆಯಲ್ಲಿ ಓದಿದಂತೆ "ಮದುವೆಗೆ ಮುಂಚೆ ಅಪ್ಸರ, ನಂತರ ಅಪಸ್ವರ" ಎನ್ನುವಂತೆ ಮದುವೆಗೆ ಮುನ್ನ ತೆಳ್ಳಗೆ, ಬೆಳ್ಳಗೆ ಬಳುಕುತ್ತಿದ್ದ ಸುಬ್ಬಿ, ಮದುವೆಯಾದ ಏಳೆಂಟು ವರುಷಗಳಲ್ಲೇ ಅಡ್ಡಡ್ಡ ಬೆಳೆದು ಸುಬ್ಬಮ್ಮನೇ ಆಗಿ ಬಿಟ್ಟಿದ್ದಳು. ಮದುವೆಯಾದ ಮೇಲೆ ಯಾರು ಮೆಚ್ಚಬೇಕು ಎಂದು ಹೇಗೋ ಒಂದು ಡ್ರೆಸ್ ಮಾಡುತ್ತಿದ್ದವನು ಈಗ ಬಟ್ಟೆಗಳನ್ನು ಇಸ್ತ್ರಿ ಮಾಡಿಯೇ ಹಾಕಲಾರಂಭಿಸಿದ. ವೆಂಕಟಪತಿಯ ಶರೀರಕ್ಕೆ ಸೆಂಟಿನ ನಂಟೂ ಸೇರಿ ಅವನು ಘಮಘಮಿಸುತ್ತ "ಶಿಸ್ತುಗಾರ ಪುಟ್ಟಸ್ವಾಮಿ"ಯಂತೆ ಹೊರ ಹೊರಟಾಗ ಇದೇನೀ ಹೊಸ ವೇಷ! ಎಂದು ಸುಬ್ಬಿ ಮಬ್ಬಾಗಿ ಮಂಕಾಗಿ, ಕಣ್ಣರಳಿಸಿ ಈ ವೆಂಕಿಯನ್ನೇ ಮಿಕಮಿಕನೆ ನೋಡುತ್ತಿದ್ದಳು.

ಚಲನಚಿತ್ರ, ಟಿ.ವಿ.ಸೀರಿಯಲ್ ಸುಂದರಿಯರನೆಲ್ಲ ನೆನೆಸಿಕೊಂಡು ಹೇಗಿರಬಹುದು ನನ್ನ ಸುರಸುಂದರಿ ಎಂದು ಕನಸು ಕಾಣುತ್ತ, ಬಸ್ ಸ್ಟಾಪ್ ಗಳಲ್ಲಿ, ರಸ್ತೆಯಲ್ಲಿ ಬಳುಕುವ ಲಲನೆಯರಲ್ಲಿ ಹುಡುಕುತ್ತಿದ್ದ. ಇಂಥ ವೆಂಕಟಪತಿಗೆ ಒಂದು ದಿನ

ಏನಾಯಿತು? ಯಾವುದೋ ಹಳೆಯ ಪ್ಯಾಂಟು, ಷರಟೊಂದನ್ನು ಧರಿಸಿದ್ದಾನೆ, ಕ್ರಾಪೆಲ್ಲಾ ಕೆದರಿ ಮಂಕಾಗಿ ವೆಂಕಟಪತಿ " ಸಂಕಟಪತಿ" ಯಂತೆ ಕುಳಿತಿರುವುದು ನೋಡಿ ಅವನ ಗೆಳೆಯನ ಮನ ಕರಗಿ ಹೋಯತು. "ವೆಂಕೂ, ಏನಾಯ್ತೋ ನಿನಗೆ?" ಎನ್ನುತ್ತಿದ್ದಂತೆ ದುಃಖ ಹೆಚ್ಚಾಗಿ ಗೊಳೋ ಎಂದು ಅಳಲಾರಂಭಿಸಿದಾಗ ಗೆಳೆಯ ಹೌಹಾರಿದ. ಗೆಳೆಯನ ಕೈ ಹಿಡಿದು "ನೀನು ಆತ್ಮೀಯ ಗೆಳೆಯ, ನಿನ್ನಲ್ಲಿ ಮುಚ್ಚಿಡುವುದೇನಿದೆ? ಸುಂದರಿಯಾದ ಎರಡನೇ ಹೆಂಡತಿ ಸಿಗುತ್ತಾಳೆಂದು ಆ ನಾಲ್ಕನೇ ಕ್ರಾಸಿನ ಅರಳೀ ಮರದ ಕಟ್ಟೇ ಮೇಲೇ ಕುಳಿತುಕೊಳ್ಳುವ ಶಾಸ್ತ್ರದೋನು ಹೇಳಿದ್ದನಲ್ಲ, ಅವನು ಹೇಳಿದ್ದೆಲ್ಲ ಯಾವಾಗಲೂ ನಿಜವಾಗುತ್ತಿತ್ತು. ಮೊನ್ನೆ ಆ ಫೇಮಸ್ ಗಿಳಿಶಾಸ್ತ್ರದೋನು ಇದ್ದಾನಲ್ಲ, ಸಿದ್ಧ ಮರಿಯಪ್ಪ ಅಂತ.. ಅವನ ಬಳಿ ಹೋದೆ.. ಮನಸ್ಸು ತಡೆಯದೆ ಆ ಸುಂದರಿ ಯಾವಾಗ ಸಿಕ್ತಾಳೆ, ಇನ್ನೆಷ್ಟು ದಿನ ಕಾಯಬೇಕು? ಎಂದು ಕೇಳಿದೆ. ಅವನು ಗಿಣಿಯ ಕೈಯಲ್ಲಿ ಪತ್ರ ತೆಗೆಸಿದ. ಅದರಲ್ಲಿ "ಮುಂದಿನ ಜನ್ಮ" ಅಂತ ಬರೆದಿತ್ತು. ಅಯ್ಯೋ ನನಗೆ ಸುಬ್ಬಿಯೇ ಗತಿ ಇನ್ನು...ಎಂದು ಅಳಲಾರಂಭಿಸಿದ.

ಗೆಳೆಯ ಅವನನ್ನು ಸಮಾಧಾನ ಮಾಡುತ್ತ "ಒಂದು ಸಂತೋಷದ ವಿಷಯ ಅದರಲ್ಲಿದೆ ಬಿಡೋ, ಮುಂದಿನ ಜನ್ಮದಲ್ಲಿ ಇಬ್ಬರು ಹೆಂಡತಿಯರು ಸಿಗುತ್ತಾರಲ್ಲೋ..." ವೆಂಕೂ ಅಳು ನಿಲ್ಲಿಸಿ ಗೆಳೆಯನ ಮುಖ ನೋಡಿದ "ಇದೇನು ಕಿಂಡಲ್ಲೋ ಅಥವಾ ಸೀರಿಯಸ್ಸಾಗಿ ಹೇಳ್ತಾ ಇದಾನೋ ಅಂತ ಅರ್ಥವಾಗಲೇ ಇಲ್ಲ!

■

## ಯಾರದ್ದು?

ತಂದೆ ಸ್ಕೂಟರ್ ರಿಪೇರಿ ನಡೆಸುತ್ತಿದ್ದರು. ಮಗ ಬೇರೆಡೆ ನೌಕರಿ ಹಿಡಿದಿದ್ದ. ಪ್ರತಿ ದಿನ ಆಫೀಸಿಗೆ ಹೋಗಲು ರಿಪೇರಿ ಆಗಿದ್ದ ಸ್ಕೂಟರ್ ಬಳಸುತ್ತಿದ್ದ. ಅದು ಟೆಸ್ಟ್ ರೈಡ್ ಆಗಿದ್ದು ಎಲ್ಲ ಸರಿ ಇದೆ ಎಂದು ತಿಳಿದ ಮೇಲೆ ಅದರ ಮಾಲೀಕನಿಗೆ ಗಾಡಿ ಕೊಡಲಾಗುತ್ತಿತ್ತು. ಹೀಗೆ ಪ್ರತಿ ದಿನ ಒಂದೊಂದು ಸ್ಕೂಟರ್‌ನಲ್ಲಿ ಬರುವಾಗಲೂ ಸಹೋದ್ಯೋಗಿಗಳು 'ನಿಂದೇನಾ ಗಾಡಿ?' ಎಂದು ಕೇಳುತ್ತಿದ್ದರು. ಇವನು ಸಮಾಜಾಯಿಷಿ ನೀಡುತ್ತಿದ್ದ.

ಕೊನೆಗೊಂದು ದಿನ ಇವನೇ ಒಂದು ಸ್ಕೂಟರ್ ಕೊಂಡ. ಅದರ ಮೇಲೆ ಧಿಮಾಕಿನಿಂದ ಆಫೀಸಿಗೆ ಬಂದ. ಅದರಿಂದ ಇಳಿಯುತ್ತಿದ್ದಂತೆ ಸಹೋದ್ಯೋಗಿಯೊಬ್ಬ ಬಂದು 'ಯಾರದ್ದು ಸ್ಕೂಟರ್?' ಎಂದು ಕೇಳುವುದೆ?

● **ದಂನಆ**

- ನಂದು ನಂದು ಅನ್ನೋದು ಮಹಾಭಾರತ. ನಿಂದು ನಿಂದು ಅನ್ನೋದು ರಾಮಾಯಣ. ಇವತ್ತು ಎಲ್ಲಾ ನಿಮ್ದು ಅಂತ ರಾಮನ ಹೆಸರಿನಾಗೆ, ಎಲ್ಲಾನೂ ನಂದೇ ಅನ್ನೋ ಮಹಾಭಾರತ ನಡೀತಾ ಇದೆ.
- ಸುಪ್ರಸಿದ್ಧ ಸಾಹಿತಿಗಳು ಬರೆಯುತ್ತಾರೆ. ಏಕೆಂದರೆ ಅವರಿಗೆ ಬರೆಯದಿರಲು ಸಾಧ್ಯವೇ ಇಲ್ಲ.
- ವೆನ್ ಯು ಆರ್ ಫಿಟ್ ಎನಿಥಿಂಗ್ ಯು ವೇರ್ ಲುಕ್ಸ್ ಗುಡ್.
- ನೀನು ಯಾವ ದೇವರನ್ನು ಪ್ರಾರ್ಥಿಸಿದೆ? ಈ ದುರಂತವನ್ನು ಮಾಡಿಸಿದ ದೇವರಿಗೆ? ಅಥವಾ ಈ ದುರಂತವನ್ನು ತಪ್ಪಿಸಲು ಏನೂ ಮಾಡದ ದೇವರಿಗೆ?
- ಈ ವಿಶ್ವದಲ್ಲಿ ಎರಡು ಬಗೆಯ ಜನರಿದ್ದಾರೆ. ಕೊಡುವವರು ಮತ್ತು ತೆಗೆದುಕೊಳ್ಳುವವರು. ತೆಗೆದುಕೊಳ್ಳುವವರು ಚೆನ್ನಾಗಿ ಉಣ್ಣುತ್ತಾರೆ. ಕೊಡುವವರು ತೃಪ್ತಿಯಿಂದ ನಿದ್ರಿಸುತ್ತಾರೆ.
- ವಾಟ್ ಯು ಡು ಇನ್ ರಿಯಲ್ ಲೈಫ್ ಈಸ್ ಮೋರ್ ಇಂಪಾರ್ಟೆಟೆಂಟ್ ದ್ಯಾನ್ ವಾಟ್ ಯು ಡು ಇನ್ ಸೋಷಿಯಲ್ ಮೀಡಿಯ ಲೈಫ್.
- ಏನಾದರು ಚೆನ್ನಾಗಿ ಮಾಡಬಹುದು ಎಂದು ಅನಿಸಿದರೆ ಅದನ್ನು ಈಗಾಗಲೇ ಯಾರಾದರು ಮಾಡಿಯೇ ಬಿಟ್ಟಿರುತ್ತಾರೆ.
- ಮಕ್ಕಳಿಗೆ ನಾವು ಸಾಮಾನ್ಯವಾಗಿ ನೆನಪಿನಲ್ಲಿ ಉಳಿಸಿಕೊಳ್ಳಬೇಕಾದ ಉತ್ತರಗಳನ್ನು ಕೊಡುತ್ತೇವೆ. ಉತ್ತರ ಪಡೆದುಕೊಳ್ಳಬೇಕಾದ ಸವಾಲುಗಳನ್ನು ಅಲ್ಲ.
- ದೇವರು ನಮಗೆ ಬೀಜಗಳನ್ನು ಕೊಡುತ್ತಾನೆ. ಆದರೆ ಸುಲಿದು ಕೊಡುವುದಿಲ್ಲ.
- ಎ ಫಿಟ್ ಅಂಡ್ ಹೆಲ್ತಿ ಬಾಡಿ ಈಸ್ ದಿ ಬೆಸ್ಟ್ ಫ್ಯಾಶನ್ ಸ್ಟೇಟ್‌ಮೆಂಟ್.
- ಜಗತ್ತಿನಲ್ಲಿ ಪ್ರವಾಸಿಗರಿಬ್ಬರೇ – ಸೂರ್ಯ ಮತ್ತು ಚಂದ್ರ. ಅವರು ಎಲ್ಲೆಡೆ ಇರುತ್ತಾರೆ.
- ದೇವಸ್ಥಾನಕ್ಕೆ ಹೋಗುವಾಗಲೂ ಹುಷಾರಾಗಿ ಹೋಗಿ ಬಾ ಎಂದು ಹೇಳಬೇಕೆ?
- ದಿ ವರ್ಲ್ಡ್ ಈಸ್ ಫೋಕಸ್ಡ್ ಆನ್ ಜಸ್ಟ್ ಲುಕಿಂಗ್ ಗುಡ್ ನಾಟ್ ಫೀಲಿಂಗ್ ಗುಡ್ ಫ್ರಂ ವಿಥಿನ್. ದಟ್ಸ್ ವೈ ಎವೆರಿಒನ್ ಲುಕ್ಸ್ ಗುಡ್ ಆನ್ ಸೋಷಿಯಲ್ ಮೀಡಿಯ.
- ನಾನು ಮರಗಳ ಪರವಾಗಿ ಮಾತನಾಡುತ್ತೇನೆ ಏಕೆಂದರೆ ಅವುಗಳಿಗೆ ನಾಲಿಗೆ ಇಲ್ಲ.
- ನಾನು ಏನನ್ನೂ ಪ್ಲಾನ್ ಮಾಡುವುದೇ ಇಲ್ಲ. ಏಕೆಂದರೆ ನಾನು ಪ್ಲಾನ್ ಮಾಡಿದಾಗ ದೇವರು ನಗುತ್ತಿರುತ್ತಾನೆ!
- ಐ ವುಡ್ ನೆವರ್ ಡೈ ಫಾರ್ ಮೈ ಬಿಲೀಫ್ಸ್ ಬಿಕಾಸ್ ಐ ಮೈಟ್ ಬಿ ರಾಂಗ್.
- ಫಿಲಾಸಫರ್ಸ್ ಕ್ಲಬ್‌ನಲ್ಲಿ WhyFi ಉಚಿತ.

■

# ಸಮಯ ಪರಿಪಾಲನೆ

● ಎಚ್. ಶಾಂತರಾಜ ಐತಾಳ್

ಹಿಡಿದ ಕೆಲಸವನ್ನು ನಿಗದಿಪಡಿಸಿದ ಅವಧಿಯ ಒಳಗೆ ಪೂರೈಸಿ ವಿಖ್ಯಾತರಾದವರೆಂದರೆ ಸರ್ ಎಂ.ವಿಶ್ವೇಶ್ವರಯ್ಯನವರು. ಅವರು ತಮ್ಮ ಜೀವಮಾನದುದ್ದಕ್ಕೂ ಪರಿಪಾಲಿಸಿಕೊಂಡು ಬಂದ ಶಿಸ್ತು, ಸಮಯ ಪ್ರಜ್ಞೆಗಳಿಗೆ ಸರಿಸಾಟಿಯೇ ಇರಲಾರದು. ನಮ್ಮವರೇ ಆದ ಕಡಲತೀರದ ಭಾರ್ಗವ ಶಿವರಾಮ ಕಾರಂತರು ಸಮಯಕ್ಕೆ ತುಂಬ ಮಹತ್ವ ನೀಡುತ್ತಿದ್ದರು. ಅವರು ಭಾಗವಹಿಸಬೇಕಾದ ಸಭೆ, ಸಮಾರಂಭಗಳು ಸೂಚಿಸಿದ ಸಮಯದಲ್ಲಿ ಆರಂಭವಾಗದಿದ್ದಲ್ಲಿ, ಸಂಘಟಕರ ಬೆವರಿಳಿಸುತ್ತಿದ್ದರು ಕಾರಂತರು.

ಒಮ್ಮೆ ಶಿವಮೊಗ್ಗದಲ್ಲಿ ನಡೆಯಬೇಕಾಗಿದ್ದ ಸಾಂಸ್ಕೃತಿಕ ಕಾರ್ಯಕ್ರಮ ಒಂದಕ್ಕೆ ಶಿವರಾಮ ಕಾರಂತರು ಮುಖ್ಯಅತಿಥಿಯಾಗಿ ಕ್ಲಪ್ತ ಸಮಯಕ್ಕೆ ಆಗಮಿಸಿದ್ದರು. ಮತ್ತೆ ಒಂದು ಹತ್ತು ನಿಮಿಷ ಕಾದರೂ, ಕಾರ್ಯಕ್ರಮ ಆರಂಭವಾಗುವ ಸೂಚನೆ ಕಂಡು ಬರಲಿಲ್ಲ. ಅವರು ಅಲ್ಲಿಯ ಕಾರ್ಯಕರ್ತರೊಬ್ಬರನ್ನು ಕೇಳ್ತಾರಂತೆ–ಯಾಕೆ ಇನ್ನೂ ತಡ ಮಾಡ್ತಾ ಇದ್ದೀರಿ–ಅಂತ. ಅದಕ್ಕಾತ–ಜನ ಇನ್ನೂ ಸೇರಲಿಲ್ಲ ಸರ್; ಹಾಗಾಗಿ ಸ್ವಲ್ಪ ಕಾಯೋಣ ಅಂತ ಅಧ್ಯಕ್ಷರು ಹೇಳಿದರು–ಅಂದನಂತೆ. ತಕ್ಷಣ ಕಾರಂತರು–ಇಲ್ಲಿ ಸಂತೆ ನಡೆಯುವ ಜಾಗ ಎಲ್ಲಿದೆ? ಎಂದು ಕೇಳ್ತಾರೆ. ಇಲ್ಲಿಂದ ಸುಮಾರು ಒಂದು ಮೈಲಿ ದೂರವಿದೆ ಸ್ವಾಮಿ– ಎಂಬ ಉತ್ತರ ಬಂತು. 'ಹಾಗಾದರೆ ನಾವು ಅಲ್ಲಿಗೇ ಹೋಗುವ–ಅಲ್ಲಿ ಹ್ಯಾಗೂ ಜನ ಇರ್ತಾರಲ್ವ?'– ಎಂದು ಖಾರವಾಗಿಯೇ ಸೂಚಿಸ್ತಾರಂತೆ ಕಾರಂತರು.

ಯಾವುದೇ ಸಮಾರಂಭಕ್ಕೆ ಸಮಯ ಮೀರಿ ಆಗಮಿಸುವುದರಲ್ಲಿ ರಾಜಕಾರಣಿಗಳನ್ನು ಮೀರಿಸಲು ಯಾರಿಂದಲೂ ಸಾಧ್ಯವಿಲ್ಲ. ಕೆಲ ವರ್ಷಗಳ ಹಿಂದೆ ಮಂಗಳೂರಿನ ನೆಹ್ರೂ ಮೈದಾನದಲ್ಲಿ ಸಂಜೆ 4 ಗಂಟೆಗೆ ರಾಜಕೀಯ ಧುರೀಣರೊಬ್ಬರ 'ಗುರ್ಕಾರಿಕೆ'ಯಲ್ಲಿ ಸಭೆಯೊಂದನ್ನು ಆಯೋಜಿಸಲಾಗಿತ್ತು. ಈ ಮಹಾಶಯರು ಸುಮಾರು ಐದು ಗಂಟೆ ಹೊತ್ತಿಗೆ ಕದ್ರಿಯಲ್ಲಿರುವ ಸರ್ಕಾರಿ ಅತಿಥಿ ಗೃಹಕ್ಕೆ ಆಗಮಿಸಿ, ತಕ್ಷಣ ಕಾರ್ಯಕ್ರಮ ನಡೆಯುವ ಸ್ಥಳದಲ್ಲಿದ್ದ ತನ್ನ ಆಪ್ತರನ್ನು ಸಂಪರ್ಕಿಸಿ, 'ಎಂಚ?' ಎಂದು ಮಾತ್ರ ಕೇಳಿದರು. ಇದರ ಅರ್ಥ ನನಗೆ ಆ ಮೇಲೆ ಹೊಳೆದಂತೆ 'ಪರಿಸ್ಥಿತಿ ಹೇಗಿದೆ? ಮೈದಾನದ ತುಂಬ ಜನರನ್ನು ತುಂಬಿದ್ದೀರಾ? ನಾನು ಬರಬಹುದಾ, ಹೇಗೆ!'–ಎಂದೇ ಇರಬೇಕು ಅದಕ್ಕೆ ಧುರೀಣರ ಆಪ್ತ 'ಇನ್ನೂ ಐದು ಲಾರಿ ಬರಲಿಕ್ಕಿದೆ ಸಾರ್! ನೀವು ಐದೂವರೆಗೆ ಬಂದರೆ ಸಾಕು'– ಎಂದು ಉತ್ತರಿಸಿದರು. ಈ ಒಗಟನ್ನು ನಾನು ತಕ್ಷಣ ಬಿಡಿಸಿಕೊಂಡೆ–ಇನ್ನೂ ಐದು ಟ್ರಕ್ಕುಗಳಲ್ಲಿ ಒಟ್ಟು ಸುಮಾರು ಇನ್ನೂರೈವತ್ತು ಜನ ಬರ್ತಾ ಇದ್ದಾರೆ– ಹೀಗಾಗಿ ನೀವು ಇನ್ನು ಸ್ವಲ್ಪ ಹೊತ್ತು ಬಿಟ್ಟು ಬನ್ನಿ! ಅಂತೂ ಸುಮಾರು ಎರಡೇ ತಾಸು ವಿಳಂಬವಾಗಿ ಸಭೆ ಆರಂಭವಾಯಿತು. ಮರುದಿನ ಪತ್ರಿಕೆಗಳಲ್ಲಿ 'ಮಾನ್ಯ ಸಚಿವರು ನೆಹ್ರೂ ಮೈದಾನದಲ್ಲಿ ಸೇರಿದ ಕಿಕ್ಕಿರದ ಜನ ಸಂದಣಿಯನ್ನುದ್ದೇಶಿಸುತ್ತಾ . . . .' ಎಂದು ಪ್ರಕಟವಾದದ್ದನ್ನು ನೋಡಿದ

ಧುರೀಣರು ಕಾರ್ಯಕರ್ತರೆಲ್ಲ ಸಂಭ್ರಮಿಸಿರಬಹುದು. ಇಂತಹ ಘಟನೆಗಳು ಸರ್ವೇ ಸಾಮಾನ್ಯ ಹಾಗೂ ಸರ್ವವ್ಯಾಪಿ!

ಭಾರತ ಪ್ರವಾಸವನ್ನು ಮುಗಿಸಿದ ಆಂಗ್ಲ ಹಾಸ್ಯ ಸಾಹಿತಿಯೊಬ್ಬ ಸ್ವದೇಶಕ್ಕೆ ಹಿಂತಿರುಗಿದ ಬಳಿಕ ಉದ್ಗರಿಸಿದ್ದನಂತೆ 'ಭಾರತದಲ್ಲಿ ಅತಿ ಹೆಚ್ಚು ಸುಳ್ಳು ಹೇಳುವ ಗ್ರಂಥವೊಂದನ್ನು ನಾನು ನೋಡಿದೆ–ಅದು ಅಲ್ಲಿನ ರೇಲ್ವೆ ವೇಳಾಪಟ್ಟಿಯ ಪುಸ್ತಕ!'–ಎಂದು.

ಬಿಹಾರದ ಒಂದು ರೇಲ್ವೆ ಸ್ಟೇಶನ್‌ನಲ್ಲಿ ಹಾದು ಹೋಗುವ ರೈಲುಗಳಲ್ಲಿ ಆಗಾಗ ಸಂಚರಿಸುತ್ತಿದ್ದ ಓರ್ವಗ್ರಾಹಕನಿಗೆ ಒಮ್ಮೆ ಒಂದು ಅಚ್ಚರಿ ಕಾದಿತ್ತಂತೆ. ಪ್ರತಿ ದಿನವೆಂಬಂತೆ 'ಆ' ರೈಲು ಒಂದು ತಾಸೋ, ಎರಡುತಾಸೋ ವಿಳಂಬವಾಗಿಯೇ ಬರುತ್ತಿತ್ತು.ಆದರೆ ಆ ದಿನ ಮಾತ್ರಅರ್ಧಗಂಟೆ ಮುಂಚೆಯೇ, 'ಜುಗ್‌ಜುಗ್' ಎನ್ನುತ್ತಾ ಸ್ಟೇಶನನ್ನು ಹೊಕ್ಕಿತಂತೆ. ಅಚ್ಚರಿ ತಡೆಯಲಾಗದೆ ಆ ಪ್ರಯಾಣಿಕ ಆಗಲೇ ಪರಿಚಿತರಾಗಿದ್ದ ಸ್ಟೇಶನ್ ಮಾಸ್ಟರನ್ನು ಕೇಳಿದನಂತೆ 'ಇದೇನು ಹೀಗೆ! ಸೂರ್ಯ ಇವತ್ತು ಪಶ್ಚಿಮದಲ್ಲಿ ಮೂಡಿದ್ದಾನಾ?' ಅಂತಅದಕ್ಕೆ ಸ್ಟೇಶನ್ ಮಾಸ್ಟರ್ ಅಂದರಂತೆ 'ಹಾಗೇನೂ ಆಗಲಿಲ್ಲ. ನಿನ್ನೆಇದೇ ಹೊತ್ತಿಗೆ ಬರಬೇಕಿದ್ದ ಈ ರೈಲು ಇಪ್ಪತ್ತ ಮೂರೂವರೆ ಗಂಟೆತಡವಾಗಿ ಆಗಮಿಸಿದೆ, ಅಷ್ಟೇ!'–ಅಂತ. ಪ್ರಯಾಣಿಕ 'ಸಮಯ ಪರಿಪಾಲನೆ ಭಾರತೀಯ ಮಾದರಿ!'ಎಂದು ಉತ್ತರಿಸಿದನಂತೆ!

ಸಮಯದ ಮಿತಿ ಅಂದರೇನು ಎಂಬ ಪರಿಜ್ಞಾನವೇ ಇಲ್ಲದ ಒಂದು ವರ್ಗದ ಜನ ನಮ್ಮಲ್ಲಿದ್ದಾರೆ. ಅವರೇ ಭಾಷಣಗಾರರು! ಒಮ್ಮೆ ಒಂದು ಪ್ರೌಢಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಪ್ರೇಕ್ಷಕನಾಗಿ ಹೋಗಿದ್ದ ನನಗೆ ಶಾಲಾ ಮಕ್ಕಳು ಭಾಷಣಗಾರರಿಂದ ಪಡುತ್ತಿದ್ದ ಹಿಂಸೆಯನ್ನು ನೋಡಿ ವ್ಯಥೆಯಾಯಿತು. ವೇದಿಕೆಯ ಮೇಲೆ ಒಟ್ಟು ಒಂಬತ್ತು ಜನರಿದ್ದರು. ಮುಖ್ಯ ಅತಿಥಿಯಾಗಿ ಆಗಮಿಸಿದ ಸ್ಥಳೀಯ ಶಾಸಕರಿಗೆ ಹದಿನೈದು ನಿಮಿಷ; ಉಳಿದವರಿಗೆಲ್ಲ ಐದೈದು ನಿಮಿಷ ಎಂದು ನಿಗದಿಪಡಿಸಲಾಗಿತ್ತು. ಮೊದಲೇ ಒಂದು ಗಂಟೆ ವಿಳಂಬವಾಗಿ ಆಗಮಿಸಿದ ಶಾಸಕರ ಕಿವಿಯಲ್ಲಿ ಯಾರೋ ಮೆಲ್ಲಗೆ ನುಡಿದರಂತೆ. 'ಸರ್, ಹದಿನೈದು ನಿಮಿಷದಲ್ಲಿ ಮುಗಿಸಿ ಬಿಡಿ' ಅಂತ. ಅದಕ್ಕೆ ಆ ಮಹಾಶಯರು 'ಬಿಡ್ರಿ ಹದಿನೈದು ನಿಮಿಷದಾಗ ಏನಾಗತೈತಿ? ಹುಡುಗ್ರನ್ನ ನೋಡಿದ್ರ ನನಗ ಜೋಷ್ ಬರತೈತಿ, ಅಗದೀ ಸಿಂಪಲ್ಲಾಗಿ ಒಂದರ್ಧ ತಾಸ ಮಾತಾಡತೇನಿ ತಗೋರಿ'–ಅಂದು ಬಿಟ್ರಂತೆ.

ಅವರ ಭಾಷಣದ ವೈಖರಿಯಂತೂ ಆಹ್ಲಾದಕರವಾಗಿತ್ತು. ವೇದಿಕೆ ಮೇಲೆ ಆಸೀನರಾಗಿರುವ ಈ ಶಾಲೆಗೆ ಉತ್ತಮ ಹೆಸರು ಬರುವಂತೆ ಮಾಡಿ. ತಾನೂ ಪ್ರೈವೇಟ್‌ದಾಗೆ ಎರಡೇ ಪ್ರಯತ್ನದಲ್ಲಿ ಬಿ.ಎ. ಮಾಡಿದ ಇವ್ರೇ. ಅದೇನ್ರಿ ನಿಂ ಹೆಸರು? ಆ ಮ್ಯಾಗಿಂದ ನನ್ನ ಜಿಗ್ರಿದೋಸ್ತ್, ಈ ಊರಿನ ಪಂಚಾಯತ್ ಪ್ರೆಸಿಡೆಂಟ್ ಮಾತ್ರವಲ್ಲ ಬರೇ ಒಂದು ಲಕ್ಷ ರೊಕ್ಕ ಖರ್ಚು ಮಾಡಿ ಗೌರವ ಡಾಕ್ಟರೇಟ್ ಪಡಕೊಂಡಡಾ. ತಿಪ್ಪಣ್ಣಾ, ಬೆಪ್ಪಣ್ಣಾ ಕೊಪ್ಪದ ಅವ್ರೇ, ಅಚೀಕಡೆ ಮೊಬೈಲ್‌ದಾಗರ ಸಾಸ್ವಾದನೆ ಮಾಡ್ತಾಕುಂತಿರುವ ಇವ್ರೇ, ತೆಲಿಕೆರಕೊಂಡು

ಕುಂತಿರೋ ಅವ್ರೇ– ಎಲ್ಲಾಗ್ರೂ ಶರಣ್ರೇ ಅಪ್ಪ. ನನ್ನನ್ನು ಮುಖ್ಯ ಅತಿಥಿಯಾಗಿಕರದಾರ ನೋಡ್ರಿ. ಭಾರೀ ಸಂತೋಷ ಆಗ್ಯೈತಿ! ಇಷ್ಟನ್ನು ಹೇಳೀ'– ಎಂದು ಹೇಳುತ್ತಿರುವಾಗ ಸಭಿಕರಿಂದ ಭರ್ಜರಿ ಕರತಾಡನವಾಯಿತು. ಮಹಾಶಯರ ಭಾಷಣ ಮುಗಿದೇ ಹೋಯ್ತು ಎನ್ನುವ ಭರವಸೆಯಿಂದ. ಆದರೆ ಮಾನ್ಯ ಶಾಸಕರು ಮತ್ತೆ ಹೇಳ್ತಾರೆ 'ಇಷ್ಟನ್ನು ಹೇಳಿ, ನನ್ನ ಭಾಷಣವನ್ನು ಆರಂಭಿಸುತ್ತೇನೆ' ಈ ಪೀಠಿಕೆಯಾದ ಮೇಲೆ ಹೆಚ್ಚು ಕಮ್ಮಿ ಒಂದು ಗಂಟೆಯವರೆಗೆ ಇವರು ಮಾಡಿದ ಭೀಷಣ ಭಾಷಣದಿಂದ ಹಲವಾರು ವಿದ್ಯಾರ್ಥಿಗಳು ನಿದ್ದೆಗೆ ಶರಣಾದರು. ಆ ಮೇಲೆ ವಿವಿಧ ವಿನೋದಾವಳಿ ಸಮಯಕ್ಕೆ ಎದ್ದರಾಯಿತು– ಎನ್ನುವ ಭ್ರಮೆಯೊಂದಿಗೆ! ಅಂತೂ 8 ಗಂಟೆಗೆ ಮುಗಿಯಬೇಕಾಗಿದ್ದ ಸಭಾ ಕಾರ್ಯಕ್ರಮ ಮುಕ್ತಾಯಗೊಳ್ಳುವಾಗ ಗಂಟೆ ಹತ್ತಾಗಿತ್ತು.ಎಲ್ಲ ಭಾಷಣಗಾರರೂ ತಮ್ಮ ತಮ್ಮ ಶಕ್ತ್ಯಾನುಸಾರ ಮಾತನಾಡಿ ಶಾಲಾ ಮಕ್ಕಳ ಉತ್ಸಾಹಕ್ಕೆ ತಣ್ಣೀರೆರಚಿ ಬಿಟ್ಟಿದ್ದರು!

ಈ ವಿಳಂಬ ಸೂತ್ರದಿಂದ ಅತ್ಯಧಿಕ ಆರ್ಥಿಕ ಲಾಭ ಪಡೆಯುವರೆಂದರೆ ಕಾಮಗಾರಿಗಳಗುತ್ತಿಗೆದಾರರು.ನಮ್ಮ ನೆರೆಯೂರಿನಒಂದು ಹೊಳೆಗೆ ಸೇತುವೆ ನಿರ್ಮಿಸುವ ಕಾಮಗಾರಿಯನ್ನು ವಹಿಸಿಕೊಂಡ ಮರುಳಪ್ಪಾ ಕಲ್ಲಪ್ಪಾ ಇಟಗಿ ನನಗೊಮ್ಮೆ ಎದುರಾದರು.

'ಏನು ಮರುಳಪ್ಪಾರೇ ಸೇತುವೆ ಕೆಲಸಾ ಅರ್ಧಕ್ಕೇ ನಿಲ್ಲಿಸಿ ಬಿಟ್ರಲ್ಲಾ–ದೀಢ್ ವರ್ಷಾತು. ಏನೂ ಕೆಲಸಾಗಿಲ್ಲ. ಯಾಕೆ?' ನಾನು ಕೇಳಿದೆ.

'ನೋಡ್ರಿ ಶಾಮಣ್ಣ–ನಿಮಗೂ ಖಬರೈತಿ. ಈಗ ಹೊಯಿಗಿ ಎಲ್ಲಿ ಸಿಕ್ತತೆ ಹೇಳ್ರಿ ಅದಕ್ಕಾ ಕಾಮಗಾರಿ ಬಂದ್ ಮಾಡೀನಿ'– ಅಂದ್ರು ಗುತ್ತಿಗೆದಾರ ಮರುಳಪ್ಪನವರು.

'ಅಲ್ರೀ ಮತ್ತ ನಿಮ್ಮ ಕಂಪೌಂಡು ಬಾಜೂಕ್ಕ ನೂರು ಲೋಡು ಹೊಯಿಗಿ ಸ್ಟಾಕ್ ಮಾಡೀರಂತಲ್ಲ– ಅದನ್ಯಾಕ ಉಪಯೋಗಿಸ ವಲ್ರಿ?'

"ಐ ಬಿಡ್ರಿ– ಅದು ನನ್ನ ಖಾಸಗಿ ಕಂಟ್ರಾಟ್ ಕೆಲಸಕ್ಕೆ ಬೇಕಾಗತ್ತೈತಿ. ಸರ್ಕಾರಿ ಗುತ್ತಿಗಿ ವಳಗ ಇನ್ನೊಂದು ವರ್ಸ ಆತು ಅಂದ್ರ ಸಾಕು. ನನಗ ಡಬಲ್ ರೇಟ್ ಸಿಕ್ಕೂ ಹಂಗ ಮಾಡ್ತೀನಿ ಅಂತ ಹೇಳ್ಯಾರ ದೊಡ್ಡ ಇಂಜಿನಿಯರ್ ಸಾಹೇಬ್ರು. ಈಗ ಹದಿನೈದು ಕೋಟಿ ಏನು ಟೆಂಡರ್ ಆಗ್ಯೈತಿ ಅದು ಮುವತ್ತು ಕೋಟಿ ಆಗತತಿ–ನೋಡ್ರಲ್ಲಾ'– ಸಂಭ್ರಮಿಸಿದರು ಮರುಳಪ್ಪ.

ತಲೆ ಜುಮ್ಮೆನಿಸಿತು. ಅಬ್ಬ! ಅಂತೂ 'ವಿಳಂಬ ನೀತಿಯಿಂದಾಗುವ ಪ್ರಯೋಜನಗಳು'–ಎಂಬ ಬಗ್ಗೆ ಸೆಮಿನಾರ್ ನಡೆದರೆ ಈ ಮರುಳಪ್ಪಾ ಕಲ್ಲಪ್ಪಾ ಇಟಗಿಯವರನ್ನೇ ಉದ್ಘಾಟನೆಗೆ ಕರೀಬೇಕು ಅಂದ್ಕೊಂಡೆ! ■

---

ಜೀವನದಲ್ಲಿ ಹಣವೇ ಮುಖ್ಯ ಅಲ್ಲ ಅಂತ ಉಪದೇಶ
ಕೊಡುವವರೆಲ್ಲರೂ ಹಣದ ವಿಚಾರದಲ್ಲಿ ಸಾಕಷ್ಟು ಭದ್ರತೆ
ಹೊಂದಿರುತ್ತಾರೆ

# ಬಾವಿ ಕಟ್ಟೆ ಮಾತು

● ಸುಕೇಶವ

ಶೀರ್ಷಿಕೆ ನೋಡಿ ಈಗಿನವರು ಏನು ಹೀಗಂದರೆ ಅಂತ ಕೇಳಬಹುದು. ಏಕೆಂದರೆ ಈಗ ಯಾವ ಊರಿನಲ್ಲೂ ಬಾವಿ ಕಟ್ಟೆ ಇಲ್ಲ. ಬೇಕಿದ್ದರೆ ಬೋರ್‌ವೆಲ್ ಕಟ್ಟೆ ಇದೆ ಅನ್ನಬಹುದು. ಬಾವಿ ಕಟ್ಟೆನೇ ಇಲ್ಲ ಅಂದ ಮೇಲೆ ಬಾವಿ ಕಟ್ಟೆ ಮಾತೆಲ್ಲಿ ಬಂತು. ಅಂದಿನ ಕಾಲದಲ್ಲಿ ನೀರು ತರಲು ಬಾವಿ ಕಟ್ಟೆಗೆ ಪ್ರತಿ ಮನೆಯಿಂದಲೂ ಒಂದು ಹೆಣ್ಣು ಬರೋದು. ಅಷ್ಟೂ ದಿನ ಅತ್ತೆಯಾದವಳು ನೀರು ಹೊರ್‍ತಾ ಇದ್ದರೆ, ಮನೆಗೆ ಸೊಸೆ ಬಂದ ಮೇಲೆ ಅವಳನ್ನೂ ನೀರು ಹೊರಲು ಕರೆದುಕೊಂಡು ಬರೋಳು. ಮುಂದೆ ನೀರು ಹೊರುವ ಕೆಲಸ ಅತ್ತೆಯಿಂದ ಸೊಸೆಗೆ ವರ್ಗಾವಣೆಗೊಳ್ಳುತ್ತಿತ್ತು. ಅದಕ್ಕೇ ಊರಿಗೆ ಬಂದವಳು ನೀರಿಗೆ ಬರಲಾರಳೇ ಅನ್ನೋ ಗಾದೆ ಹುಟ್ಟಿಕೊಂಡಿತ್ತು. ಆದರೆ ಈಗ ಊರಿಗೆ ಬಂದವಳು ನೀರಿಗೆ ಬರಲೇಬೇಕು ಎಂದಿಲ್ಲ. ಏಕೆಂದರೆ ಸೊಸೆಯಿಂದ ನೀರು ಹೊರಿಸುವ ಶಕ್ತಿ ಈಗಿನ ಯಾವ ಅತ್ತೆಯಂದಿರಿಗೂ ಇಲ್ಲ. ಬದಲಾಗಿ ನೀರೇ ಅವಳ ಮನೆಗೆ ಬರುತ್ತೆ, ನಲ್ಲಿಯ ರೂಪದಲ್ಲಿ, ಬೋರ್‌ವೆಲ್ ರೂಪದಲ್ಲಿ ಅಥವಾ ನೀರಿನ ಟ್ಯಾಂಕರ್ ರೂಪದಲ್ಲಿ. ಆ ದಿನಗಳಲ್ಲಿ ಬಹಳ ಮುಖ್ಯವಾದ ಮಾತುಗಳೆಲ್ಲಾ ಬಾವಿ ಕಟ್ಟೆಯ ಬಳಿಯೇ ನಡೆಯೋದು. ಸೊಸೆಯಾದವಳು ಅತ್ತೆಯ ಬಗೆಗೆ ಗಂಡನಿಗೆ ಚಾಡಿ ಹೇಳಬೇಕಾದರೆ ಕೊಡ ಸೊಂಟಕ್ಕೆ ಸೇರಿಸಿಕೊಂಡು ಹೋಗುವಾಗ ಗಂಡನ ಕಡೆ ನೋಡಿ ಬಾವಿ ಕಟ್ಟೆಗೆ ಬನ್ನಿ ಅಂತ ಸನ್ನೆ ಮಾಡಿ ಹೋಗೋಳು. ಮನೇಲಿ ಮಾಡಿದ ಕೋಡುಬಳೇನೋ ಚಕ್ಕುಲೀನೋ ತಿನ್ನೋಕೆ ಸಮಯವೇ ಇಲ್ಲದೇ ಹೋದರೆ ಕೊಡ ತೆಗೆದುಕೊಂಡು ಬಾವಿಗೆ ಹೋಗುವಾಗ ಒಂದೆರಡು ಕೋಡುಬಳೆಗಳನ್ನೂ ಸೊಂಟಕ್ಕೆ ಸಿಕ್ಕಿಸಿಕೊಂಡು ದಾರಿಯುದ್ದಕ್ಕೂ ತಿನ್ನುತ್ತಾ ಹೋಗೋರು. ಅಕ್ಕಪಕ್ಕದ ಮನೆಯವರೊಂದಿಗೆ ಮಾತು ಹಂಚಿಕೆ ಆಗುತ್ತಿದ್ದುದು ಬಾವಿ ಕಟ್ಟೆಯ ಬಳಿಯೇ. ಮನೆಯಲ್ಲಿ ಯಾರಿಗಾದರೂ ತುಂಬಾ ಬೇಜಾರು ಆಯಿತು ಎಂದರೆ ಅವರ ಏಕಾಂತಕ್ಕೆ ಬಾವಿ ಕಟ್ಟೆಯೇ ಸೂಕ್ತ ಸ್ಥಳ. ನಮ್ಮ ಊರಿನಲ್ಲಿ ಒಂದು ಕಡೆ ಸಿಹಿನೀರಿನ ಬಾವಿ ಇತ್ತು. ಅಲ್ಲಿಂದ ಬಹುಪಾಲು ಮನೆಯವರು ಕುಡಿಯುವ ನೀರು ತರುತ್ತಿದ್ದರು. ಕೆಲವರು ಊರಿನಲ್ಲಿ ನೋಡ್ರಪ್ಪಾ ಯಾರಿಗಾದರೂ ಬೇಜಾರಾಗಿ ಪ್ರಾಣ ಕಳ್ಕೊಬೇಕು ಅನಿಸಿದರೆ ದಯವಿಟ್ಟು ಸಿಹಿ ನೀರಿನ ಬಾವಿಗೆ ಬೀಳಬೇಡಿ. ಯಾಕೇಂದ್ರೆ ಕುಡಿಯೋ ನೀರಿಗೆ ಅದೊಂದೇ ಬಾವಿ ಇರೋದು. ಬೇಕಿದ್ರೆ ಬೇರೆ ಬಾವಿಗೆ ಬಿದ್ಕೊಳಿ ಅನ್ನೋರು. ಹೀಗೆ ಕುಡಿಯುವ ನೀರು ತರುವ ಸಮಯ ಸಂಜೆ ನಾಲ್ಕುವರೆ. ಸುಮಾರು ಎಂಟು ಹತ್ತು ಹೆಂಗಸರು ಸೊಂಟದ ಮೇಲೊಂದು ತಲೆಯ ಮೇಲೊಂದು ಅಂತ ಎರಡೆರಡು ಕೊಡ ಇಟ್ಕೊಂಡು ಬಾವಿಗೆ ಹೊರಟರೆ ಇನ್ನು ಬರೋದು ಕತ್ತಲೆಗೆ ಮುಂಚೆಯೇ. ಎರಡು ಕೊಡ ನೀರು ಸೇದುವುದರ ಜೊತೆಗೆ ಅಲ್ಲಿದ್ದ ಅಷ್ಟೂ ಜನರ ಮನೆಯ ಮಾತುಗಳು ವಿನಿಮಯಗೊಳ್ಳುತ್ತಿದ್ದವು. ಯಾರದ್ದಾದರೂ ಮನೆಯ ಮದುವೆ ಇದ್ದರಂತೂ ಮದುವೆಯ ಇಂಚಿಂಚು ವಿಚಾರಗಳೂ ಬಾವಿ ಕಟ್ಟೆಯ ಬಳಿಯೇ ವಿನಿಮಯಗೊಳ್ಳುತ್ತಿದ್ದವು. ರಾಜಣ್ಣನ ಮಗಳು ಮತ್ತೆ ಬಸಿರಿಯಂತೆ, ಅವನಿಗೆ ಏನು ಬಂತ್ರೀ ರೋಗ, ಮೊದಲನೇ ಮಗೂಗೆ ಇನ್ನೂ ಆರು ತಿಂಗಳು ತುಂಬಿಲ್ಲ. ಆಗಲೇ

ಹೆಂಡ್ತಿನ ಮತ್ತೆ ಬಸುರಿ ಮಾಡಿದಾನೆ, ಸುಮಿತ್ರನ ಮಗಳು ಈ ಸಾರಿ ಊರಿಗೆ ಬರಲ್ಲ ಅಂದ್ಲಂತೆ, ಅದೇನೋ ಡೆಲ್ಲಿಗೋ ಕಲ್ಕತ್ತಕ್ಕೋ ಟೂರ್ ಹೋಗ್ತಾರಂತೆ, ಅಷ್ಟಕ್ಕೇ ಸುಮಿತ್ರಂಗೆ ತಲೆ ನಿಲ್ತಿಲ್ಲ, ಪೂಜಾರಪ್ಪನ ಹೆಂಡ್ತಿ ನಾಲ್ಕಾಣೆ ತಗೊಂಡು ಒಂದು ಕಾಯಿ ಹೋಳು ಕೊಟ್ಟಲ್ಲ ಅದು ಪೂರ್ತಿ ಕೆಟ್ಟೇ ಹೋಗಿತ್ತು ರೀ. ಇಂಥ ಕೆಲವು ಮಾತುಗಳು ಅಲ್ಲಿ ವಿನಿಮಯಗೊಳ್ಳುತ್ತಿದ್ದವು.

ಇನ್ನು ಕೆಲವರ ಮನೇಲಿ ಹಿಂದುಗಡೆ ಹಿತ್ತಲಿನಲ್ಲಿ ಬಾವಿ ಇರೋದು. ಇಂಥಾ ಮನೆಗಳವರು ಊರಿನ ಬಾವಿ ಕಟ್ಟೆಗೆ ಹೋಗುತ್ತಿರಲಿಲ್ಲ. ಆಗಿನ ಕಾಲದಲ್ಲಿ ಬಾವಿ ಬತ್ತೋದು ಬಹಳ ಅಪರೂಪ. ಮಳೆಗಾಲದಲ್ಲಂತೂ ಕೊಡದಿಂದ ನೀರು ತುಂಬಿಕೊಳ್ಳುವಷ್ಟು ಮೇಲೆ ನೀರು ಇರುತ್ತಿತ್ತು. ತಮ್ಮ ಮನೆಯಲ್ಲಿ ಬಾವಿ ಇಲ್ಲದಿರೋರು, ಮನೆಯಿಂದ ಬಾವಿ ಕಟ್ಟೆ ದೂರ ಅಂದುಕೊಂಡೋರು ಇಂಥವರ ಮನೆಗಳಿಂದಲೇ ತಮ್ಮ ಮನೆಗೆ ನೀರು ಸೇದಿಕೊಳ್ಳುತ್ತಿದ್ದರು. ಆಗೆಲ್ಲಾ ಮಾತಿಗೆ ಜನ ಸಿಗೋದೇ ಅಪರೂಪ. ಅದಕ್ಕೇ ಕೆಲವರು ಅಷ್ಟು ದೂರ ಬಾವಿ ಕಟ್ಟೆಗೆ ಯಾಕೆ ಹೋಗ್ತೀರ ನಮ್ಮನೇಲೇ ಬಂದು ನೀರು ಸೇದ್ಕೊಂಡು ಹೋಗಿ ಅನ್ನೋರು. ಆಗ ಸಂಜೆ ಐದರ ಸುಮಾರಿಗೆ ನೀರು ಸೇದೋಕೆ ಯಾರೋ ಒಬ್ಬರು ಬರ್ತಾರೆ ಅಂತ ಗೊತ್ತಾದರೆ ಒಂದಿಬ್ಬರು ಅಲ್ಲಿ ಸೇರೋರು. ಏನು ಅಡಿಗೆ ಮಾಡಿದ್ರಿ ಅನ್ನೋದರಿಂದ ಪ್ರಾರಂಭವಾಗಿ ಅವರವರು ಕೇಳಿದ ಮಾತುಗಳನ್ನು ವಿನಿಮಯ ಮಾಡಿಕೊಳ್ಳೋರು. ಮಾಡಿದ ಅಡುಗೆ ಕೆಟ್ಟು ಹೋಗಿದ್ರೆ, ಹೊಸ ರುಚಿ ಮಾಡೋಕೆ ಹೋಗಿ ಅದ್ವಾನವಾದರೆ, ಅತ್ತೆ ಮಾವ ಬರ್ತಾರೆ ಅನ್ನೋದಾದರೆ, ಯಜಮಾನರು ಕೆಲಸದ ನಿಮಿತ್ತ ಬೇರೆ ಊರಿಗೆ ಹೋಗುತ್ತಾರೆ ಅನ್ನೋದಾದರೆ, ಇವುಗಳೆಲ್ಲಾ ಬಾವಿ ಕಟ್ಟೆಯ ಬಳಿ ಚರ್ಚೆಯಾಗುತ್ತಿದ್ದವು. ಪಾಪ ಆಗಿನ ಕಾಲದಲ್ಲಿ ಮನರಂಜನೆ ಅಂದರೆ ಇದೇ. ರೇಡಿಯೋ ಇಲ್ಲದ ದಿನಗಳು, ಟಿವಿ ಅಂದ್ರೆ ಏನೆಂದು ತಿಳಿಯದ ದಿನಗಳು, ಪೇಪರ್ ತರಿಸದಿರುವ ಮನೆಗಳು, ತರಿಸಿದರೂ ಓದಿನಲ್ಲಿ ಆಸಕ್ತಿ ಇಲ್ಲದ ದಿನಗಳು. ಹಾಗಿರುವಾಗ ಸಮಯ ಕಳೆಯಲು ಭಾವಿ ಕಟ್ಟೆಯಂಥ ಸ್ಥಳ ಬಿಟ್ಟರೆ ಬೇರೆ ಇರಲಿಲ್ಲ. ಬೇರೆ ಊರಿಗೆ ಹೋದವರು ಯಾವುದಾದರೂ ಸಿನಿಮಾ ನೋಡಿಕೊಂಡು ಬಂದುಬಿಟ್ಟಿದ್ರೆ ಆ ಸಿನಿಮಾದ ಕಥೆಯನ್ನು ನಾಲ್ಕು ಜನಕ್ಕೆ ಹೇಳೋತನಕ ಅವರಿಗೆ ನೆಮ್ಮದಿ ಇರುತ್ತಿರಲಿಲ್ಲ. ಈ ಕಥೆ ಹೇಳೋದಕ್ಕೆ ಬಾವಿ ಕಟ್ಟೆಯೇ ಸೂಕ್ತ ಸ್ಥಳ.

ಇನ್ನು ಮನೇಲಿ ಏನಾದರೂ ವಿಶೇಷ ತಿಂಡಿ ಮಾಡಿದ್ರೆ ಅದೂ ಭಾವಿ ಕಟ್ಟೆಯಲ್ಲಿ ವಿತರಣೆಯಾಗುತ್ತಿತ್ತು. ನೀರು ಸೇದಿಕೊಂಡು ಬರೋಕೆ ಅಂತ ಹೊರಟರೆ ಪಾಪ ಅವರೆಲ್ಲಾ ಬಂದಿರ್ತಾರೆ ಅಂತ ಒಂದಿಷ್ಟು ತಿಂಡಿಯನ್ನು ಬಾವಿ ಕಟ್ಟೆಗೇ ತಗೊಂಡು ಹೋಗೋರು. ರಂಗಮ್ಮ ಇವತ್ತು ಮನೇಲಿ ಆಂಬೊಡೆ ಮಾಡಿದ್ದೆ. ಆಂಬೊಡೆ ಅಂದ್ರೆ ನಿಮಗಿಷ್ಟ ಅಲ್ವಾ ಅದಿಕ್ಕೆ ಒಂದೆರಡು ಸೆರಗಿನಲ್ಲಿ ಕಟ್ಕೊಂಡು ಬಂದೆ. ಇಲ್ಲದಿದ್ದರೆ ಮನೇಲಿ ಎಲ್ಲಾನೂ ಅವುಗಳೇ ತಿಂದು ಮುಗಿಸುತ್ವೆ ಅನ್ನೋರು. ಬಾವಿ ಕಟ್ಟೆಗೆ ನೀರು ಸೇದಲು ಯಾರಾದರೂ ಬಂದರು ಅಂದರೆ ಅವರನ್ನು ಹುಡುಕಿಕೊಂಡು ಇನ್ನೊಬ್ಬರು ಬರೋರು. ಅಲ್ಲಿಗೆ ಬೆಳಗಿನಿಂದ ಅಲ್ಲಿಯವರೆಗೂ ಮನೆಯಲ್ಲಿ ನಡೆದ ವಿದ್ಯಮಾನಗಳನ್ನು ಮಾತಾಡಿಕೊಳ್ಳುತ್ತಿದ್ದರು. ಅವರುಗಳಲ್ಲಿ ಯಾರಾದರೂ ಒಂದೆರಡು ದಿನಗಳ ಮಟ್ಟಿಗೆ ಮೈಸೂರಿಗೋ ಬೆಂಗಳೂರಿಗೋ ಹೋಗಿ ಬಂದರು ಅಂದರೆ ಅವರು ಹಿಂದಿರುಗಿ ಬರೋದನ್ನೇ ಕಾಯುತ್ತಿದ್ದರು. ಇಲ್ಲಿಂದ ಬಸ್ಸು ಹತ್ತಿದಾಗಿನಿಂದ

ಅಲ್ಲಿ ಬಸ್ಸಿಳಿದು ಮನೆಗೆ ಹೋಗಿದ್ದು, ಮದುವೆ ಮನೆ ಸಡಗರ, ವೈಭವ, ಹೆಣ್ಣು ಅಲಂಕರಿಸಿಕೊಂಡಿದ್ದ ರೀತಿ, ಇವೆಲ್ಲಾ ಮಾತಿನಲ್ಲಿ ಬರುತ್ತಿದ್ದವು. ಅಂಥಾ ದಿವಸಗಳಲ್ಲಿ ಬಾವಿ ಕಟ್ಟೆ ಜಾಮ್ ಪ್ಯಾಕ್ಡ್ ಅಂತಾರಲ್ಲ ಹಾಗಾಗಿರೋದು. ನೀರು ತರೋಕೆ ಹೋದೋಳು ಇನ್ನೂ ಹಿಂದಿರುಗದೇ ಹೋದರೆ ಮನೆಲಿ ಅಪ್ಪ ಅನಿಸಿಕೊಂಡವನು ಮಗನನ್ನೋ ಮಗಳನ್ನೋ ಕರೆದು ನೋಡು ನಿಮ್ಮಮ್ಮ ನೀರು ತರ್ತೀನಿ ಅಂತ ಹೋದೋಳು ಇನ್ನೂ ಬಂದಿಲ್ಲ. ಹೋಗಿ ಕರ್ಕೊಂಡು ಬಾ ಅಂತ ಕಳಿಸೋರು. ಈ ಹೆಂಗಸರು ಬಾವಿ ಕಟ್ಟೆಯ ಬಳಿ ಸೇರಿದರೆ ಬರೀ ಮಾತೇ ಅನ್ನೋದು ಊರಿನ ಜನರಿಗೆಲ್ಲಾ ಗೊತ್ತು. ಅವರುಗಳೂ ಪಾಪ ಮಾತಾಡ್ಕೊಳ್ಳಿ ಬಿಡಿ ಅಂತ ಸುಮ್ಮನಿರೋರು.

ಕೆಲವರು ಬಾವಿ ಕಟ್ಟೆಗೆ ಹೋಗೋಲ್ಲ. ಅಂಥವರನ್ನು ಬಾವಿ ಕಟ್ಟೆ ಬಳಿ ಬರಮಾಡಿಕೊಳ್ಳೋದು ಹೇಗೆ. ಅದಕ್ಕೂ ಒಂದು ಉಪಾಯ ಮಾಡಿರೋರು. ಯಾರಿಂದಲಾದರೂ ಹೇಳಿ ಕಳಿಸಬೇಕು ಎಂದರೆ ಅದಕ್ಕೆ ಮಕ್ಕಳೇ ಸೂಕ್ತ. ತಮ್ಮ ಮನೆಯ ಚಿಲ್ಟಾರಿಯನ್ನು ಕರೆದು ಹೋಗು ಸುಬ್ಬಮ್ಮನವರನ್ನು ಸಂಜೆ ಬಾವಿ ಕಟ್ಟೆಯ ಬಳಿ ಬರಬೇಕಂತೆ ಅಂತ ಅಮ್ಮ ಹೇಳಿದಾರೆ ಅನ್ನು. ಪಂಕಜಮ್ಮನವರ ಮನೆ ಹತ್ರ ಇರೋ ಬಾವಿ ಕಟ್ಟೆ ಅನ್ನು ಇಲ್ಲದಿದ್ದರೆ ಅವರು ಗೋಪಮ್ಮನ ಮನೆ ಹತ್ರ ಇರೋ ಬಾವಿ ಕಟ್ಟೆಗೆ ಹೋದಾರು ಅಂತ ಹೇಳಿ ಕಳಿಸೋರು. ಇದು ಮಾತುಕತೆ ಸಂವಹನದ ವಿಧಾನ.

ಮನೆಯಲ್ಲಿ ಹೊಸದಾಗಿ ಮದುವೆಯಾದ ಗಂಡು ಹೆಣ್ಣುಗಳಿದ್ದರೆ ಅವರಿಗೂ ಪ್ರಶಸ್ತವಾದ ಸ್ಥಳ ಅಂದರೆ ಬಾವಿ ಕಟ್ಟೆಯೇ. ಇಲ್ಲದಿದ್ದರೆ ಮನೆಯಲ್ಲಿ ಏಕಾಂತವಿಲ್ಲ. ಈಗಿನ ಕಾಲದ ಹಾಗೆ ಪ್ರತ್ಯೇಕ ಕೋಣೆಗಳಿರುತ್ತಿರಲಿಲ್ಲ. ಇದ್ದರೂ ಬಾಗಿಲು ಹಾಕಿಕೊಳ್ಳುವ ಹಾಗಿರಲಿಲ್ಲ. ಮನೆಯಲ್ಲಿ ಮಾತಾಡಿದರೆ ಎಲ್ಲರಿಗೂ ಕೇಳುತ್ತದೆ ಅಂತ ಬಾವಿ ಕಟ್ಟೆಯ ಬಳಿ ಹೋಗೋರು. ಇನ್ನು ಮದುವೆ ನಿಶ್ಚಿತಾರ್ಥಕ್ಕೆ ಬಂದರೆ ನಮ್ಮ ಹುಡುಗ ನಿಮ್ಮ ಹುಡುಗಿಯ ಬಳಿ ಏಕಾಂತವಾಗಿ ಮಾತಾಡಬೇಕಂತೆ ಅಂದರೆ (ಇಂಥಾ ಸಂದರ್ಭಗಳು ಆಗಿನ ಕಾಲಕ್ಕೆ ತೀರಾ ಅಪರೂಪ ಅಂದ್ಕೊಳಿ) ಆಗಲೂ ಅದಕ್ಕೆ ಯೋಗ್ಯ ಸ್ಥಳ ಬಾವಿ ಕಟ್ಟೆಯೇ. ಅಮ್ಮನೇ ಮಗಳಿಗೆ ಹೋಗು ಬಾವಿ ಕಟ್ಟೆಯ ಬಳಿ ಮಾತಾಡ್ಕೊಂಡು ಬನ್ನಿ ಅಂತ ಹೇಳಿ ಕಳಿಸೋಳು. ಜೊತೆಗೆ ಒಂದು ಚಿಲ್ಟಾರಿಯನ್ನೂ ಕಳಿಸಿ ಅವರು ಏನು ಮಾತಾಡ್ತಾರೆ ಕೇಳ್ಕೊಂಡು ಬಾ ಅಂತ ಹೇಳಿರೋದು.

ಈಗ ಎಲ್ಲರೂ ಬಾವಿ ಕಟ್ಟೆಯನ್ನು, ಬಾವಿ ಕಟ್ಟೆಯ ಮಾತುಗಳನ್ನೂ, ಬಾವಿ ಕಟ್ಟೆಯಂತಹ ಪರಿಸರದ ಅವಿನಾಭಾವ ಸಂಬಂಧಗಳನ್ನೂ ಮಿಸ್ ಮಾಡ್ಕೊತಾ ಇದೀವಿ ಅನಿಸ್ತಿದೆ. ಅಂದಿನ ಬಾವಿ ಕಟ್ಟೆಯ ಜಾಗವನ್ನು ಇಂದಿನ ಬೋರ್ ವೆಲ್ ಗಳು ಆಕ್ರಮಿಸಿಕೊಂಡಿವೆ. ಮೊದಮೊದಲು ಬೋರ್ ವೆಲ್ ನಿಂದ ನೀರನ್ನು ಪಂಪ್ ಮಾಡಿಕೊಳ್ಳಬೇಕಿತ್ತು. ಆದರೆ ಇಂದು ಎಲ್ಲ ಕಡೆ ಅಲ್ಲಿಯೇ ಒಂದು ಟ್ಯಾಂಕ್ ಕಟ್ಟಿ ನಲ್ಲಿ ಹಾಕಿರ್ತಾರೆ. ಆದರೂ ಅಂದಿನ ಬಾವಿ ಕಟ್ಟೆಗೆ ಇಂದಿನ ಬೋರ್‌ವೆಲ್‌ಗಳು ಸಮ ಅಲ್ಲ. ಹೇಗೆಂದರೆ ಅಂದಿನ ಮೌಲ್ಯಗಳಿಗೆ ಇಂದಿನ ಮೌಲ್ಯಗಳು ಸಮವಲ್ಲವೋ ಹಾಗೆ. ಅಂದಿನ ದಿನಗಳು ಅಂದಿಗೆ ಸುಖ, ಇಂದಿನ ದಿನಗಳು ಇಂದಿಗೆ ಸುಖ ಮುಂದಿನ ದಿನಗಳು ಹೇಗೋ ಅಂತ ಅಂದಿನ ಬಾವಿ ಕಟ್ಟೆಯನ್ನು ನೆನೆದು ಬದುಕುವುದೇ ಸುಂದರ ಮತ್ತು ಸೂಕ್ತ. ■

# ಅಡುಗೆ ಮನೆ ಕಲಾವಿದರು

ಅಡುಗೆಮನೆ ಕೆಲ್ಸ ಅಂದ್ರೆ
ಬೇಯ್ಸೋದಷ್ಟೇ ಅಲ್ಲ..
ಮೊದ್ಲು ಪಾತ್ರೆ ಸಾವರಿಸ್ಕೊಬೇಕು..
ಆಮೇಲೆ ಅಳತೆ ಅಂದಾಜು
ಮಾಡ್ಕೋಬೇಕು..
ದಿನಸಿ ಲೆಕ್ಕಾಚಾರ ಇಡಬೇಕು..

ತೊಳೀಬೇಕು.. ಬಳೀಬೇಕು..
ಕೊತ್ತಂಬರಿ ಕರಿಬೇವು ಮೆಣಸಿನಕಾಯಿ
ಕೆಡದೇ ಇರೋ ಹಾಗ್ ಮ್ಯಾನೇಜ್
ಮಾಡೋ ಕಲೆ ಇರಬೇಕು..

ಹಳೆ ಹಾಲು ಹೊಸ ಹಾಲು
ಹಳೆ ಡಿಕಾಕ್ಷನ್ನು ಹೊಸಾ ಡಿಕಾಕ್ಷನ್ನು
ವ್ಯತ್ಯಾಸ ಗೊತ್ತಿರಬೇಕು..

ಕಾಫಿ ಪುಡಿ ಟೀ ಪುಡಿ ವ್ಯತ್ಯಾಸ
ಗೊತ್ತಿರಬೇಕು..

ಬಡಿಸೋಕ್ಕೆ ಗೊತ್ತಿರಬೇಕು..
ಮಿಕ್ಕಿದ್ದನ್ನ ಖಾಲಿ ಮಾಡಿ ಬೇರೆದಕ್ಕೆ
ಹಾಕಿಡೋ ಸ್ಪೇಸ್ ಮ್ಯಾನೇಜ್ಮೆಂಟ್
ಗೊತ್ತಿರಬೇಕು..

ಎರಡೆರಡು ಬರ್ನರುಗಳಲ್ಲಿ
ಬೇರೆ ಬೇರೆ ವೆರೈಟಿ ಮಾಡೋ
ಟೈಮ್ ಮ್ಯಾನೇಜ್ಮೆಂಟ್ ಗೊತ್ತಿರಬೇಕು..

ಒಂದು ದೋಸೆ ತಟ್ಟೆಲಿದ್ರೆ
ಇನ್ನೊಂದನ್ನ ಕಾವಲಿಯಲ್ಲಿ
ಮತ್ತೊಂದನ್ನ ಹಾಟ್ಪಾಕ್ನಲ್ಲಿ ಕೂರಿಸೋ
ಚಾಕಚಕ್ಯತೆ ಇರಬೇಕು..
ಸುಮ್ನೆ ಒಂದ್ ರಾಶಿ ಪಾತ್ರೆ
ಗುಡ್ಡೆ ಹಾಕದೇ ಕನಿಷ್ಠ ಪಾತ್ರೆಗಳಲ್ಲೇ
ಗರಿಷ್ಠ ಅಡುಗೆ ಮಾಡಿ ಬಡಿಸೋ
ರಿಸೋರ್ಸ್ ಮ್ಯಾನೇಜ್ಮೆಂಟ್
ಗೊತ್ತಿರಬೇಕು..

ಅಮ್ಮಾ.. ಅನ್ನೋ
ವಿಧವಿಧವಾದ ಕರೆಗಳಿಗೆ ಸ್ಪಂದಿಸುತ್ತಲೇ
ಅಂದುಕೊಂಡ ಸಮಯಕ್ಕೆ ಅಚ್ಚುಕಟ್ಟಾಗಿ ಎಲ್ಲಾ
ಮಾಡಿಡೋ ಮಲ್ಟಿ ಟಾಸ್ಕಿಂಗ್ ಎಬಿಲಿಟಿ
ಇರಬೇಕು..

ಸಣ್ಣ ಪುಟ್ಟ ಅವಘಡಗಳಾದಾಗ
ಧೃತಿಗೆಡದೆ, ಗಾಬರಿಯಾಗದೆ
ನಿಭಾಯಿಸೋ ಅಷ್ಟು
ಸ್ಥೈರ್ಯ, ಸಮಯಪ್ರಜ್ಞೆ,
ಸಾಮಾನ್ಯಜ್ಞಾನ ಇರಬೇಕು..

ಇಷ್ಟನ್ನೂ ಯಾವುದೇ
ಕೋರ್ಸಿಗೆ ಹೋಗದೇ ತಲೆತಲೆಮಾರುಗಳಿಂದ
ಕಲಿತು ಮಾಡ್ತಾ ಬಂದಿರೋ ಎಲ್ಲ
ಶ್ರಮಜೀವಿಗಳಿಗೊ ಗೌರವ ಕೊಡೋ
ದೊಡ್ಡಮನಸ್ಸಿರಬೇಕು..

ಅಡುಗೆಮನೆ ಕೆಲ್ಸಾನಾ...
ಅದೇನ್ ಮಹಾ ಅಂತ ಒಮ್ಮೆ ತಾತ್ಸಾರ ಮಾಡಿ
ಹೀಗಳೆಯೋ ಮುನ್ನ ಇಷ್ಟೆಲ್ಲ ಕ್ವಾಲಿಟಿ,
ಕ್ಯಾಪಾಸಿಟಿ ನಿಮಗಿದ್ಯಾ ಅಂತ ಯೋಚಿಸಿ..

ಅಡುಗೆ ಮನೆ ಎಲ್ಲರ ಅವಶ್ಯಕತೆ..

ಅದೊಂದು ಧ್ಯಾನ.. ಅದೊಂದು ದಿನಚರಿ..
ಅದೊಂದು ಕಲೆ.. ಅದೊಂದು ವಿಜ್ಞಾನ..
ಅದೊಂದು ಅನುಭೂತಿ.. ಅದೊಂದು ಸೇವೆ..
ಅದೊಂದು ಪ್ರೀತಿ.. ಅದೊಂದು ಗೌರವ..
ಅದೊಂದು ಮೌಲ್ಯ..

ತಾತ್ಸಾರ ಬೇಡ...
ಎಲ್ಲಾ ಅಡುಗೆ ಮನೆ ಕಲಾವಿದರಿಗೂ
ಒಂದು ಸಲಾಂ

(ಇಂಟರ್ನೆಟ್‌ನಿಂದ)

# ಟ್ರಬಲ್ ಸಾರ್ ಟ್ರಬಲ್ಲು

● ಬೆಂಗನ್ನೂರ್ ನಾಗ್ರಾಜ್

ಟ್ರಬಲ್ ಸಾರ್ ಟ್ರಬಲ್ಲು,
ಗ್ಯಾಸ್ ಟ್ರಬಲ್ಲು ಸ್ಟಮಕ್ ಟ್ರಬಲ್ಲು,
ತೇಗು ಉಬ್ಬುರ ಸ್ಮೆಲ್ಲು ಟೆರ್ರಿಬಲ್ಲು.

ಆಂಟಾಸಿಡ್ಡು ಪ್ಯಾಂಟಾಸಿಡ್ಡು ಚೀಪಾಯ್ತು,
ರೆಂಟ್ಯಾಕು ಜೆಂಟ್ಯಾಕು ಗಂಟ್ಲಿಗೆ ಹಾಕಾಯ್ತು,
ಜೆಂಕ್ ಫುಡ್ಡು ಸ್ನ್ಯಾಕ್ ಫುಡ್ಡು ಬಂದ್ ಆಯ್ತು.

ಬನಾನ, ಬ್ರಿಂಜಾಲು, ಬಟಾಟೆ, ಎಗ್ಗು
ಮಿಲ್ಕು, ನಟ್ಸು ಇವೆಲ್ಲಾ ಗ್ಯಾಸು,
ಹಂಗಂದ್ರೆ ಎಡಿಬಲ್ಗೆ ಉಳಿದಿರೋದು ಬರೀ ಏರ್ ಗ್ಯಾಸು.

ಸ್ಟಮಕ್ ಹೈಕಮ್ಯಾಂಡ್ ಟಂಗೂ,
ಟಂಗಿಗೆ ಬ್ಯಾಕ್ ಕಮ್ಯಾಂಡ್ ಬ್ರೇನು,
ಎಲ್ಲಾ ರೂಲ್ಗಳು ಸೂಪರ್ಸೀಡು.

ಆಯುರ್, ಯುನಾನಿ, ಯೋಗ,
ಅಲೋಪತಿ ಹೋಮಿಯೋಪತಿಯಿಂದಿಲ್ಲ ರೆಮಿಡಿ,
ಸೀತಾಪತಿಯೇ ಲಾಸ್ಟ್ ಪ್ರಿಸ್ಕ್ರಿಪ್ಷನ್ನು ಬಿ ರೆಡಿ.

■

# ಹಾಯ್..! ಎಮೋಜಿ

● ಜಿ ಎನ್ ಮೋಹನ್

'ಎಮೋಜಿ ಗಂಡಾ ಹೆಣ್ಣಾ?' ಅಂತ ಕೇಳಿದೆ ತಕ್ಷಣ ಜೊತೆಯಲ್ಲಿದ್ದವರು ಆಕಾಶ ಬಿರಿಯುವ ಹಾಗೆ ನಕ್ಕರು.

ಎಮೋಜಿ ಅಂದ್ರೆ ನಗು, ಅಳು, ಚೇಷ್ಟೆ ಅಷ್ಟೇ.. ಅದಕ್ಕೆ ಗಂಡು ಹೆಣ್ಣು ಅಂತಾ ಉಂಟಾ??

'ಹೌದಪ್ಪಾ, ನೀನೇನೋ ಎಮೋಜಿ ಗಂಡಾ ಹೆಣ್ಣಾ ಅಂದುಬಿಟ್ಟೆ, ಎರಡೂ ಅಲ್ಲದವರು ಏನು ಮಾಡ್ತಾರೆ' ಅಂತ ಇನ್ನೊಬ್ಬರು ಬಾಣ ತೂರಿಬಿಟ್ಟರು.

ಇದೇ ಪ್ರಶ್ನೆಯನ್ನ ಎಮೋಜಿಗಳನ್ನು ರೂಪಿಸುವ, ಆರಿಸುವ, ಜನರ ಮುಂದಿಡುವ ಯುನಿಕೋಡ್' ಸಂಸ್ಥೆಯ ಮುಂದೆ ಹಿಡಿದು ನಿಂತದ್ದು ಇಡೀ ಜಗತ್ತು.

ಅದು ಸರಿ, ನೀವೇನೋ 'ಹಾಯ್' ಅನ್ನೋಕೆ 'ಬಾಯ್' ಅನ್ನೋಕೆ, 'ಹೈ ಫೈವ್'ಗೆ ಅಂತ ಬೇಕಾದಷ್ಟು ಎಮೋಜಿ ರೂಪಿಸಿದ್ದೀರಲ್ಲಾ.. ಅದರಲ್ಲಿ ಯಾಕೆ ಸ್ವಾಮಿ ಹೆಣ್ಣು ಮಕ್ಕಳಿಲ್ಲ.. ಅವರಿಗೆ ಹಾಯ್, ಬಾಯ್ ಅನ್ನೋಕೆ ಬರಲ್ವಾ, ಅಥವಾ ಅವರು ಗಂಡಸರ ಥರಾ ಕೆಲಸ ಮಾಡ್ತಿಲ್ವಾ..?' ಅಂತ ಒಂದಷ್ಟು ಸಂಘಟನೆಗಳು ಎದ್ದು ನಿಂತೇ ಬಿಟ್ಟವು. ಆದರೆ ಇನ್ನಷ್ಟು ಮಹಿಳೆಯರು ಇದ್ದರು ಎಂಜಿನಿಯರ್ ಗಳು, ನರ್ಸ್‌ಗಳು, ಸಂಶೋಧಕರು.. ಅವರಿಗೆ ತಮ್ಮ ವೃತ್ತಿ ಸೂಚಿಸುವ ಎಮೋಜಿ ಬಳಸಬೇಕು ಅಂದ್ರೆ ಆಯ್ಕೆಯೇ ಇಲ್ಲ. ಯಾಕೆಂದರೆ ಇರುವುದೆಲ್ಲಾ ಗಂಡಸರ ಚಿತ್ರವೇ. ಎಮೋಜಿ ಪ್ರಪಂಚಕ್ಕೆ ಕಾಮಾಲೆ ಕಣ್ಣು. ಹಾಗಾಗಿ ಅದು ನೇರಾ ನೇರ ಲಿಂಗ ವಿರೋಧಿಯಾಗಿ, ವರ್ಣ ಭೇದ ಮಾಡುವ, ಜಗತ್ತು ಅತಿ ವೇಗದಲ್ಲಿ ಓಡುತ್ತಿದೆ ಎನ್ನುವುದನ್ನು ಅರಗಿಸಿಕೊಳ್ಳಲಾಗದ ಒಂದು ಮನಸ್ಸನ್ನೇ ಬಿಂಬಿಸುತ್ತಿತ್ತು. ಜಗತ್ತಿನ ಎಲ್ಲಾ ಸಂಕುಚಿತ ನೋಟ ಅಲ್ಲಿತ್ತು.

ಆದರೆ ಎಮೋಜಿ ಎಂದರೆ ಅದೊಂದು ಚಿತ್ರ ಅಷ್ಟೇ ಎಂದು ಒಪ್ಪಿಕೊಳ್ಳಲು ಜಗತ್ತಿನ ಅನೇಕರು ಸಿದ್ಧರಿರಲಿಲ್ಲ. ಏಕೆಂದರೆ ಎಮೋಜಿ ಮುಂದಿನ ದಿನಗಳಲ್ಲಿ ಏನಾಗುತ್ತದೆ ಎನ್ನುವ ಅವರಿಗಿತ್ತು. ಭಾಷೆ ಎಂದರೆ ಅಕ್ಷರ ಎನ್ನುವ ನೋಟವನ್ನೇ ಈ ಎಮೋಜಿ ಆಗಮನ ನಿವಾಳಿಸಿಹಾಕುತ್ತಿತ್ತು. ಭಾಷೆ ಎನ್ನುವುದು ಅಕ್ಷರದಿಂದ ಕ್ರಮೇಣ ಚಿತ್ರಗಳಾಗುವತ್ತ ವಾಲಿಕೊಳ್ಳುತ್ತಿತ್ತು. ಹೊಸ ಪೀಳಿಗೆಗೆ, ಧಾವಂತದ ಪೀಳಿಗೆಗೆ ಅಕ್ಷರವೇ ಶತ್ರು ಎನ್ನುವ ಕಾಲ ಬಂದುಹೋಗಿತ್ತು. ಆ ಕಾರಣಕ್ಕೆ ಒಂದು ಬೆರಳ ಸ್ಪರ್ಶದಲ್ಲಿ ಒಂದು ವಾಕ್ಯವನ್ನೋ, ಒಂದು ಭಾವನೆಯನ್ನೋ, ಒಂದು ಪ್ರಶ್ನೆಯನ್ನೋ, ಒಂದು ಮನೋಲೋಕವನ್ನೋ ಬಿಚ್ಚಿಟ್ಟುಬಿಡುವ ಎಮೋಜಿಗಳನ್ನು ಆ ಜನಾಂಗ ಬಾಚಿಕೊಳ್ಳಲು ಶುರುವಾಗಿತ್ತು.

ಕಾಮಿಕ್ಸ್ ಗಳನ್ನು ನೀವು ಓದಿದ್ದರೆ ಸ್ವಲ್ಪ ಯೋಚಿಸಿ ಅದರಲ್ಲಿ ವಾಹ್! ಐಡಿಯಾ' ಅನ್ನುವುದನ್ನು ಹೇಗೆ ತೋರಿಸುತ್ತಾರೆ. ಸಿಂಪಲ್. ಒಂದು ಝಗ್' ಎಂದು ಹತ್ತಿರುವ ಬಲ್ಬ್ ಮೂಲಕ. ಅದೇ ಅದೇ ಒಂದು ರೀತಿಯಲ್ಲಿ ಈ ಎಮೋಜಿಗಳು ಹುಟ್ಟಿಬಿಡಲು

ಕಾರಣವಾಗಿ ಹೋಯಿತು. ಶಿಗೇತಕ ಕುರಿಟ ಎನ್ನುವ ಕಲಾವಿದ ಜಪಾನ್‌ನಲ್ಲಿ ಅತ್ಯಂತ ಜನಪ್ರಿಯವಾಗಿರುವ 'ಮಂಗಾ' ಕಾಮಿಕ್ಸ್ ನೋಡುತ್ತಾನೆ. ಅಲ್ಲಿ ಒಂದಲ್ಲ ಎರಡಲ್ಲ ಈ ರೀತಿ ಎಷ್ಟೊಂದು ಸಿಂಬಲ್‌ಗಳಿತ್ತು, ಚೀನೀ ಅಕ್ಷರಗಳೂ ಚಿತ್ರಗಳೇ, ಜೊತೆಗೆ ಜಗತ್ತಿನ ಎಲ್ಲೆಡೆ ಆ ವೇಳೆಗಾಗಲೇ ಹವಾಮಾನ ವರದಿ ನೀಡಲು ಬಳಸುತ್ತಿದ್ದುದು ಚಿತ್ರಗಳನ್ನೇ. ಆಗ ಅವನಿಗೆ ಮಾತಿಗೆ ಚಿತ್ರವನ್ನೇ ಕೊಡಬಹುದಲ್ಲಾ ಎನಿಸಿತು. ಅಲ್ಲಿಂದ ಶುರುವಾಯಿತು ನೋಡಿ ಅವನ ಹೊಸ ವರಸೆ. ಆತ ಜಪಾನಿನ ಬೀದಿ ಬೀದಿ ಅಲೆದ. ಮಾರುಕಟ್ಟೆಯಲ್ಲಿ, ಟ್ರಾಫಿಕ್ ಸಿಗ್ನಲ್ ಗಳಲ್ಲಿ, ಶಾಲೆ ಕಾಲೇಜು ಬಳಿ ನಿಂತ. ಕಣ್ಣಿಗೆ ಕಂಡ ಅಷ್ಟನ್ನೂ ಮನಸ್ಸಿನೊಳಗೆ ಸೇರಿಸುತ್ತಾ ಹೋದ. ಆ ನಂತರ ಇಡೀ ನಗರದಲ್ಲಿ ಸರ್ವೇಸಾಮಾನ್ಯವಾಗಿ ಜನ ಬಳಸುವ ಹಾವಭಾವಗಳಿಗೆ ಚಿತ್ರದ ರೂಪು ಕೊಟ್ಟ. ಮೊದಲ ಕಂತಾಗಿ 180 ಎಮೋಜಿಗಳು ರೂಪುಗೊಂಡವು.

ಅದು 1999– ಶುರುವಾಯಿತು ನೋಡಿ ಹೊಸ ಭಾಷೆಯ ಆಗಮನ. ಅದಾದ ಒಂದು ವರ್ಷಕ್ಕೇ ಭಾಷೆಗೆ ಭಾಷ್ಯ ಬರೆಯುವ ಯುನಿಕೋಡ್ ಸಂಸ್ಥೆಗೆ ಇದು ಮುಂದಿನ ದಿನಗಳಲ್ಲಿ ಇಡೀ ಜಗತ್ತನ್ನು ಹೇಗೆ ಮೋಡಿ ಮಾಡಿಬಿಡುತ್ತದೆ ಎನ್ನುವುದರ ಸುಳುಹು ಸಿಕ್ಕಿಹೋಯಿತು. ಒಂದು ವರ್ಷ ಆಗುವಷ್ಟರಲ್ಲೇ ಯುನಿಕೋಡ್ ತಜ್ಞರು ಕುಳಿತು ಜಪಾನಿಗೆ ಮಾತ್ರ ಸೀಮಿತವಾಗಿದ್ದ ಈ ಚಿತ್ರ ಭಾಷೆಗೆ ಜಾಗತಿಕ ಸ್ಪರ್ಶ ನೀಡಲು ಶುರು ಮಾಡಿದರು. 'ಆಪಲ್' ಮೊಬೈಲ್ ನಲ್ಲಿ ಆನಂತರ ಆಂಡ್ರಾಯ್ಡ್ ಮೊಬೈಲ್‌ಗಳಲ್ಲಿ ಎಮೋಜಿಗಳು ಕ್ಯಾಟ್ ವಾಕ್ ಮಾಡಲು ವೇದಿಕೆ ಸಜ್ಜಾಯಿತು. ಆದರೆ ಇಲ್ಲೊಂದು ಸಮಸ್ಯೆ ಇತ್ತು. ಜಪಾನಿನಲ್ಲಿ ಬದನೇಕಾಯಿ ಅಂದರೆ ಅಮೆರಿಕಾದಲ್ಲಿ ಅದಕ್ಕೆ ತೀರಾ ತೀರಾ ಕೆಟ್ಟರ್ಥ. ಇಂತಹ ದೇಶದಿಂದ ದೇಶಕ್ಕೆ ಬದಲಾಗಿಬಿಡುವ ಅರ್ಥಗಳನ್ನು ನೀಡುವ ಚಿತ್ರಗಳಿಗೆ ಕೊಕ್ ನೀಡಲಾಯಿತು. ಇನ್ನೊಂದೆಡೆ ಜಪಾನಿನಲ್ಲಿ ಶಿರಬಾಗಿ ನಮಸ್ಕರಿಸುವ ಪದ್ಧತಿ ಇದೆ. ಅಂತಹ ಜಪಾನೀ ಸಂಸ್ಕಾರಕ್ಕೆ ಮಾತ್ರ ಒಗ್ಗುವಂತಿದ್ದ ಎಮೋಜಿಗಳಿಗೆ ವಿದಾಯ ಹೇಳಲಾಯಿತು.

ಜಗತ್ತಿನಲ್ಲಿ ಅತಿ ವ್ಯಾಪಕವಾಗಿ ಬಳಸುವ ಆಪರೇಟಿವ್ ಸಿಸ್ಟಮ್‌ಗಳಿಗೆ ಹೊಂದಿಕೆಯಾಗಲು, ಎಲ್ಲರಿಗೂ ಸಲ್ಲುವ ಭಾಷೆ ರೂಪಿಸುವುದೇ ಯುನಿಕೋಡ್ ಸಂಸ್ಥೆ. ಆ ಸಂಸ್ಥೆಯೇ ಬೆರಳು ಕಚ್ಚುವಂತೆ ಎಮೋಜಿಗಳು ಮಿಡತೆಯ ಧಾಳಿಯಂತೆ ಜಗತ್ತನ್ನು ಆಕ್ರಮಿಸಿಕೊಂಡುಬಿಟ್ಟವು.

ಆಗಲೇ ಆಕ್ಸ್‌ಫರ್ಡ್ ಡಿಕ್ಷನರಿ ಸಹಾ ರಂಗಪ್ರವೇಶ ಮಾಡಿದ್ದು. ಯಾವಾಗಲೂ ಪದಗಳನ್ನು ಮಾತ್ರ ಗಮನಿಸಿ ಅದನ್ನು ತನ್ನ ನಿಘಂಟಿಗೆ ಸೇರಿಸಿಕೊಳ್ಳುವ ಮೂಲಕ ಅದಕ್ಕೆ ಮಾನ್ಯತೆ ಕೊಡುತ್ತಿದ್ದ ಆಕ್ಸ್ ಫರ್ಡ್ ನಿಘಂಟು 2015ರಲ್ಲಿ ಒಂದು ಎಮೋಜಿಯನ್ನು ತನ್ನ ನಿಘಂಟಿನ ಒಳಗೆ ಭಾಷೆಯಾಗಿ ಬಿಟ್ಟುಕೊಂಡಿತು. ಅದು ಕಣ್ಣಲ್ಲಿ ನೀರು ಬರುವಂತೆ ನಗು ಉಕ್ಕಿಸುತ್ತಿರುವ ಎಮೋಜಿ. ಆಗಲೇ ಆಕ್ಸ್‌ಫರ್ಡ್‌ನ ಭಾಷಾ ಪಂಡಿತರು ಹೇಳಿದ್ದು. ಕಾಲ ಬದಲಾಗುತ್ತಿದೆ. ಹಾಗೆಯೇ ಭಾಷೆಯೂ.. ಭಾಷೆ ಬದಲಾಗುತ್ತಿರುವುದನ್ನು ಮಡಿವಂತಿಕೆ ಯಿಂದ ನೋಡಬೇಡಿ ಎಂದು.

ಸರಿಬಿಡಪ್ಪಾ, ಎಮೋಜಿ ಏನೋ ಭಾಷೆ ಆಯಿತು. ಆದರೆ ಈ ಗಂಡು, ಹೆಣ್ಣು, ಉಭಯಲಿಂಗಿಗಳು ಇವೆಲ್ಲಾ ಯಾಕೆ ಎನ್ನುವ ಬಾಣವನ್ನು ಹಿಡಿದು ನನ್ನ ಗೆಳೆಯರು ಇನ್ನೂ ಕುಳಿತಿದ್ದರು.

ಆಗಲೇ ನಾನು ಈ ಎಮೋಜಿ ಹಾಗೂ ಸಾಂಸ್ಕೃತಿಕ ವೈವಿಧ್ಯದ ಬಗ್ಗೆ ಭಾಷಣ ಮಾಡಬೇಕಾಗಿ ಬಂದದ್ದು. ನೋಡಿ ಎಮೋಜಿ ಎನ್ನುವುದು ಒಂದು ಭಾಷೆ ಆಗಿಬಿಟ್ಟಾಗ ಅದು ಸಂಸ್ಕೃತಿಯನ್ನೂ ಪ್ರತಿನಿಧಿಸಬೇಕು ಅಂದೆ. ಗೊತ್ತಾಗಲಿಲ್ಲ ಎನ್ನುವಂತೆ ಮೂತಿ ತಿರುವಿದರು. ಆಗಲೇ ನಾನು ಈ ಎಮೋಜಿಗಳ ಬಳಕೆಯ ಬಗ್ಗೆ ಮಿಶಿಗನ್ ವಿಶ್ವವಿದ್ಯಾಲಯ ಇತ್ತೀಚೆಗೆ ತಾನೇ ನಡೆಸಿದ ಸಮೀಕ್ಷೆಯನ್ನು ಬಿಚ್ಚಿಡಬೇಕಾಗಿ ಬಂತು. ನೋಡಿ ಯಾವ ದೇಶ ಯಾವ ಎಮೋಜಿಯನ್ನು ಬಳಸುತ್ತಿದೆ ಎನ್ನುವುದರಲ್ಲಿಯೇ ಆ ದೇಶದ ಅಂತರಂಗವನ್ನು ಅರ್ಥ ಮಾಡಿಕೊಂಡುಬಿಡಬಹುದು. ಫ್ರಾನ್ಸ್ ನಲ್ಲಿ ಲವ್ ಸಿಂಬಲ್‌ಗಳು ಇರುವ ಎಲ್ಲಾ ಎಮೋಜಿ ಪಾಪ್ಯುಲರ್. ಆಸ್ಟ್ರೇಲಿಯಾ, ಜೆಕೊಸ್ಲೊವಾಕಿಯಾ ಇಲ್ಲೆಲ್ಲಾ ಖುಷ್ ಖುಷಿಯಾಗಿರುವ ಎಮೋಜಿಗಳ ಬಳಕೆ ಜಾಸ್ತಿ. ಆದರೆ ಅದೇ ದಕ್ಷಿಣ ಅಮೆರಿಕಾದ ದೇಶಗಳಲ್ಲಿ ನೆಗೆಟಿವ್ ಎಮೋಜಿಗಳು ಹೆಚ್ಚು. ಅಳು, ಬೇಸರ ಹತಾಶೆ.. ಹೀಗೆ.

ಅದಕ್ಕೇ ಎಮೋಜಿ ಅಂದ್ರೆ ಬರೀ ಎಮೋಜಿ ಅಲ್ಲ ಅದು ಒಂದು ನೋಟ ಅಂದೆ. ಕೇಳುತ್ತಿರುವವರ ಮುಖದಲ್ಲಿ ಗೊಂದಲದ ಒಂದು ರೇಖೆಯೂ ಅಲುಗಿರಲಿಲ್ಲ. ಸರಿ ಬಿಡಿ, ಬಾರ್ಬಿ ಡಾಲ್ ಬಂತಲ್ವಾ, ಅದು ಒಂದು ಗೊಂಬೆ ಅಷ್ಟೇ ಆದರೆ ಆ ಗೊಂಬೆ ವಿರುದ್ಧ ಜಗತ್ತಿನ ಎಲ್ಲಾ ಕಡೆ ಜೋರು ಅಪಸ್ವರ ಬಂತಲ್ಲಾ ಯಾಕೆ ಎಂದೆ. ಆಗ ಎದುರಿಗಿದ್ದ ಮುಖಗಳಲ್ಲಿ ಒಂದಿಷ್ಟು ಭಾವ ಬದಲಾಯಿತು. ಬಾರ್ಬಿ ಬಂದಾಗಲೇ ಚರ್ಚೆ ಶುರುವಾಯಿತು. ಕೆಂಚು ಕೂದಲು, ಬೆಕ್ಕಿನ ಕಣ್ಣು, ಸಣ್ಣ ಸೊಂಟ ಇದ್ದರೆ ಮಾತ್ರ ಮಹಿಳೇನಾ ನಾವೇನು ಮನುಷರಲ್ವೇ ಅಂತಾ.. ಆ ಸಮಸ್ಯೆ ಮಹಿಳೆಯರದ್ದು ಮಾತ್ರವೇ ಆಗಿರಲಿಲ್ಲ ಗಂಡಸರು ಮಕ್ಕಳಿಗೂ ಇದೇ ಬಣ್ಣದ ಸಮಸ್ಯೆ ಕಾಡಲು ಶುರುವಾಯ್ತು. ಬಾರ್ಬಿ ಡಾಲ್ ಯಾವಾಗ ಮಾರುಕಟ್ಟೆಗೆ ಬಂತೋ ಅವಳ ಸೊಂಟ, ಬಣ್ಣ ನೋಡಿಯೇ ಜಗತ್ತಿನಾದ್ಯಂತ ಅಪಸ್ವರದ ಅಲೆಗಳು ಎದ್ದಿತು. ಇದು ಬಿಳಿ ಬಣ್ಣದವರು ಬೇಕೆಂದೇ ನಮ್ಮ ಮೇಲೆ ಹೇರುತ್ತಿರುವ ವರ್ಣ ಬೇಧ ಅಂತ. ಬಿಳಿ ಮಾತ್ರ ಶ್ರೇಷ್ಠ ಅನ್ನೋ ಪರೋಕ್ಷ ಹುನ್ನಾರದ ವಿರುದ್ಧ ಬರೀ ಬೀದಿ ಮೆರವಣಿಗೆ ಮಾತ್ರವೇ ನಡೆಯಲಿಲ್ಲ, ಅನೇಕ ಕಂಪನಿಗಳು ಬಾರ್ಬಿಗೆ ಪ್ರತಿಯಾಗಿ ಬಿಳಿ ಅಲ್ಲದ ಬಾರ್ಬಿಗಳನ್ನು ಮಾರುಕಟ್ಟೆಗೆ ಬಿಟ್ಟವು.

ಈಗಲೂ ಅದೇ ದನಿ ಎದ್ದಿತು. ಎಮೋಜಿಗಳ ವಿರುದ್ಧ. ಒಂದೆಡೆ ಮಹಿಳೆಯರ ಬಗ್ಗೆ ತಾರತಮ್ಯವನ್ನ ತೋರಿಸ್ತಿದೆ ಅಂತ ಜೋರು ದನಿ ಇನ್ನೊಂದೆಡೆ ವರ್ಣ ಬೇಧಕ್ಕೆ ಅಡಿಪಾಯ ಹಾಕ್ತಿದ್ದಾರೆ. ಜನ ಸುಮ್ಮನೆ ಕೂಡಲಿಲ್ಲ. ಈ ಎಮೋಜಿ ಮಾಡೋರು ಯಾರು ಅಂತ ಹುಡುಕಿದರು. ಅವರ ಮುಂದೆ ಸಲಹೆಗಳ ರಾಶಿಯೇ ಬಿತ್ತು. ಆಗಲೇ ಯೂನಿಕೋಡ್ ಸಂಸ್ಥೆ ಎಚ್ಚೆತ್ತುಕೊಂಡಿದ್ದು. ಯುನಿಕೋಡ್ ಕನ್ಸೋರ್ಟಿಯಂ ಅಂತ ಇದೆ. ಅದು ಸಭೆ ಕೂತು ಜಗತ್ತಿನ ಎಲ್ಲೆಡೆಯಿಂದ ಬರುವ ಸಲಹೆಗಳನ್ನ ಪರಿಶೀಲಿಸುತ್ತೆ. ಅದು ಯಾಕೆ, ಅದರ ಪರಿಣಾಮ ಏನು, ಜನ ಬಳಸ್ತಾರಾ ಈ ಎಲ್ಲಾ ಲೆಕ್ಕ ಇಟ್ಟುಕೊಂಡು ಒಂದಷ್ಟು ಹೊಸ ಎಮೋಜಿಗಳನ್ನ ಆಯ್ಕೆ ಮಾಡುತ್ತೆ. ಏನಿಲ್ಲಾ ಅಂದ್ರೂ ಎರಡು ವರ್ಷ ಬೇಕು ಹೊಸ ಎಮೋಜಿ ನಮ್ಮ ಮೊಬೈಲ್‌ನಲ್ಲೋ, ಕಂಪ್ಯೂಟರ್‌ನಲ್ಲೋ ಇಣುಕೋಕೆ.

ನೀವು ಎಮೋಜಿ ಬಳಸ್ತಾ ಇದ್ದೀರಾ .. ಹಾಗಂತ ಪ್ರಶ್ನೆ ಕೇಳೋದೇ ಮೂರ್ಖತನ.. ಇರ್ಲಿಬಿಡಿ ನೀವು ಬಳಸ್ತಾ ಇರೋ ಎಮೋಜಿಗಳಲ್ಲಿ ಒಂದಷ್ಟು ಬದಲಾವಣೆ

ಆಗಿದೆ ಗಮನಿಸಿದ್ದೀರಾ.. ಮೊದಲು ಫೇಸ್ ಬುಕ್‌ನಲ್ಲಿ ಲೈಕ್ ಸಿಂಬಲ್ ಒತ್ತುವಾಗ ಒಂದೇ ಸಿಂಬಲ್ ಬರ್ತಿತ್ತು ಈಗ ಏನಿಲ್ಲಾ ಅಂದ್ರೂ ಐದು ಸಿಂಬಲ್ ಇರುತ್ತೆ. ಯಾಕೇಳಿ. ಅದು ಬರೀ ಕೆಂಚು, ಬಿಳಿ ಅಲ್ಲ, ಈಗ ಕಂದು, ಕಪ್ಪು, ಅರೆಗಪ್ಪು ಹೀಗೆ ಬದಲಾಗಿದೆ. ಎಮೋಜಿಗಳು ಜಗತ್ತಿನಲ್ಲಿ ಬರೀ ಬಿಳಿಯರು ಇಲ್ಲ ಅನ್ನೋದನ್ನ ಅರ್ಥ ಮಾಡಿಕೊಳ್ತಾ ಇವೆ.

ಅಷ್ಟೇ ಅಲ್ಲ, ಈಗ ಸುಮ್ಮನೆ ವಾಟ್ಸ್ ಅಪ್‌ನ ಎಮೋಜಿ ಲಿಸ್ಟ್ ಗೆ ಹೋಗಿ ನೋಡಿ ಅಲ್ಲೂ ಏನೇನೋ ಚೇಂಜ್ ಆಗಿದೆ. ಮೊದಲು ಗಂಡಸರೇ ಇದ್ದ ಜಾಗದಲ್ಲಿ ಎಷ್ಟೊಂದು ಹೆಂಗಸರೂ ಬಂದಿದ್ದಾರೆ. ಹೆಣ್ಣು ಅಂದ್ರೆ ಬರೀ ಮನೆಕೆಲಸದವಳು ಅಂದುಕೊಂಡಿದ್ದ ಇದೇ ಎಮೋಜಿ ಈಗ ಅವಳನ್ನ ಸಮಾಜವನ್ನ ಮುನ್ನಡೆಸುವವಳಾಗಿ ಬದಲು ಮಾಡಿದ್ದಾರೆ. ಅಷ್ಟೇ ಅಲ್ಲಾ.. ಆ ಹೆಂಗಸರ ಬಣ್ಣ, ಭಾವನೆಗಳಲ್ಲೂ ವೆರೈಟಿ ಬಂದಿದೆ.

ಇಷ್ಟಕ್ಕೆ ಕೊನೆ ಮಾಡಬಹುದಿತ್ತೇನೋ.. ಆದರೆ ಎಮೋಜಿ ಗಂಡಾ ಹೆಣ್ಣಾ..ಅಂತ ಕೇಳಿದಾಗ ಗೊಳ್ ಅಂತ ನಕ್ಕಿದ್ರಲ್ಲಾ ಅದು ನನ್ನ ತಲೆಯಲ್ಲಿ ಕೊರೀತಾ ಇತ್ತು. ಎಮೋಜಿ ಅಂದ್ರೆ ಬರೀ ಗಂಡು ಹೆಣ್ಣು ಮಾತ್ರ ಅಲ್ಲಾ ಮಚ್ಚಾ.. ಉಭಯಲಿಂಗಿಗಳೂ ಸಹಾ.. ಬೇಕಾದ್ರೆ ಮತ್ತೆ ವಾಟ್ಸ್ ಅಪ್ ನೋಡು ಅಂದೆ. ಗೆಳೆಯರು ತಕ್ಷಣ ಸ್ಮಾರ್ಟ್ ಫೋನ್ ಸವರಲು ಶುರು ಮಾಡಿದರು.. ಅರೆ.. ಎಂಬ ಉದ್ಗಾರ ತೆಗೆದರು. ಯಾಕೆಂದರೆ ಈಗ ಎಮೋಜಿಗಳಲ್ಲಿ 'ಗೇ'ಗಳಿದ್ದಾರೆ 'ಲೆಸ್ಬಿಯನ್'ಗಳಿದ್ದಾರೆ. ಅವರು ಸಂಸಾರ ಮಾಡುವ ಕಲ್ಪನೆಗೂ ಚಿತ್ರ ರೂಪ ಬಂದಿದೆ.

ಈ ಎಲ್ಲಾ ಬದಲಾವಣೆ ಆಗಿದ್ದು ಯಾಕೆ ಗೊತ್ತಾ?, ಎಮೋಜಿಗಳು ಅಪ್ಪ ಹಾಕಿದ ಆಲದ ಮರಕ್ಕೆ ನೇತು ಹಾಕಿಕೊಂಡಿಲ್ಲ ಅವು. ಈಗಿನ ಲಿಂಗ ರಹಿತ ಸಮಾಜದ ಭಾಷೆಯನ್ನೂ ಮಾತನಾಡುತ್ತಿದೆ. ಈಗಿನ ಆಲೋಚನೆಗಳನ್ನು ಒಳಗೊಳ್ಳುತ್ತಿದೆ. ಹೀಗೆ ಹೇಳುತ್ತಿರುವಾಗಲೇ ಆ ಕಡೆಯಿಂದ ಫೋನ್– ಏನು ಗೊತ್ತಾ ಈ ಬಾರಿ ಮೊಲೆ ಊಡಿಸುತ್ತಿರುವ ಮಹಿಳೆಯ ಚಿತ್ರ ಎಮೋಜಿ ಆಗಿ ಆಯ್ಕೆ ಆಗಿದೆಯಂತೆ ಅಂತ. ಹೌದಲ್ಲಾ..! ಮೊನ್ನೆ ಮೊನ್ನೆ ತಾನೇ ಮೊಲೆ ಊಡಿಸುತ್ತಾ ಆಸ್ಟ್ರೇಲಿಯಾದ ಸೆನೆಟ್ ನಲ್ಲಿ ಭಾಷಣ ಮಾಡಿದ ಲಾರೀಸಾ ವಾಟರ್ಸ್ ನೆನಪಾದರು ಜನ ಚೇಂಜ್ ಕೇಳ್ತಾರೆ.. 'ಎಮೋಜಿ' ಚೇಂಜ್ ಆಗ್ತಿದೆ.

***ಸೌಜನ್ಯ: ಅವಧಿ***

■

---

# ಧೈರ್ಯ

ಗಂಡ ಹೆಂಡತಿ ಜಗಳ ನಡೆಯಿತು. ನಾನೇನು ನಿನಗೆ ಹೆದರೊಲ್ಲ ಎಂದ ಗಂಡ. ಹೆಂಡತಿ: ಸುಮ್ಮನೆ ಸುಳ್ಳು ಹೇಳಬೇಡಿ. ನೀವು ನನ್ನ ನೋಡಲು ಮೊದಲನೆ ಸಲ ಬಂದಾಗ ಆರು ಜನರನ್ನು ಕರೆದುಕೊಂಡು ಬಂದಿರಿ, ಎಂಗೇಜ್‌ಮೆಂಟಗೆ 100 ಜನ ಬಂದರು. ಮದುವೆಗೆ 500 ಮಂದಿ. ಆದರೆ ನಾನು ನೋಡಿ ಎಷ್ಟು ಧೈರ್ಯಶಾಲಿ ನಿಮ್ಮ ಮನೆಗೆ ನಾನೊಬ್ಬಳೇ ಬಂದೆ.

# ‘ಆಕಾಶವಾಣಿ’ ಎಂಬ ಅಶರೀರ ವಾಣಿ!

● ಎಂ.ಆರ್. ಕಮಲ

ನಮ್ಮ ಮನೆಯಲ್ಲಿ ಎಚ್.ಎಂ.ವಿ ಕಂಪನಿಯ ಗ್ರಾಮಾಫೋನೊಂದು ಇತ್ತು. (1930) ಅಣ್ಣನಿಗೆ ಅವರ ಮಾವ ಅಂದರೆ ನನ್ನ ತಾಯಿಯ ತಂದೆ ಕೊಟ್ಟ ಉಡುಗೊರೆಯಂತೆ. ಸುಮಾರು ಮುನ್ನೂರು ತಟ್ಟೆಗಳು ಮನೆಯಲ್ಲಿದ್ದವು. ಅದರಲ್ಲಿ ಹನ್ನೆರಡು ತಟ್ಟೆಗಳ ಗಯಾಚರಿತ್ರೆ ತುಂಬಾ ಪ್ರಸಿದ್ಧಿ ಪಡೆದಿತ್ತಂತೆ. ಆ ಕಾಲದ ಖ್ಯಾತನಾಮರ ಗಾನ ಮುದ್ರಿಕೆಗಳು ಸಹ ಇದ್ದವು. ಎರಡು ತಟ್ಟೆಗಳು ನನ್ನ ಅಣ್ಣ ಶಂಕರನ ಬಳಿ ಈಗಲೂ ಇವೆ. ವಂದೇ ಮಾತರಂ ಮತ್ತು ಸ್ವಾಮಿ ಶಿವಾನಂದರು ಹಾಡಿರುವ ಹಾಡುಗಳು ಅವುಗಳಲ್ಲಿವೆ. ಅದನ್ನು ಬಳಸುತ್ತಿದ್ದ ಕಾಲದಲ್ಲಿ ನಾನು ಹುಟ್ಟಿರಲಿಲ್ಲ. ಅಜ್ಜ, ಅಣ್ಣನ ಸಂಗ್ರಹದಲ್ಲಿ ಮತ್ಯಾವ ಹಾಡುಗಳು ಇದ್ದವೋ ತಿಳಿಯದು. ಆದರೆ ಬಿ.ಎಸ್. ರಾಜ್ ಐಯಂಗಾರ್ ಅವರ ‘ಜಗದೋದ್ಧಾರನ’ ಬಗ್ಗೆ ಅಣ್ಣ ಅನೇಕ ಬಾರಿ ಹೇಳಿದ್ದರು. ಸದಾರಮೆ ನಾಟಕದ ಕೆಲವು ಹಾಡುಗಳು ಇದ್ದವೆನಿಸುತ್ತದೆ. ನಾನು ನೋಡುವ ಹೊತ್ತಿಗೆ, ಗ್ರಾಮಾಫೋನ್ ತಟ್ಟೆಗಳು ಅಟ್ಟದಲ್ಲಿ ಅನಾಥವಾಗಿ ಮುರಿದು ಬಿದ್ದಿದ್ದವು.

ನಮ್ಮ ಮನೆಯ ದಿವಾನ್ ಖಾನೆಯ ಟೇಬಲ್ ಮೇಲೆ ‘ಫಿಲಿಪ್ಸ್ ರೇಡಿಯೋ’ (ವಿತ್ ಮ್ಯಾಜಿಕ್‌ಐ) ಇತ್ತು. ಅಲ್ಲಿಂದ ಅದನ್ನು ಯಾರೂ ಅಲುಗಾಡಿಸುವಂತಿರಲಿಲ್ಲ. ನಮ್ಮ ಮನೆಗೆ ರೇಡಿಯೋ ಬಂದಿದ್ದು ಅರವತ್ತರ ದಶಕದ ಆರಂಭದಲ್ಲಿ. ಅದಕ್ಕೂ ಒಂದು ವರ್ಷ ಮುಂಚೆ ಪಂಚಾಯಿತಿಗೆ ಒಂದು ಸಾರ್ವಜನಿಕ ರೇಡಿಯೋ ಬಂದಿತ್ತು. ಅಲ್ಲಿಯೇ ನನ್ನ ಅಣ್ಣಂದಿರು ಕೂತು ಕ್ರಿಕೆಟ್ ಕಾಮೆಂಟರಿಯನ್ನು ಕೇಳುತ್ತಿದ್ದರಂತೆ. ಬರುತ್ತಿದ್ದದ್ದೇ ಮೂರು ಸ್ಟೇಷನ್. ಬೆಂಗಳೂರು ಆಕಾಶವಾಣಿ, ವಿವಿಧ ಭಾರತಿ, ರೇಡಿಯೋ ಸಿಲೋನ್. ನಮ್ಮ ನೆರೆಮನೆಯವರು ಮೊದಲು ರೇಡಿಯೋ ತಂದರಂತೆ. ಜ್ಞಾನದ ಹಸಿವಿನ ನಮ್ಮ ಮನೆಯ ಮಕ್ಕಳು ಅವರು ರೇಡಿಯೋ ಹಾಕಿದಾಗ ಅಂಗಳದಲ್ಲಿ ಕುಳಿತು ಕೇಳುತ್ತಿದ್ದುದನ್ನು ನೋಡಿ ನಮ್ಮ ಮನೆಗೂ ಅಣ್ಣ ರೇಡಿಯೋ ತಂದರಂತೆ.

ನಾನು ಚಿಕ್ಕವಳಿದ್ದಾಗ ರೇಡಿಯೋ ಮುಂದೆ ಕುಳಿತು ಹಾಡು ಕೇಳುತ್ತಿರಲಿಲ್ಲ. ಆಟದ ಹುಚ್ಚು ವಿಪರೀತವಾಗಿದ್ದ ಕಾಲ ಅದು. ಮನೆಯಲ್ಲಿ ಡಾಕ್ಟರ್ ಚಿಕ್ಕಪ್ಪನ ಮಕ್ಕಳಾದ ವೇಣು, ವಾಸುಕಿ ಸಹ ಇದ್ದರು. ಚಿಕ್ಕಪ್ಪನಿಗೆ ಎಲ್ಲೆಲ್ಲೋ ವರ್ಗಾವಣೆಯಾಗುತ್ತಿದ್ದುದರಿಂದ ಮೇಟಿಕುರ್ಕೆಯಲ್ಲಿ ಅವರನ್ನು ಓದಲು ಬಿಟ್ಟಿದ್ದರು. ವೇಣುವಿನಷ್ಟು ತುಂಟತನ ಮಾಡುತ್ತಿದ್ದ ಮತ್ತೊಬ್ಬ ಹುಡುಗನೇ ಇಲ್ಲ. ಅವನೇ ಆಗ ನಮ್ಮೆಲ್ಲರ ಕೆಟ್ಟ ಚೇಷ್ಟೆಗಳಿಗೆ ‘ರೋಲ್ ಮಾಡೆಲ್’! ಜಗುಲಿಯಲ್ಲಿ ನಿಂತು ರೇಡಿಯೋಗೆ ಚೆಂಡನ್ನು (ಫುಟ್ಬಾಲ್ ನಂತೆ) ಗುರಿಯಿಟ್ಟು ಒದೆಯುವುದನ್ನು ತೋರಿಸಿಕೊಟ್ಟಿದ್ದ. ಈ ಪ್ರಯೋಗ ಮಾಡಲು ಹೋಗಿ ಅಣ್ಣನ ಹತ್ತಿರ ಸರಿಯಾಗಿ ಹೊಡೆತ ತಿಂದಿದ್ದು ಇದೆ. ಸ್ನಾನ ಮಾಡುವ ಬಚ್ಚಲ ತೊಟ್ಟಿಯನ್ನು ಶುದ್ಧ ಮಾಡುವುದು ಹೇಗೆ ಎಂದು ತೋರಿಸಲು ಒಮ್ಮೆ ಸೋಪುಗಳನ್ನು ಅದರಲ್ಲಿ ಹಾಕಿ, ತೊಟ್ಟಿಯ ನೀರಿನಲ್ಲಿಯೇ ಬಟ್ಟೆ ಒಗೆಸಿದ್ದ. ಅಮ್ಮ ಬಂದು ನೋಡಿದಾಗ ಇಡೀ ತೊಟ್ಟಿಯ ತುಂಬಾ ಸೋಪಿನ ನೊರೆ ತೇಲುತ್ತಿತ್ತು. ಅವತ್ತು ಅಣ್ಣನಿಗೆ ಬಂದಷ್ಟು ಕೋಪ ಮತ್ಯಾವತ್ತು

ಬಂದಿಲ್ಲ. ಹಿತ್ತಲಿನ ಚಪ್ಪಡಿಕಲ್ಲನ್ನು ಹಾರಿ, ಆಚಾರರ ಮನೆಯ ಬೇಲಿ ದಾಟಿ ಓಡಿ ಹೋಗಿದ್ದ ನಮ್ಮನ್ನು ಅಣ್ಣ ಪೊರಕೆ ಹಿಡಿದು ಊರ ತುಂಬಾ ಅಟ್ಟಾಡಿಸಿದ್ದು ಇನ್ನೂ ಚೆನ್ನಾಗಿ ನೆನಪಿದೆ. ಹೀಗೆ ಕಳ್ಳಬುದ್ಧಿ ಮಾಡಿ, ಸಿಕ್ಕ ಮೇಲೆ ಅಣ್ಣ ಕೊಡುತ್ತಿದ್ದ ಶಿಕ್ಷೆಯೆಂದರೆ ಮಾಡಿದ ತಪ್ಪನ್ನು ಸ್ಲೇಟಿನಲ್ಲಿ ಬರೆದು, ಹಾದಿಬೀದಿಯಲ್ಲಿ ಹಾದು ಹೋಗುವವರೆಲ್ಲ ನೋಡುವಂತೆ ಹಿಡಿದು ನಿಲ್ಲುವುದು. ಊರಿಗೆಲ್ಲ ನಾವು ಮಾಡುತ್ತಿದ್ದ ಕೆಟ್ಟ ಕೆಲಸಗಳು ತಿಳಿದು ಅವಮಾನವಾಗುತ್ತಿದ್ದುದರಿಂದ ಅಣ್ಣನ ಕೈಗೆ ಸಿಕ್ಕಿ ಹಾಕಿಕೊಳ್ಳದ ಹಾಗೆ ಏನೆಲ್ಲಾ ಮಾಡಬಹುದು ಎನ್ನುವ ಗಹನವಾದ ಚಿಂತನೆಯಲ್ಲಿ ತೊಡಗಿರುತ್ತಿದ್ದೆವು.

ನಾನು ಒಂಬತ್ತನೇ ತರಗತಿಯಲ್ಲಿದ್ದೆ ಅನ್ನಿಸುತ್ತೆ. ನನ್ನ ಸೋದರ ಶಂಕರ ಅಷ್ಟು ಹೊತ್ತಿಗೆ ಡಾಕ್ಟರ್ ಆಗಿದ್ದನಲ್ಲ! ಅವನಿಗೆ ಯಾವಾಗಲೂ ಎಲೆಕ್ಟ್ರಾನಿಕ್ ವಸ್ತುಗಳ ಹುಚ್ಚು. ಹೊಸ ಹೊಸ ವಸ್ತುಗಳು ಬಂದ ತಕ್ಷಣ ಮೊದಲು ಅವನೇ ಕೊಂಡುಕೊಳ್ಳುತ್ತಿದ್ದುದು. ಅವನೊಂದು ಟೇಪ್ ರೆಕಾರ್ಡರ್ ತಂದು ಊರಿನಲ್ಲಿ ಸಂಚಲನವನ್ನೇ ಮೂಡಿಸಿದ್ದ. ಅದಕ್ಕೂ ಮುಂಚೆ ವೈದ್ಯಕೀಯ ಓದುವಾಗ ಸ್ಕೆಲಿಟನ್ (ಅಸ್ಥಿಪಂಜರ) ಒಂದನ್ನು ಪೆಟ್ಟಿಗೆಯಲ್ಲಿ ಹಾಕಿಕೊಂಡು ಬಂದು, ಅಜ್ಜನ ಮನೆಯಲ್ಲಿಟ್ಟು ಭೀತಿ ಹುಟ್ಟಿಸಿದ್ದ! ಆಗೆಲ್ಲ ನಾವು ಒಟ್ಟೊಟ್ಟಾಗಿ ಅಜ್ಜನ ಮನೆಗೆ ಹೋಗಿ, ಬುರುಡೆಯನ್ನು, ಪಕ್ಕೆಲುಬುಗಳನ್ನು, ಕಾಲನ್ನು, ಕೈಯನ್ನು ಮುಟ್ಟಿ ಮುಟ್ಟಿ ಖುಷಿಪಡುತ್ತಿದ್ದೆವು. ಅಜ್ಜ ಇಲ್ಲದ ಸಮಯದಲ್ಲಿ ಮಾತ್ರ ಆ ಹಾಳು ಅಸ್ಥಿಪಂಜರದ ಭಯಕ್ಕೆ ಅಲ್ಲಿಗೆ ಕಾಲಿಡುತ್ತಿರಲಿಲ್ಲ. ಶಂಕರ ಬಂದರೆ ನನಗಂತೂ ಖುಷಿಯಾಗುತ್ತಿತ್ತು. ರೆಕಾರ್ಡ್ ಪುಸ್ತಕದಲ್ಲಿ ನೂರಾರು ಚಿತ್ರಗಳನ್ನು ಬರೆದಿದ್ದನ್ನು ತೋರಿಸುತ್ತಿದ್ದ. ದೇಹದ ಭಾಗಗಳು ಮಾತ್ರವಲ್ಲ, ಮನುಷ್ಯರ ಚಿತ್ರಗಳನ್ನು ಸಹ ಅಂದವಾಗಿ ಬರೆಯುತ್ತಿದ್ದ. ನನ್ನ ತಮ್ಮ ಸುಬ್ಬಣ್ಣನ ಚಿತ್ರವನ್ನು ಬಹು ಮುದ್ದಾಗಿ ಬರೆದು ತೋರಿಸಿದ್ದ. ನನಗೆ ಚಿತ್ರ ಬರೆಯುವ ಹುಚ್ಚು ಹಿಡಿದಿದ್ದು ಹೀಗೆ! ನಾನಾಗ ಸುಧಾದಲ್ಲಿ ಬರುತ್ತಿದ್ದ ಧಾರಾವಾಹಿಗಳಿಗೆ ಚಿತ್ರ ಬರೆಯುತ್ತಿದ್ದ ಜಿ.ಕೆ. ಸತ್ಯ, ಚಂದ್ರನಾಥ್ ಆಚಾರ್ಯರ ಚಿತ್ರಗಳನ್ನು ನಕಲು ಮಾಡಿ ಬರೆಯುತ್ತಿದ್ದೆ. ಮಾನಸ ಗಂಗೋತ್ರಿಯಲ್ಲಿ ಎಂ.ಎ ಓದುತ್ತಿದ್ದ ಪ್ರಭು ಬಂದರೆ ರಾಶಿ ಪುಸ್ತಕಗಳು ಅವನೊಟ್ಟಿಗೆ ಬರುತ್ತಿದ್ದವು. ರಷ್ಯನ್ ಮಕ್ಕಳ ಕಥೆಗಳನ್ನು ನಾನು ಓದಿದ್ದು ಆಗಲೇ. "Masha's Days' ಎಂಬ ಪುಸ್ತಕದಲ್ಲಿದ್ದ ಚಿತ್ರಗಳು ಈಗಲೂ ಕಣ್ಣಿಗೆ ಕಟ್ಟಿದಂತಿವೆ. ಮಾಷ ಬಹುಶಃ ರಷ್ಯನ್ ಹುಡುಗಿ. ಅದರಲ್ಲಿದ್ದ ಒಂದು ಪದ್ಯ ಹೀಗೆ ಇತ್ತು.

‘‘ಅರ್ಲಿ ಎವೆರಿ ಮಾರ್ನಿಂಗ್  
ಐ ವಾಶ್ ಅಂಡ್ ಬ್ರಶ್ ಮೈ ಟೀತ್  
ಸೀ ದ ವಾಟರ್ ಪೋರಿಂಗ್  
ಐ ಆಮ್ ಟ್ರೈಯಿಂಗ್ ಟು ಬಿ ನೀಟ್’’

ಪೆಟ್ಟಿಕೋಟ್ ತೊಟ್ಟಿರುವ ಮಾಷ ನಲ್ಲಿಯ ನೀರನ್ನು ಬಿಟ್ಟುಕೊಂಡು, ಬ್ರಷ್‌ನಲ್ಲಿ ಹಲ್ಲುಜ್ಜುತ್ತಾ ಹೇಳಿಕೊಳ್ಳುತ್ತಿದ್ದ ಮಾತುಗಳು ಇವು. ಈ ಎಲ್ಲ ಚಿತ್ರಗಳನ್ನು ನಾನು ಗೋಡೆಯ ಮೇಲೆ ಬರೆದು ಬರೆದು ಅಮ್ಮನ ಹತ್ತಿರ ಬೈಸಿಕೊಳ್ಳುತ್ತಿದ್ದೆ. ನಾನೇ ಬಿಡಿಸಿದ್ದ ಒಂದು ಹಂದಿಯ (ಪಿಗ್ಗಿ) ಚಿತ್ರ ಮೊನ್ನೆ ಮೇಟಿಕುರ್ಕೆಗೆ ಹೋದಾಗಲೂ ಅಸ್ಪಷ್ಟವಾಗಿ

ಕಾಣುತ್ತಿತ್ತು. ಟೇಪ್ ರೆಕಾರ್ಡರ್ ಬಗ್ಗೆ ಹೇಳುತ್ತಿದ್ದೆನಲ್ಲ. ತಂದ ದಿನ, ಇಸವಿಯೆಲ್ಲ ಮರೆತು ಹೋಗಿದೆ. ಆದರೆ ಶರಪಂಜರ ಬಿಡುಗಡೆಯಾಗಿದ್ದರಿಂದ 71 ಅಥವಾ 72 ಇರಬಹುದು. ಆಗ ಅದಕ್ಕೆ ಎಂಟು ನೂರು ರೂಪಾಯಿಗಳು. ಅದು ಬಂದ ಇಡೀ ದಿನ ನಾವೆಲ್ಲಾ ಹುಚ್ಚುಚ್ಚಾಗಿ ಆಡಿದ್ದೇವೆ. ನಗುವುದು, ರೆಕಾರ್ಡ್ ಮಾಡುವುದು, ಮತ್ತೆ ಹಾಕಿಕೊಂಡು ಕೇಳುವುದು. ಎಲ್ಲರು ಹಾಡು ಹೇಳುವುದು, ಕಿರುಚುವುದು ಮತ್ತೆ ಕೇಳುವುದು. ಬರೀ ಇದೆ ಕೆಲಸ. ಅಣ್ಣ 'ರಾಮ ನನ್ನು ಬ್ರೋವರಾ' ಕೀರ್ತನೆ ಹಾಡಿದ್ದರೆಂದು ನೆನಪು. ನನ್ನ ತಮ್ಮ ಸುಬ್ಬಣ್ಣ ಶರಪಂಜರದ 'ಸಂದೇಶ, ಮೇಘ ಸಂದೇಶ' ಹಾಡನ್ನು ಅದೆಷ್ಟು ಚೆನ್ನಾಗಿ ಹಾಡಿದ್ದ! 'ಜಾಣೆ, ಸಂದೇಶ ಹಾಕೇ' ಎಂದು ಮಾತೆತ್ತಿದರೆ ಅಣ್ಣ ಹೇಳುತ್ತಿದ್ದರು. ಮನೆಯ ಹತ್ತಿರ ನಡೆದ, ಅವಾಚ್ಯ ಶಬ್ದಗಳಿಂದಲೇ ತುಂಬಿ ಹೋಗಿದ್ದ ಭಾರೀ ಜಗಳವನ್ನು ರೆಕಾರ್ಡ್ ಮಾಡಿಕೊಂಡು ಆಗಾಗ್ಗೆ ಕೇಳಿದ್ದೂ ಉಂಟು!

ಸ್ವಲ್ಪ ದಿನಗಳ ನಂತರ ಮತ್ತೆ ನಾವು ರೇಡಿಯೋಗೆ ಮರಳಿದ್ದೆವು. ಪ್ರತಿ ಭಾನುವಾರ ಬೆಳಗ್ಗೆ ಬರುತ್ತಿದ್ದ ''ಪಕ್ಷಿನೋಟ''ವನ್ನು ಬಹಳ ಕಾತರದಿಂದ ಕೇಳುತ್ತಿದ್ದೆವು. ಅದರ ಅನೌನ್ಸರ್ ದನಿ ಏನೋ ಒಂದು ವಿಶಿಷ್ಟ ರೀತಿಯಲ್ಲಿ ಇತ್ತು. ನನಗೆ ತುಂಬಾ ಪ್ರಿಯವಾಗಿದ್ದ ಕಾರ್ಯಕ್ರಮವೆಂದರೆ ನಿಮ್ಮ ಮೆಚ್ಚಿನ ಚಿತ್ರಗೀತೆಗಳು ಮತ್ತು ಬಾಲ ಜಗತ್, ಸಿಗ್ನೇಚರ್ ಟ್ಯೂನ್! ಇದರ ಜೊತೆಗೆ ಬುಧವಾರ ಕೇಳುತ್ತಿದ್ದ ಬಿನಾಕಾ ಗೀತ್ ಮಾಲಾ. ಹೆಂಗಸರು 'ಗೀತಾರಾಧನಾ' ಮಧ್ಯಾಹ್ನದ 'ವನಿತಾ ವಿಹಾರ' ಕೇಳುತ್ತಿದ್ದರು. ಇನ್ನು ವಿವಿಧ ಭಾರತಿಯಲ್ಲಿ ಬೆಳಗ್ಗೆಯ – ಸಂಗೀತ್ ಸರಿತಾ, ಭೂಲೆ ಬಿಸರೆ ಗೀತ್, ಮಧ್ಯಾಹ್ನದ ಲೋಕ್ ಸಂಗೀತ, ರಾತ್ರಿಯ ಆಪ್ ಕೀ ಫರಮಾಯಿಷ್, ಛಾಯಾಗೀತ್ ಇತ್ಯಾದಿಗಳು. ಆದರೆ ಹಿಂದಿ ಹಾಡುಗಳು ನನ್ನನ್ನು ಅಷ್ಟಾಗಿ ಆಕರ್ಷಿಸುತ್ತಿರಲಿಲ್ಲ, ಅಂದಿನಿಂದ ಇಂದಿನವರೆಗೂ ನನಗೆ ಭಾವಗೀತೆಗಳು, ಅದರ ಸಾಹಿತ್ಯ ಬಲು ಪ್ರಿಯ. ಯಾವುದೇ ಕವಿಯ ಕವನ ಸಂಕಲನಗಳು ಊರಿನಲ್ಲಿ ಸಿಕ್ಕುತ್ತಿರಲಿಲ್ಲ. ಆದರೆ ಸಾಹಿತ್ಯದಲ್ಲಿ ಅಭಿರುಚಿಯನ್ನು ಹುಟ್ಟಿಸಿದ್ದು ಮಧ್ಯಾಹ್ನ ಒಂದು ಗಂಟೆಗೆ ಬರುತ್ತಿದ್ದ ಭಾವಗೀತೆಗಳೇ.

ಚಿತ್ರಗೀತೆಗಳೆಂದರೆ ಪಂಚಪ್ರಾಣ. ಸಂಜೆ ಐದೂವರೆಗೆ ಹೊಸ ಹಾಡುಗಳು ಬರುತ್ತಿದ್ದವಲ್ಲ! ಜಾಗವನ್ನು ಬಿಟ್ಟು ಕದಲದೆ ಕುಳಿತು ಕೇಳುತ್ತಿದ್ದೆವು. ದಿವಾನ್ ಖಾನೆಯಲ್ಲಿದ್ದ ರೇಡಿಯೋ ಅಮ್ಮನಿಗೆ ಕೇಳುವುದಿಲ್ಲವೆಂದು ಒಂದು ವೈರ್ ಎಳೆದು 'ಟುನೋಫೋನ್' ಅಂತ ಅಡುಗೆ ಮನೆಯ ಬಾಗಿಲ ಬಳಿ ನೇತುಹಾಕಿದ್ದರು. ಅಮ್ಮನಿಗೆಂದು ಟುನೋಫೋನ್ ಹಾಕಿಸಿದ್ದರೂ ಅಮ್ಮ ಕೇಳಿದ್ದಕ್ಕಿಂತ ನಾವು ಕೇಳಿದ್ದೇ ಹೆಚ್ಚು! ಆಗೆಲ್ಲ ಸೌಂಡ್ ಟ್ರ್ಯಾಕ್ ಬರುತ್ತಿತ್ತಲ್ಲ, ಬೇಗ ಬೇಗ ಕೆಲಸ, ಊಟ ಮುಗಿಸಿ ಸಂಭ್ರಮದಿಂದ ರೇಡಿಯೊ ಮುಂದೆ ಕೂರುತ್ತಿದ್ದೆವು.

'ಆಕಾಶವಾಣಿ, ವಾರ್ತೆಗಳು, ಓದುತ್ತಿರುವವರು ಕಮಲಾ ಎಸ್ ಬಾಲು' ಎಂದು ಆರಂಭದಲ್ಲಿಯೇ ಹೇಳಿಬಿಡುತ್ತಿದ್ದರಲ್ಲ. ವಾರ್ತೆ ಮತ್ತು ಪ್ರದೇಶ ಸಮಾಚಾರ ಓದುತ್ತಿದ್ದ ಕಮಲಾ, ನಾಗಮಣಿ ಎಸ್ ರಾವ್, ರಾಮಕೃಷ್ಣ ಶುಭಾ ಸಿಂಧನೂರು, ಡಿ.ಎಸ್. ನಾಗಭೂಷಣ ಇವರ ಯಾವ ದನಿಯನ್ನು ನಾನು ಮರೆತಿಲ್ಲ ಸಂಸ್ಕೃತ ವಾರ್ತೆಗಳು ಅರ್ಥವಾಗದಿದ್ದರೂ ಪ್ರವಾಚಕಃ, ಬಲದೇವಾನಂದ ಸಾಗರ ಅನ್ನುವುದನ್ನು ಬೆಳಗ್ಗೆ ಕೇಳಲೇಬೇಕು. ನಾವು ಮೊದಲ ಸಾಲನ್ನು ವಾರ್ತೆಗಳಲ್ಲಿ, ಪ್ರದೇಶ ಸಮಾಚಾರದಲ್ಲಿ

ಕೇಳಿಸಿಕೊಳ್ಳದಿದ್ದರು ಹೆಸರುಗಳನ್ನು ದನಿಯಿಂದಲೇ ಕಂಡು ಹಿಡಿದುಬಿಡುತ್ತಿದ್ದೆವು! ನನ್ನ ಎರಡನೆಯ ಅಣ್ಣ ಕಿಟ್ಟಿ ಆಕಾಶವಾಣಿಯಲ್ಲಿದ್ದನಲ್ಲ! 'ನಿಮ್ಮ ಮೆಚ್ಚಿನ ಚಿತ್ರಗೀತೆ'ಗಳಲ್ಲಿ ಆಗಾಗ ನಮ್ಮ ಹೆಸರುಗಳನ್ನು ಹಾಕಿಸಿ ರೋಮಾಂಚನ ಮೂಡಿಸುತ್ತಿದ್ದ! ಬರುತ್ತಿದ್ದ ಹಾಡುಗಳಲ್ಲಿ ಪ್ರತಿಯೊಂದು ಸಾಲು, ಬಿಜಿಎಂ ಎಲ್ಲವೂ ನಮಗೆ ಗೊತ್ತಿದೆ ಎನ್ನುವುದೇ ಹೆಮ್ಮೆಯ ಸಂಗತಿಯಾಗಿತ್ತು. 'ಬೆಸುಗೆ' ಹಾಡು ಬಂದಾಗ ಅದರಲ್ಲಿ ಬೆಸುಗೆ ಅನ್ನುವುದು ಎಷ್ಟು ಸಲ ಬರುತ್ತದೆ ಎಂದು ಲೆಕ್ಕ ಹಾಕುವುದು! ಕ್ರಿಕೆಟ್ ಕಾಮೆಂಟರಿಯನ್ನು ಕೇಳುವ ಹುಚ್ಚು ಮನೆಮಂದಿಗೆಲ್ಲ ಇತ್ತು. 'ಆಲ್ ದ ವೇ ಫಾರ್ ಫೋರ್ ರನ್ಸ್' ಎಂದರೆ ಖುಷಿಯಿಂದ ಒಟ್ಟಿಗೆ ಕುಣಿಯುತ್ತಿದ್ದೆವು.

ಮುಂದೆ ರೇಡಿಯೋದೊಂದಿಗೆ ಬದುಕು ಬೆಸೆದೇ ಹೋಯಿತು. ಗೀತಾರಾಧನಾ ಮುಗಿಯುವುದರಲ್ಲಿ ಎಷ್ಟು ಕೆಲಸವಾಗಿರಬೇಕು, ರೈತರಿಗೆ ಸಲಹೆ ಮುಗಿಯುವುದರಲ್ಲಿ ಸೀರೆ ಉಟ್ಟಿರಬೇಕು. ಭಾವಗೀತೆ ಒಂದು ಮುಗಿಯುವುದರಲ್ಲಿ ಸ್ನಾನ ಆಗಬೇಕು. ಎರಡನೆಯದಕ್ಕೆ ಕುಂಕುಮ, ವ್ಯಾನಿಟಿ ಬ್ಯಾಗ್ ರೆಡಿ ಇಟ್ಟಿರಬೇಕು. ಬೆಳಗ್ಗೆ ಏಳುಗಂಟೆಯ ಒಳಗೆ ಕೆಲಸಕ್ಕೆ ಹೊರಟಿರಬೇಕು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಕೇಳುತ್ತಿದ್ದ ಬಿಬಿಸಿ. ನಂತರದ ಚುನಾವಣೆಯಲ್ಲಿ ತುರ್ತು ಪರಿಸ್ಥಿತಿಯನ್ನು ಹೇರಿದ್ದ ಇಂದಿರಾಗಾಂಧಿಯ ಸೋಲನ್ನು ಮೊದಲು ಬಿತ್ತರಿಸಿದ ಬಿಬಿಸಿ. 'ಇಂದಿರಾ ಗಾಂಧಿ ಈಸ್ ಟ್ರೇಲಿಂಗ್ ಬಿಹೈಂಡ್' ಎನ್ನುವುದನ್ನು ಹೇಳಿಕೊಂಡು ಬೀದಿಯೆಲ್ಲ ಓಡಾಡಿದ್ದು - ಹೀಗೆ ಹಂಚಿಕೊಳ್ಳಲು ಸಾವಿರ ವಿಷಯಗಳಿದ್ದರೂ ನಿಲ್ಲಿಸುತ್ತಿದ್ದೇನೆ. ಯಾಕೆಂದರೆ ಇದು ಬರಿಯ ಮೇಟಿಕುರ್ಕೆಯ ನೆನಪುಗಳಾದ್ದರಿಂದ..

■

---

## ವಿಭಿನ್ನ ಉತ್ತರ

**ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಒಂದು ಸ್ಪರ್ಧೆ. 'ನೀವು ಮುಂದೇನಾಗುತ್ತೀರಿ?' ಎಂಬುದರ ಬಗ್ಗೆ ಬರೆಯಲು ಟೀಚರ್ ಹೇಳಿ ಎಲ್ಲರಿಗೂ ಬಿಳಿ ಹಾಳೆ ಹಂಚಿದರು. ಎಲ್ಲರೂ ಬರೆದು ಕೊಟ್ಟ ಮೇಲೆ ಟೀಚರ್ ಉತ್ತರಗಳನ್ನು ಪರಿಶೀಲಿಸಿದರು. ಮಾಮೂಲಿನಂತೆ ಇಂಜನಿಯರ್, ಪೈಲಟ್, ಲಾಯರ್, ರಾಜಕಾರಣಿ, ವೈದ್ಯ, ಆರ್ಕಿಟೆಕ್ಟ್.. ಹೀಗೆ ಮಾಮೂಲಿ ಉತ್ತರಗಳೇ ತುಂಬಿದ್ದವು.**

**ಆದರೆ ಒಬ್ಬ ಮಾತ್ರ ವಿಭಿನ್ನವಾಗಿ ಬರೆದಿದ್ದ. 'ನಾನು ಖುಷಿಯಿಂದ ಇರಲು ಬಯಸುತ್ತೇನೆ.'**

# ನಗುವಿಗೊಂದು ಆಯಾಮ... ಬೇಕೆ?

● **ಎಚ್. ಆರ್. ಹನುಮಂತ ರಾವ್**

**ವಿ. ಸೂ.:** *ಪ್ರೊ. ಅ. ರಾ. ಮಿತ್ರ ಅವರು ಸಾಕಷ್ಟು ದಿನಗಳ ಹಿಂದೆಯೇ ಹಾಸ್ಯ ಹಾಗು ನಗೆ ಬರಹಗಳ ಬಗ್ಗೆ ಅತ್ಯುಪಯುಕ್ತ ಹಾಗೂ ಸಮಯೋಚಿತ ಯೋಚನಾ ಲಹರಿಯನ್ನ ತಮ್ಮ ಅತ್ಯಮೂಲ್ಯ ವಿಚಾರ ಭಂಡಾರದಿಂದ ಹೊರಬಿಟ್ಟಿದ್ದುಂಟು. ಹಾಸ್ಯಕ್ಕೂ ಒಂದು ಪ್ರಾಕಾರವುಂಟೆ, ಇದ್ದರೆ ಅದರ ರೂಪರೇಷೆಗಳೇನು, ಇತಿಮಿತಿಗಳಿವೆಯೆ? ಈ ಪ್ರಾಕಾರಕ್ಕೇ ಒಂದು ವಿಶಿಷ್ಠ ಸ್ಥಾನ ಇತರ–ಕಲೆ, ವಾಣಿಜ್ಯ, ನಾಟಕ, ಸಂಗೀತ, ನೃತ್ಯ, ಕಾದಂಬರಿ, ವಿಜ್ಞಾನ, ಶಾಸ್ತ್ರ ಗ್ರಂಥಗಳು–ಇತ್ಯಾದಿ ವಿಷಯಗಳಿಗೆ ಅವುಗಳದೇ ನಿರ್ದಿಷ್ಠ ನೆಲೆ, ಚೌಕಟ್ಟು, ಹೆಜ್ಜೆಗುರುತುಗಳು, ಪ್ರತಿಭಾ ಪುರಸ್ಕಾರ, ಗೌರವಾದರಗಳಿರುವಂತೆ ಹಾಸ್ಯಕ್ಕೇಕಿಲ್ಲ? ಅಲ್ಲದೆ ಹಾಸ್ಯದ ಬಗ್ಗೆ ಅಭಿರುಚಿ ಹಿಂದೆ ಯಾವ ಮಟ್ಟದಲ್ಲಿತ್ತು, ಇಂದಿನ ಪರಿಸ್ಥಿತಿ ಹೇಗೆ, ಏನು ಎಂಬುದರ ಬಗ್ಗೆ ವಿಚಾರವಾದಿಗಳು ಏಕೆ ಯಾವ ಪ್ರಯತ್ನವನ್ನೂ ಮಾಡಿದ ಹಾಗೆ ತೋರುವುದಿಲ್ಲವಲ್ಲ? ಕಾರಣವೇನು? –ಎನ್ನುವ ಜಿಜ್ಞಾಸೆಯನ್ನು ಓದುಗರ ಮುಂದಿಟ್ಟಿದ್ದಾರೆ. ಈ ನನ್ನ ಬರಹದಲ್ಲಿ ಅವೆಲ್ಲದರ ಬಗ್ಗೆ ಚಿಂತಿಸಲು ಹೊರಟಿದ್ದಲ್ಲ, ಆದರೆ, ಹಾಸ್ಯಕ್ಕೆ ನಾವು–ಕನ್ನಡಿಗರು–ಸಾಮಾಜಿಕವಾಗಿ ಕೊಟ್ಟಿರುವ ವಿಶಿಷ್ಠ ಸ್ಥಾನವಾದರೂ ಎಂತಹುದು ಎನ್ನುವದರ ಬಗ್ಗೆ ಇದು ಲಘು ಹರಟೆಯಷ್ಟೆ ಹೊರತು ಚರ್ಚೆಗೆ ವೇದಿಕೆಯನ್ನಾಗಿ ಮಾಡುವ ಉದ್ದೇಶವಿಲ್ಲ. (*ಪ್ರಬಂಧ ಸಂಕಲನ–ಆರತಕ್ಷತೆ–"ಹಾಸ್ಯ–ಒಂದು ಚಿಂತನೆ").

**ಏನಿದರ ಗುಟ್ಟು, ಈ ಕೊರೆತಗಳನು ಬರೆಬರೆದನಿವ ಪ್ರಕಾಶಕನ ಕೈಲಿಟ್ಟು**
**ಅವನದರ ಕಂಡೋ ಕಾಣದೆಯೋ, ಟನ್ನುಟನ್ನಗಟ್ಟಲೆ ಪ್ರಿಂಟಿಸಿಯೆ ಬಿಟ್ಟ,**
**ಓದುಗನ ತಲೆ ತುಂಬ ಹುಳಗಳ ಬಿಟ್ಟ, *ಸೆರಿಬೆಲ್ಲಮನ ಪೂರ ಕೆಡಸಿಟ್ಟು**
**ಸುಮ್ಮಸುಮ್ಮಗೆಯೇ ಓದುಗನ ಸುಖಶಾಂತಿಗೆನಡವಟ್ಟು ನಗುನಗುತಲೇ ತಂದಿಟ್ಟ––.**
**––ಓ ಗುರುಗಾಂಪ, ಈ ಬರಹಗಳಲಿ ಪುರುಷಾರ್ಥವನೇನ ಕಂಡನಿವ ಕಡುಪಾಪಿ.** (*ಆಂಗ್ಲ ಭಾಷೆಯಲ್ಲಿ 'ಸೆರಿಬೆಲ್ಲಮ್'–ಮೆದುಳು)

ಅವರು : ಅಲ್ಲರೀ ನೀವು ಹೀಗೆ ಪುಟಗಟ್ಟಲೆ ಕೊರೆದು, ಓದುಗನ ಮಂಡೆಬಿಸಿ ಮಾಡುವದರಲ್ಲೇನು ಸುಖವ ಕಂಡಿರಿ? ಈ ಲೋಕದಲ್ಲಿಂದು ಅವನ ಬದುಕೇ ಬಲುಹೀನ, ಶೂನ್ಯವಾಗಿರುವಾಗ.

ಇವರು : ಬಡವರಿಗೆ ಮತ್ತೆ ರೇಷನ್ ಯುಗ–ಸ್ವಾತಂತ್ರ್ಯ ಕಾಲದಿಂದಲೂ–ಮಧ್ಯಮ ಜೀವಿಗಳಿಗೆ ಜೀವನವೇ ತ್ರಾಸ. ಇವರಿಗೆಲ್ಲ ಮಂಡೆಯೇ ಇಲ್ಲವೆಂದು ನಿಮ್ಮ ನಂಬಿಕೆಯೋ? ಇದ್ದರೂ ಬರೀ ಸೋರೆ ಬುರುಡೆಯೆನಿಸಿತೋ ನಿಮಗೆ?

ಅವರು : ಕೆಟ್ಟು ನಾರುವ ರಾಜಕೀಯದ ಹೊಲಸು, ಎಲ್ಲೆಲ್ಲೂ ಪುಂಡರ, ಭಂಡರ ಹಾವಳಿ, ದುರ್ನಾತ ಬೀರುವ ನಗರಗಳ, ದಟ್ಟಣೆಯ ಜನವಾಹನ ಸಮೂಹಗಳ ಮಧ್ಯೆ ಭಂಡಬಾಳು ಸವೆಸುವ ಖಂಡಜೀವಿಗಳ ಬದುಕೂ ಒಂದು ಬದುಕೇ? ಅಂಥಹುದರಲ್ಲಿ ಹೀಗೆ ನಿಮ್ಮ ಕೊರೆತಗಳನ್ನ ಓದಿ ಅರಗಿಸಿವುದೆಂತು?

ಆನಂದ ಪಡೆವದಂತೂ ಬರೀ ಕನಸೇ.

ಇವರು : ಹೀಗೆಲ್ಲ ಪೇಜುಗಟ್ಟಲೆ ಪ್ರಿಂಟಿಸಿ ಜನರ ನೆಮ್ಮದಿಗೆ ಸಂಚಕಾರ ತರುವ ಆ ನಿಮ್ಮ ಪ್ರಕಾಶಕರಿಗಾದರೂ ರವಷ್ಟು ಕರುಣೆ, ಅನುಕಂಪ ಬೇಡವೋ?

ಅ : ಬೇಡವೇ ಮತ್ತೆ? ಹೋಗಲೀ, ಇದು ವಾಲ್ಮೀಕಿ, ವ್ಯಾಸರ ಕಾಲವಂತೂ ಅಲ್ಲ, ವಾಲ್ಮೀಕಿಯ ಇಪ್ಪತ್ತುನಾಲ್ಕುಸಾವಿರ, ವ್ಯಾಸರ ಲಕ್ಷಕ್ಕೂ ಮೀರಿದ ಶ್ಲೋಕಗಳಷ್ಟನ್ನ ಅರಗಿಸಿಕೊಳ್ಳುವಂಥಹ ಜನರು ಇರುವರೇ ಇಂದು?

ಇ : ಆಚಾರ್ಯತ್ರ್ಯಯರೂ, ದಾಸವರೇಣ್ಯರೂ, ಅಲ್ಲಮ, ಬಾಭರ ಕಾಲವೂ ಅಲ್ಲ, ಪಂಪ, ರನ್ನ, ಜನ್ನರುಗಳ ಹಾಡು, ವಚನ, ಉಪದೇಶಗಳ ಓದಿ, ಮೋಕ್ಷಸಾಧನೆಗಾಗಿ ರಚಿಸಿದ...

ಬರಹಗಾರ : ಸ್ವಲ್ಪ ನನ್ನ ಮಾತು ಕೇಳೀ...

ಅ : ಅದೂ ಬೇಡರೀ, ಕುವೆಂಪು, ಬೇಂದ್ರೆ, ಅಡಿಗ, ಶಿವನಂಜಪ್ಪ ಇಲ್ಲವೇ....

ಬರಹಗಾರ : ಸ್ವಲ್ಪ ನಿಮ್ಮ ಮಾತಿಗೆ ಬ್ರೇಕ್ ಹಾಕಿ ನನ್ನ ಮಾತು ಕೇಳಿ?

ಇ : ಕಾರಂತ, ಗೊಕಾಕ, ಕೃಷ್ಣರಾಯರು, ತ್ರಿವೇಣಿ, ತರಾಸು, ಕಟ್ಟೀಮನಿಯಂಥಹವರ ಕೃತಿಗಳ ಓದಿ ಸಮಾಜದ ಬಗ್ಗೆ ಬೆಳಕು ಬೀಳುವದನ್ನಾದರೂ....

ಅ : ಅಥವಾ ರಾ.ಶಿ, ಬೀಚಿ, ದೀಕ್ಷಿತ, ನಾಡಿಗೇರ, ಲಾಂಗೂಲರು, ಅ.ರಾ.ಸೇ., ಕೇಫ, ಸುನಂದಮ್ಮ, ಮಿತ್ರ, ವೈದ್ಯ, ಪಾಪ ಪಾಂಡು ಪಿತೃ(!) ಮೂರ್ತಿ, ಬೇಲೂರ ಇತ್ಯಾದಿಗಳೆಲ್ಲರ ಹಾಸ್ಯ ಬರೆಹಗಳ..

ಮೂರನೆಯವರು(ಪ್ರವೇಶಿಸಿ) : ಹಾಸ್ಯವಂತೆ, ಹಾಸ್ಯ? ಅಂದೆಂಥರೀ ಈ ಕಾಲದಾಗ, ಯಾರ್ಗಪಾ ಪುರಸತ್ತು ಇರ್ತದೆ ಓದಿ ನಗಲಿಕ್ಕ? ನಾನಂತೂ ದಿನಪತ್ರಿಕೆ ಕೂಡ ತರ್ಸೋದು ನಿಲ್ಸಿ ಎಷ್ಟೋ ವರ್ಷಗಳಾಯ್ತು. ಅಂಥದ್ರಲ್ಲಿ ನಿಮ್ಮ ಕೊರೆತಗಳ–ಕ್ಷಮಿಸಿ, ನಾನಲ್ಲ, ಕೆಲವ್ರು ಹಾಗಂದಿದ್ದರೆ ನನ್ನ ತಪ್ಪಲ್ಲ,– ಓದೋಕ್ಕೆ ಟೈಂ ಎಲ್ಲಿರ್ತದೆ? 'ಕೊರವಂಜಿ'ಯಂಥಹವು ಇಂದು..

ಅ : ಜಾಸ್ತಿ ಮಾತಾಡಲಿಕ್ಕೂ ವೇಳೆ ಸಾಲದ, ಸೋಟೆ ಮೂತಿಯ ಹೆಂಡತಿಯ ಜೊತೆಗೆ ನಗುವುದೇ...

ಬರಹಗಾರ: ಇದೀಗ ನೀವುಗಳೇ ನನ್ಗೆ ಮಾತಾಡಕ್ಕೂ ಬಿಡದೆ ಕೊರೆಯವುದ ಸರೀನಾ?

ಮೂ : ನನ್ನ ಮೊಮ್ಮಗ ಎಮ್ಮೆನ್ಸಿ ಕಂಪ್ನೀಲಿ ಕೆಲ್ಸಕ್ಕೆ ಸೇರಿ ವರ್ಷವಾಗ್ತಾ ಬಂತು, ಅವ್ನ ಕೊರಗೇನಂದ್ರೆ ಮೊಬೈಲ್ನಲ್ಲಿ ಆಪ್ಸಂದೇಶಗ್ಳನ ನೋಡಕ್ಕೂ ಟೈಂಮೇ ಇಲ್ಲ ಅಂತಿರ್ತಾನೆ. ಹೆಂಡತಿ ಮಕ್ಳ ಜೊತೆ ಊಟ, ತಿಂಡಿ ಸಮಯ್ದಲ್ಲೂ ಅವ್ರುಗಳು ಮೊಬೈಲ್ನಲ್ಲೇ ಎಲ್ಲಾ ಮಾತು...

ಅ : ಹ, ಹ್ಹ, ಹಾ, ಅದೇನ್ಮಹಾ, ನನ್ಮೊಮ್ಮಗಳಿಗೆ ಮೂರು ತುಂಬ್ತಾ ಇದೇ, ಈಗ್ಲೇ ಅವಳಿಗೆ ಕೈನಲ್ಲಿ ಮೊಬೈಲ ಇಲ್ದಿದ್ರೆ ರಂಪಾನೇ ಮಾಡ್ತಾಳೆ, ಊಟ, ತಿಂಡಿ ತಿನ್ನೋಕು ಬಾಯೇ ಬಿಡಲ್ಲ,

ಮೂರನೆಯವರು : ಅಲ್ದೆ, ಬೀದಿನಾಗ ಕಳ್ಳೇಕಾಯ್ಮಾರೋ ಅಜ್ಜೀ, ಮನೆಕೆಲ್ಸಕ್ಕೆ ಬರೋ ಆಂಡಾಳೂ ಕೈಲೂ ಮೊಬೈಲ ಅಲಂಕರಿಸಿರ್ತದೆ.

ಇ : ನಮ್ಮತ್ತೆಗೆ ಈಗ ಎಂಬತ್ತೈದು ದಾಟಿದೆ, ಆದ್ರೇನು ಸ್ವಾಮಿ, ಟೀವಿನಾಗೆ ಸೀರಿಯಲ್ನೋಡೋವಾಗ ಕರೆಂಟ್ ಹೋದ್ರೆ ಇಲೆಕ್ಟ್ರಿಕ್ ಕಂಪ್ನೀಗೆ ಶಾಪ ಹಾಕೋದುಂಟು. ಈ ವಯಸ್ನಾಗೆ ಹಳೇಕಾಲದ ಅಜ್ಜಿಗಳು ರಾಮಾಯಣ, ಭಾಗವತ, ಪುರಾಣ ಅಂತ ದೇವಸ್ಥಾನದಲ್ಲಿ ಹರಿಕಥೆ ಕೇಳ್ತಿರೋವ್ರು, ಈಗ್ನವ್ರು ಮಾಡ್ರನ್ನೈಸಾಗಿದಾರೆ. ಸೀರಿಯಲ್ನಲ್ಬರೋ ಅತ್ತೆ, ಸೊಸೆ ಜಗಳಾನ ತಪ್ಪದೆ ಕನ್ನಡಕ ಹಾಕ್ಕಂಡ್ ಪಿಳಪಿಳೀ ನೋಡ್ತಾರೆ. ಮನಸ್ಸನಲ್ಲೇ ಸೊಸೆಗೆ ಹಿಡಿಹಿಡಿ ಶಾಪ ಹಾಕ್ತಾ ಕೊರಗ್ತಾರೆ.

ಅ : ಸೊಸೆ ಬಗ್ಗೆ ಆಗ್ಲೂ ಅದೇ, ಈಗ್ಲೂ ಅದೇ ಬಿಡಿ ಅತ್ಲಾಗೆ. ಏನಂತೀರಾ?

ಇ : ಹಾಗಾಗೋದಕ್ಕೆ ಅವಕಾಶವೇ ಇಲ್ಲ ಇಂದು. ಇಬ್ರೂ ಒಂದೇ ಕಡೇ ಇರೋದಪರೂಪಾನೇ. ಮೊಬೈಲ್ ಬಂದ್ಮೇಲಂತೂ..

ಮೂ : ಮುಂದೊಂದು ದಿನ ಮನೆ ನಾಯಿಗಳೂ ಕೂಡ ಬೊಗಳೋದ ಬಿಟ್ಟು ಮೊಬೈನಲ್ಲೇ ಬೀದಿನಾಯಿಗಳ ಜೊತೆ ಲವ್ಮಾಡೋದ್ನ ಕಲೀತಾವೋ, ಏನೋ?

ಅ : ಹ್ಹ, ಹ್ಹಾ, ಕ್ಷಮಿಸಿ, ಮಾತು ಎಲ್ಲೆಂದೆಲ್ಲೀಗೋ ಹೋಗ್ತಿದೆ. ಬರಹಗಾರನ ಕೊರೆತವೋ, ವಾಚಕನ ತಲೆಕೆರತವೋ. ನಮಗೆ ಯಾಕಾದ್ರೂ ಬೇಕ್ರಿ? ಅದೂ ಮೋದಿ,ಷಾ ತಂದಿರೋ ಸಿಎಎ ವಿಷಯದಾಗ ಜಾತಿ ಜಾತಿ ಅಂತ ಒಬ್ಬರಿಗೊಬ್ರು ಕಿತ್ತಾಡೋ ಪರಿಸ್ಥಿತೀಲೀ? ಮಾತ್ಗೆ ಹೇಳ್ತೀನಿ, ಬಂಗಾರದ್ಸರ ಮಾಡ್ಸಕ್ಕೆ ನಿನ್ನೆ ನಮ್ಮವ್ರು ಚಿನಿವಾರ್ನ ನೋಡಕ್ಕೆ..

ಮೂ. : ಅರ್ಥವಾಯ್ತು ಬಿಡಿ ಯಾರಂತ, ಅದೇ–ಹೆಂಡತೀ, ನನ್ಪ್ರಾಣ ನೀ ಯಾಕ ಹಿಂಡುತೀ–ಅಂತಾರಲ್ಲ ಆ ಬಗ್ಗೆ ತಾನೇ? ಎಲ್ಲಗ್ರೂ ಗೊತ್ತಿರದೇನೆಯಾ, ಮದ್ವೆಯಾದವ್ರ ಬಾಳೇ ಅದೆಲ್ಲ, ಮುಂದಿನ ಸಾರಿ ಡೈಮಂಡ್ ನಕ್ಲೇಸ್ಗೂ ಡಿಮಾಂಡ?

ಇ : ನಿಮ್ಮೀ ವಯಸ್ಸಲ್ಲಿ ಹೆಂಡ್ತೀಗೆ ಬಂಗಾರದ ಸರ ಅಂದ್ರೇ ನಿಮ್ಮ ಪೈಕಿ ಯರ್ದಾದ್ರೂ ಆಸ್ತಿ ಆಕೆಗೆ ಗಿಫ್ಟ? ಮಾವ್ನ ಕಡೆದೋ, ಹೇಗೋ...

ಬರಹಗಾರ: ಬರಹಕ್ಕೂ ಬಂಗಾರಕ್ಕೂ ಯಾತದ್ರೀ ಸಂಬಂಧ? ಈ ದಿನಾಗಳಲ್ಲಿ ದಿಗಂತಕ್ಕೇ ಹೋಗಿರೋ ರೇಟು? ನನ್ಮಾತ್ಗೆ ಸ್ವಲ್ಪ ಅವ್ಕಾಶ ಕೊಡಿ, ಅದಬಿಟ್ಟು ನಮ್ರಾಜ್ಕಾರ್ಣಿಗಳು ಪಾರ್ಟೀ ಇಂದ ಪಾರ್ಟೀಗೆ ಕೋತಿಗಳು ರೆಂಬೆಯಿಂದ ರೆಂಬೆಗೆ ಹಾರ್ತಾವಲ್ಲ ಆ ತರಾ ನೀವುಗಳೂ...

ಮೂ: ಹಾಗಂದ್ರ? ನಿಜ, ನಿಜ, ಮಾವಿನ್ಮರಕ್ಕೆ ಪ್ರದಕ್ಷಿಣೆ ಹಾಕಿದ್ರೆ ಮಾವಿನಕಾಯಿ ಉದರುತ್ಯೇ? ಗುರಿ ಇಟ್ಟು ಕಲ್ಲೆಸದ್ರೆ, ಆಗ ಫಲ ಸಿಗುತ್ತೆ, ಅದಕ್ಕೇರೀ ಈ ಬರೆತಗಳಗೆ ಕೊರೆತ ಅಂತ ಕರೆದಿದ್ದು?

ಅ : ಪುಸ್ತಕದ ಕೊರೆತಕ್ಕಿಂತ ನಮ್ರಾಜ್ಕಾರ್ಣಿಗಳು ಒಬ್ಬರ್ನೊಬ್ರ ಬೈಯೋದ್ರಲ್ಲೇ ಮಜಾ ತಗೋಬೋದು, ಅದೇನು ಭಾಷೆ, ಅದೇನು ವ್ಯಾಕರಣ

ಶುದ್ಧಿ, ಅವರ ಮಾತಿನ ಜಾಡು ಎಲ್ಲಿಂದೆಲ್ಲಿಗೇ, ಆ ಭಾಷಾ ಸೌಂದರ್ಯ.. ಸಂಸ್ಕೃತ ಪಂಡಿತ್ರೂ ತಲೆ ತಗ್ಗಿಸ್ಬೇಕು ಅವ್ರ ಛಂದಸ್ಸು, ಇವ್ರ ಮೆಟಫರ್, ಆಕ್ಸಿಮೊರಾನ್ ರಚ್ನೆಗಳ...

ಮೂ. : ನೀವು ಇನ್ನ ಛಂದಸ್ಸಿನ ಬಗ್ಗೆ ಕೋರೀಬ್ಯಾಡ್ರಪಾ, ಬಿಸಿ ತಲೇನಾಗ ಮಂಡ್ರಕಪ್ಪೆ ಬಿಟ್ಕಂಡ್ಹಾಗ್ಯತ್ತದೆ. ವಿಷ್ಯಕ್ಕೆ ಬನ್ನಿ, ಹೇಳೀಪ್ಪ ನಿಮ್ಹೆಂಡ್ತೀಗೆ ತಾನೆ ನೀವು ಬಂಗಾರದ ಸರಕೊಡಿಸಬೇಕಂತ ಹೇಳ್ತಿದ್ರಿ?

ಅ. ನೋ, ನೋ, ಹಾಗಲ್ಲ ನಾ ಹೇಳಿದ್ದು,

ಮೂ : ಮತ್ಯಾರಿಗಾದ್ರೂ,, ಓಹೋ, ಅರ್ಥವಾಯ್ತು. ಈ ವಯಸ್ನಲ್ಲಿ ನೀವು, ಅಬಬಬಬ್ಬ, ಬಲೇ ಘಾಟೀ ರೀ, ವಯಸ್ಸಾದ್ರೂ ಚಪಲ ಬಿಟ್ಟಿಲ್ಲಾಂತ ಕಾಣ್ಸತ್ತೆ...ಯಾರಪ್ಪ ಅಂಥವ್ರು?

ಅ : ಹಾಗಲ್ಲರೀ, ದೂರದ ಟಿಂಬಕ್ಟೂನಲ್ಲಿರೋ ನಮ್ಮಗಳಿಗೆ ಮಾಡ್ಸಕೋಬೇಕೂಂತ. ಇಲ್ಲಿ ರೇಟೇನು ಅಂತ್ಕೇಳ್ಳಿಕ್ಕಷ್ಟೇಯಾ. ನಾನು ನನ್ನ ಶ್ರೀಮತಿಗಾಗಿ....ಬಿಡಿ ದೂರದ ಮಾತು. ಆ ಶೋಕಿ ನನಗಿಲ್ಲ

ಮೂ : ಅಲ್ವೆ ಮತ್ತೆ, ಈ ವಯಸ್ನಲ್ಲಿ ಹೆಂಡ್ತಿಮೇಲೆ ಬಂಗಾರ ಹಾಕೋದ್, ಹ್ಹ, ಹ್ಹ ಹಾ, ಹಾ..

ಇ : ಬಂಗಾರದ ರೇಟು ಕೇಳಿ ಸ್ವಲ್ಪ ಹೊತ್ತು ತಲೇನೇ ಗಿರ್ ಅಂತೆ ಅವ್ಳಿಗೆ.

ಮೂ : ನಿಜಾ, ಡಾಲರ್ನ ರೇಟು ಇರಾಕಿರಾನ್ ಗಡಿ ದಾಟಿದೆ, ನಮ್ಕಾಲ್ದಲ್ಲಿ ಸವರನ್ಗೆ ಐನೂರೋ ಏನೋ ಇದ್ದಂಗ್ಯಾಪ್ಕ.

ಬರಹಗಾರ : ಕೊಂಕ್ಣ ಸುತ್ತಿ ಇನ್ನೆಲ್ಲೋ ಹೋಗ್ಬಾರ್ದ ಜಾಗಕ್ಕೆ ಹೋದಂತಾಯ್ತು, ನಿಮ್ಮ ಭಾಷೆ, ನಿಮ್ಮಾತು ಎಲ್ಲಿಂದೆಲ್ಲಿಗೇ...

ಅ : ಅಲ್ಲೇ ಇರೋದ ಕಾಣಪ್ಪ, ದೊಡ್ಡವ್ರು ಗಾದೆ ಮಾಡಿಲ್ವ– ಊಟಕ್ಕಿಲ್ಲದುಪ್ಪಿನ್ಕಾಯಿ ಏನಾಯ್ತು? ಅದ್ರ, ರುಚಿ ಕಮ್ಮಿ ಆದೀತೇ? ಈಗ ಹೇಳಿ, ನೀವು ಯಾತಕ್ಕೆ ಬರ್ಯೋದು. ಅದ್ರಿಂದೇನ್ ಸಾಧನೆ ಮಾಡ್ಲಿಕ್ ಹತ್ತೀರಿ?

ಇ: ಬರ್ಯೋದೆಷ್ಟೇನಾ ಬರೀಲಿ, ಅದು ಕಡೇಗೆ ಹೋಗೋದು ರದ್ದಿ ಪೇಪರ್ನವನ್ಗೆ. ಯಾರ್ಗೇನ್ ತ್ರಾಸ? ಆದ್ರೆ ಪ್ರಕಾಶಕನಿಗೆ ಕೊಟ್ಟು ಅವನೂ ಕಣ್ಮುಚ್ಚಿ ಪ್ರಿಂಟಿಸಿಬಿಡ್ತಾನಲ್ಲಾ ಕಡು ಪಾಪಿ, ಅವಾಗ್ಲೇ ನಮ್ಮ ಕುತ್ತಗೇಗೆ ಬರೋದು.

ಮೂ : ಅದೆಂಥಾ ತಪ್ಪು ಮಾಡೀರಪ್ಪ, ಕನ್ನಡದವ್ರ ಸಮಸ್ಯೆ ಅಂದ್ರೆ ಇದೇ. ಕುತ್ಗೆಗೆ ಅಲ್ಲಾ ಬರೋದು, ತಲೇಗೆ, ಅವ್ರು ಬರೆದಿದ್ದು ನಿಮ್ತಲೇಗೇನೇವೆಯೇ..

ಅ : ಸರ್ಯಾಗ ಹೇಳಿದ್ರಿ ಬಿಡಿ, ಅದ್ರಿಂದ ಒಂದ್ಮಾತ್ನಿಜಾತು, ಓದೋ ಎಲ್ಲಾ ಕುಳಗಳ್ಗೆ ತಲೆ ಇದೆ...

ಮೂ : ಒಳ್ಗೆ ಉಳಾಗಳಿದಾವೇ, ಆದ್ರಿಂದ ಕೊರತಗಳ್ನ ತಲೇಲಿ ತುಂಬ್ಕಂಡ್ರೆ ಏನಾಗ್ಬೋದ?

ಇ. : ತಲೆನೋವಿನ ಗುಳಿಗೆಗಳ್ಗೆ ಡಿಮ್ಯಾಂಡ್. ಆಲ್ದೆ ತಲೆ ಇರೋದು ಪ್ರೂವ್ಡ್ ಬಿಯಾಂಡ್ ಡೌಟ್. ಕ್ಯು.ಇ.ಡಿ. ಲ್ಯಾಟಿನ್ ಭಾಷೇಲಿ....

ಬರಹಗಾರ: ನನ್ಗೂ ಸ್ವಲ್ಪ ಮಾತಾಡಕ್ಕೆ ಬಿಡ್ರಪಾ, ನಾ ಏನ

ಹೇಳೋದಂದ್ರ..

ಅ : ಮತ್ತೆ ಷುರುವಾತಲ್ರೀ ಇಲ್ಲೂ ಕೊರೆತ? ಬರೆಯೋದಲ್ದೆ ಮಾತ್ನಾಗೂ? ಯಕಪ್ಪ ಹೀಗೆ ಗೋಳುಹುಯ್ಕಳ್ತೀದ. ನಮ್ಪಾಡ್ಗೆ ನಮ್ನ ಬಿಡ್ರಲಾ,

ಬರಹಗಾರ : ಹಾಗಲ್ಲ ರೀ, ಪ್ರೊಫೆಸರ್ ಮಿತ್ರ ಅವರು ಕೊರೆತದ ಬಗ್ಗೆನೇ ಒಂದು ಪ್ರಬಂಧ(*ನಾನೇಕೆ ಕೊರೆಯುತ್ತೇನೆ? ಸಂಕಲನ) ರಚಿಸಿರೋದು....ಅಲ್ಲೇನ ಹೇಳಿದಾರೋ ಗೊತ್ತಾ?

ಇ : ಆ ವಿದ್ವಾಂಸರನ್ನೇಕೆ ಇಲ್ಲಿ ಎಳೆದು ತರ್ತೀರಿ ಸ್ವಾಮಿ, ಅತ್ಲಾಗೆ ಅವರನ್ನ ಬಿಡಿ, ಎಲ್ಲರೂ ಅವರ್ಥಾಗೇ ಬರೀತಾರ?

ಅ : ಅವ್ರ ಜೀವನ್ದಾಗ ಎಂತೆಂತಾ ಕೊರೆತಾಗಳನ ನಿಭಾಯಸಿರ್ತಾರೋ, ಆ ಅನುಭವಗಳ್ನ ಬರ್ದು ನಿಮ್ಮನ್ನ ನಗ್ಸಿರೋದುಂಟಲ್ವ? ಮಾತ್ನಲ್ಲೂ ಕೂಡ.

ಬರಹಗಾರ : ಜನರಿಗೆ ಬರಹಗಳು ಬೇಕಿದೆಯೋ ಇಲ್ವೋ ಅನ್ನೋದ್ನ ತಿಳಿದೇ ಬರೀಬೇಕನ್ನೋದಾದ್ರೆ ಹಾಸ್ಯ ಲೇಖಕರಷ್ಟು ಜನ ತಮ್ಮ ಹಡಪವನ್ನ ಸಮುದ್ರದಾಚೆಗೆ ಒಯ್ಯಿರಿ ಅಂತಾರೆ ಮಿತ್ರ ಅವ್ರು ನಗತಾ. ದಾಂಕೇಮಿ ಚಪ್ತಾರಂಡೀ ಮೀರು?

ಮೂ. : ಸರ್ಯಾಗ ಹೇಳಿದ್ರು, ಅಷ್ಟಲ್ದೆ ಏನು?

ಬರಹಗಾರ : ಹಂಗಂದ್ರೆ, ನೋಡಿಪ್ಪ ನೀವೆಲ್ಲ ನಗಬೇಕಂದ್ರ ಬರ್ಯೋವ್ರೆಲ್ಲಾ ಪೆನ್ನು, ಹಾಳೆ ಬಿಟ್ಟು ಸರ್ಕಸ್ ಬಫೂನಾಗಬೇಕಾ? ಅಂಥದಕ್ಕೆಲ್ಲಾ ನಮ್ರಾಜ್ಕಾರ್ಣೀಗಳೇ ಸಾಕಂತ ನೀವೇ ಹೇಳಿದ್ರಲ್ವೋ? ಹಾಸ್ಯ ಪ್ರಬಂಧ ಹೇಗಿರಬೇಕನ್ನೋದ್ನ ಎಷ್ಟೋ ಸುಪ್ರಸಿದ್ಧರು ಪ್ರಬಂಧಗಳ್ನೆ ಬರೆದಿದಾರೆ. ವಿಸೀ ಅವ್ರು ದೋಸೆ ಬಗ್ಗೆನೇ ಸಂಶೋಧನೆ ರೀತೀಲಿ ಎಂಟು ಪುಟಗಳಷ್ಟು ವಿವರಿಸಿದಾರೆ ಗೊತ್ತಾ?

ಇ : ಆದ್ರಿಂದ ನೀವುಗಳೆಲ್ಲ ಸೇರಿ...

ಅ : ಪೆನ್ನ ಪೇಪರ್ನ ಬೀರುನಾಗ ಭದ್ರವಾಗಿಟ್ಟು.,

ಮೂ : ಎಸೆಯೋದು ಬೇಡ, ನೀರು ಕಲುಷಿತವಾಗ್ತೋದು.

ಬರಹಗಾರ : ಬರದಿದ್ದೆಲ್ಲಾ ಶ್ರೆಡಿಂಗ್ ಮೆಷಿನ್ನಗೆ ತಳ್ಳಿ ಅಂತಿರೇನೋ? ಹಾಗಾದ್ರೆ ಮುಂದೆ ನಾವೆಲ್ಲಾ ರದ್ದಿ ಪೇಪರ್ನಂಗಡಿಗಳಲ್ಲಿ ಮೂಟೆ ಹೊರೋದಕ್ಕಷ್ಟೆ ಲಾಯಕಂತೀರೇನೋ? ಆಗ್ಲಾದ್ರೂ ಒಬ್ಬಿಬ್ರು ನಮ್ನ ನೋಡಿ ನಗುವರೇನೋ? ಹೋಗ್ಲಿ ಬಿಡಿ, ಆದ್ರೆ, ನಗೆಬರಹಗಳಿಗೆ ಒಂದು ಆಯಾಮ, ಅದಕ್ಕ ತಕ್ಕ ಗೌರವ, ಅದೇ ಒಂದು ಶಾಖೆಯಾಗಿ ಇತರ ಪ್ರಾಕಾರಗಳ ನಡುವೆ ನಿಲ್ಲುವ ವಿಶಿಷ್ಠ ಸ್ಥಾನಮಾನ?

-----"ರೀ. ರೀ, ಅದೇನ್ ನಿದ್ದೇಲೆ ಏನೇನೋ ಒದರ್ಕಂಡಿದೀರಾ, ಎಂಟುಗಂಟೆ ಆದ್ರೂ ಏಳ್ದೆ ಇನ್ನೂ ಮಲಗಿ, ನಿದ್ದೇಲಿ ಬಾಯ್ಗೆ ಬಂದಿದ್ದು ಒದರ್ತೀರಿ, ವಯಸ್ಸಾದ್ರೂ ಬುದ್ಧಿ ಬರೋಲ್ಲ ನಿಮ್ಮಂತವರ್ಗೆ. ಬರ್ಯೋದ ಬಿಟ್ಟು ಏನಾದ್ರೂ ಒಳ್ಳೆ ಉದ್ಯೋಗ ಹಿಡೀಬಾರ್ದ? ಎಲ್ಲಾ ನನ್ ಹಣೆ ಬರಹಾ.

■

## STATEMENT OF OWNERSHIP OF APARANJI
## (KANNADA MONTHLY)
## (SEE RULES AND FORM IV)

| | | | |
|---|---|---|---|
| 1. | Place of Publication | : | Bangalore |
| 2. | Periodicity of Publication | : | Monthly |
| 3. | Printer's Name | : | V.R. Bharath |
| | Nationality | : | Indian |
| | Address | : | Ravi Graphics<br>53/8, 2nd Main Road,<br>Indl. Town, Rajajinagar<br>Bangalore - 560010 |
| 4. | Publisher's Name | : | Koravanji Aparanji Trust |
| | Address | : | No 36, 6th Main Road<br>Malleswaram<br>Bangalore - 560003 |
| 5. | Editor's Name | : | M. ShivaKumar |
| | Nationality | : | Indian |
| | Address | : | 36, 6th Main Road<br>Malleswaram<br>Bangalore - 560003 |
| 6. | Name and address of Individuals who own the Paper | : | Koravanji Aparanji Trust<br>36, 6th Main Road<br>Malleswaram<br>Bangalore - 560003 |

I M. Shivakumar hereby declare that the particulars given above are true to the best of my knowledge and belief.

1-3-2020 **M. ShivaKumar**
Bangalore (Signature of the Publisher)

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. BHARATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR
No. of Pages: **40+4** APARANJI KANNADA MONTHLY.